ಶಂಕರಗೌಡ ಬೆಟ್ಟದೂರ

JNANA001765

ಕರ್ನಾಟಕ ಲಲಿತಕಲಾ ಅಕಾಡೆಮಿ

# ಶಂಕರಗೌಡ ಬೆಟ್ಟದೂರ

SHANKARAGOWDA BETTADOOR

ಎಚ್. ಎ. ಅನಿಲ್‌ಕುಮಾರ್



# ಶಂಕರಗೌಡ ಬೆಟ್ಟದೂರ

ಎಚ್.ಎ. ಅನಿಲ್‌ಕುಮಾರ್

ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ. ಸಿ. ರಸ್ತೆ, ಬೆಂಗಳೂರು ೫೬೦ ೦೦೨

**SHANKARAGOWDA BETTADOOR**
A Biography by **H.A. Anilkumar,** He is an art historian, art critic and curator based in Bangalore. Published by **V. N. Mallikarjuna Swamy**, *Registrar,* Karnataka Lalithakala Academy, Kannada Bhavana, J.C. Road, Bangalore 560002. Phone: +91-80-22480297

Translated: **H.A. Anilkumar**

First Edition : 2007
Pages : 98
Price : 80=00

ಮೊದಲ ಮುದ್ರಣ : ೨೦೦೭
ಪುಟಗಳು : ೯೮
ಬೆಲೆ ರೂ. : ೮೦=೦೦

*ಪ್ರಧಾನ ಸಂಪಾದಕರು*
ವಿ.ಟಿ. ಕಾಳೆ
*ಅಧ್ಯಕ್ಷರು,* ಕರ್ನಾಟಕ ಲಲಿತಕಲಾ ಅಕಾಡೆಮಿ

*ಲೇಖಕರು*
ಎಚ್.ಎ. ಅನಿಲ್‌ಕುಮಾರ್

*ಪ್ರಕಾಶಕರು*
ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ
*ರಿಜಿಸ್ಟ್ರಾರ್,* ಕರ್ನಾಟಕ ಲಲಿತಕಲಾ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು ೫೬೦೦೦೨

*ಪ್ರಕಟಣಾ ಸಮಿತಿ:*
ಪುಂಡಲೀಕ ಕಲ್ಲಿಗನೂರ
ಡಾ. ಲಕ್ಷ್ಮೀದೇವಿ ಗವಾಯಿ
ಡಾ. ಸಿದ್ದಲಿಂಗಸ್ವಾಮಿ ಹಿರೇಮಠ

*ಮುಖಪುಟ ವಿನ್ಯಾಸ*
ಬಿ.ಎಲ್. ನರಸಿಂಹಮೂರ್ತಿ

*ಡಿ.ಟಿ.ಪಿ. ಹಾಗೂ ಮುದ್ರಣ:*
ಯಶಸ್ವಿ ಪ್ರಿಂಟ್ ಆಡ್ಸ್
#86, 2ನೇ ಅಡ್ಡ ರಸ್ತೆ, ಕಾವೇರಿಪುರ
ಕಾಮಾಕ್ಷಿಪಾಳ್ಯ, ಬೆಂಗಳೂರು 560079
© 23583831, Mobile 9448373577
Email:yaṣhasviads@yhaoo.co.in

# ಅಧ್ಯಕ್ಷರ ಮಾತು

ಕರ್ನಾಟಕ ಲಲಿತಕಲಾ ಅಕಾಡೆಮಿಯು ಕಳೆದ ನಲವತ್ತಮೂರು ವರುಷಗಳಿಂದ ಲಲಿತಕಲೆಗೆ ಸಂಬಂಧಿಸಿದ ಅನೇಕ ಗ್ರಂಥಗಳನ್ನು ಪ್ರಕಟಿಸುತ್ತಾ ಬಂದಿದೆ. ಈ ಎಲ್ಲ ಗ್ರಂಥಗಳೂ ಕರ್ನಾಟಕದ ಕಲಾಸಕ್ತರ ಹಾಗೂ ಕಲಾವಿದರ ಮೆಚ್ಚುಗೆಗಳಿಸಿರುತ್ತವೆ. ಈ ಕಲಾ ಸಾಹಿತ್ಯ ಪ್ರಕಟಣೆಯ ಜೊತೆಗೆ ಕರ್ನಾಟಕದ ಚಿತ್ರಕಲಾ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸಿದ ಅನೇಕ ಹಿರಿಯ ಕಲಾವಿದರ ಸಾಧನೆಗಳೊಂದಿಗೆ ಅವರ ಸಮಗ್ರ ಪರಿಚಯವನ್ನು ನೀಡುವ "ಕಲಾವಿದರ ಮಾಲೆ" ಪುಸ್ತಕಗಳನ್ನೂ ಅಕಾಡೆಮಿಯು ಪ್ರಕಟಿಸುತ್ತಾ ಬಂದಿದೆ. ಈ ಕಲಾವಿದರ ಮಾಲೆಯು ಆಯಾ ಕಲಾವಿದರ ಕಾಲಘಟ್ಟದಲ್ಲಿ ಬೆಳೆದು ಬಂದ ಕರ್ನಾಟಕದ ಕಲಾ ಇತಿಹಾಸವನ್ನೂ ಪರಿಚಯಿಸುತ್ತದೆ. ಕಲಾವಿದರ ಪರಿಚಯದ ಪುಸ್ತಕವನ್ನು ಕನ್ನಡ ಭಾಷೆಯಲ್ಲಿ ಅಲ್ಲದೇ ಇಂಗ್ಲೀಷ್ ಭಾಷೆಗೂ ಅನುವಾದಿಸಿ ಪ್ರಕಟಸಲಾಗುತ್ತದೆ. ಈ ಮೂಲಕ ನಮ್ಮ ಕಲಾವಿದರನ್ನು ಅವರ ಸಾಧನೆಯನ್ನೂ ಹೊರ ರಾಜ್ಯದ ಓದುಗರಿಗೆ ಪರಿಚಯಿಸಲಾಗುತ್ತದೆ.

ಈ ಹಿನ್ನೆಲೆಯಲ್ಲಿ ಪ್ರಸ್ತುತ ಪ್ರಕಟಿತ "ಶಂಕರಗೌಡ ಬೆಟ್ಟದೂರ" ಅವರ ಪುಸ್ತಕವು ಜೀವನ ಮತ್ತು ಸಾಧನೆಗಳನ್ನು ಪರಿಚಯಿಸುತ್ತದೆ. ಈ ಪುಸ್ತಕದ ಲೇಖಕರೂ ಸ್ವತಃ ಕಲಾವಿದರಾಗಿದ್ದು ಪ್ರಸ್ತುತ ಕಲಾವಿದ ಜೀವನ, ಸಾಧನೆಗಳನ್ನು ಅರಿತವರಾಗಿದ್ದರಿಂದ ಈ ಕಲಾವಿದರ ಸಮಗ್ರ ಪರಿಚಯವು ಈ ಪುಸ್ತಕವು ಓದುಗರ ಗಮನಕ್ಕೆ ತರುತ್ತದೆ ಎಂದು ಭಾವಿಸಲಾಗಿದೆ.

ಈ ಮೊದಲು ಕಿರು ಅಳತೆಯಲ್ಲಿ ಪ್ರಕಟವಾಗುತ್ತಿದ್ದ ಕಲಾವಿದರ ಪರಿಚಯದ ಪುಸ್ತಕಗಳನ್ನು ಈಗ ದೊಡ್ಡ ಅಳತೆಯಲ್ಲಿ ಸಿದ್ಧಪಡಿಸಿ ಓದುಗರ ಕೈಗಿತ್ತಿದ್ದೇವೆ. ಎಂದಿನಂತೆ ಕಲಾಸಕ್ತರು, ಕಲಾವಿದರು, ಕಲಾಇತಿಹಾಸ ಪ್ರೇಮಿಗಳೂ ಈ ಪುಸ್ತಕಗಳನ್ನು ಸ್ವಾಗತಿಸುತ್ತಾರೆಂದು ಆಶೀಸಲಾಗಿದೆ.

ಈ ಪುಸ್ತಕವನ್ನು ಮುದ್ರಿಸಿದ ಯಶಸ್ವಿ ಪ್ರಿಂಟ್ ಅರ್ಡ್ಸ್‌ನ ಮಾಲೀಕರಾದ ಶ್ರೀಮತಿ ವೀಣಾ ಎನ್. ಮೂರ್ತಿ ಅವರಿಗೂ ಪ್ರಕಟಿಸಿದ ಕರ್ನಾಟಕ ಲಲಿತಕಲಾ ಅಕಾಡೆಮಿಯ ರಿಜಿಸ್ಟ್ರಾರ್ ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೂ ಅಕಾಡೆಮಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ವಿ.ಟಿ. ಕಾಳೆ
*ಅಧ್ಯಕ್ಷರು*

# ಲೇಖಕರ ಮಾತು

ಶಂಕರಗೌಡ ಬೆಟ್ಟದೂರರ ಶಾಂತಿನಿಕೇತನದ ಕಲಾಭವನದಲ್ಲಿ ಚಿತ್ರಕಲೆಯನ್ನು ಕಲಿತ (೧೯೫೦ರ ದಶಕದಲ್ಲಿ) ನಾಲ್ಕು ದಶಕಗಳ ನಂತರ ನಾನಲ್ಲಿ ಕಲಾಇತಿಹಾಸವನ್ನು ಅಧ್ಯಯನ ಮಾಡಿದ್ದು (೧೯೯೦ರ ದಶಕದಲ್ಲಿ). ಅವರಿಗೆ ನಂದಲಾಲ ಬೋಸ್, ರಾಮ್‌ಕಿಂಕರ್ ಬೈಜ್, ಬಿನೋದ್ ಬಿಹಾರಿ ಮುಖರ್ಜಿ ಮುಂತಾದವರು ಗುರುಗಳಾಗಿದ್ದರು. ರವೀಂದ್ರನಾಥ್ ಟಾಗೋರರು ತೀರಿಕೊಂಡು ಮತ್ತು ಭಾರತಕ್ಕೆ ರಾಜಕೀಯ ಸ್ವಾತಂತ್ರ್ಯ ದೊರಕಿ ಒಂದು ದಶಕವಾಗಿತ್ತು. ಅಲ್ಲಿ ಪ್ರಾರಂಭಗೊಂಡ ಬೆಂಗಾಲದ ಆಧುನಿಕ ಕಲೆ ಆದಾಗಲೇ ತಮ್ಮ ಅಸಲಿ ಉದ್ದೇಶಕ್ಕೆ ವ್ಯತಿರಿಕ್ತವಾಗಿ ಕಾರ್ಯ ನಿವಹಿಸತೊಡಗಿತ್ತು. ಅಷ್ಟರಲ್ಲಾಗಲೇ ಮುಂಬಯಿಯ ಪ್ರೋಗ್ರೆಸಿವ್ ಕಲಾಗುಂಪು ಕಲೆಗೆ ನಗರೀಕರಣದ ಅನಿವಾರ್ಯತೆಯ ಬಗ್ಗೆ ಒತ್ತಿ ಹೇಳಿ ಒಂದು ದಶಕವೇ ಕಳೆದಿತ್ತು (೧೯೪೫-೪೭). ನನ್ನ ಅಧ್ಯಯನದ ಕಾಲಕ್ಕೆ ಕೆ.ಜಿ.ಸುಬ್ರಹ್ಮಣ್ಯನ್ ಮತ್ತು ಸೋಮನಾಥ್ ಹೋರ್ ಬೆಂಗಾಲ್ ಶಾಲೆಯ ಕೊನೆಯ ದಿಗ್ಗಜರುಗಳಾಗಿ ಇನ್ನೂ ಅಲ್ಲಿದ್ದರು. ಆದರೆ ೧೯೯೦ರಲ್ಲಿ ಶಾಂತಿನಿಕೇತನದ ಸುವರ್ಣಯುಗವು ಮುಗಿದುದರ ಸ್ಪಷ್ಟ ಸೂಚನೆ ಅಲ್ಲಿತ್ತು. ಮತ್ತದು ಅವರಿಗೂ ಗೊತ್ತಿತ್ತು. ಆ ಹಿನ್ನೆನಪಿನ ಊರುಗೋಲಿನ ಸಹಾಯದಿಂದ ಅವರುಗಳು ಅಲ್ಲಿ ಓಡಾಡುತ್ತಿದ್ದರೆಂದು ಕಾಣುತ್ತದೆ. ಈಗ ಕೆ.ಜಿ.ಎಸ್. ಅಲ್ಲಿಲ್ಲ. ಬರೋಡ-ಮುಂಬಯಿಗಳಲ್ಲಿದ್ದಾರೆ. ಸೋಮನಾಥ್ ಹೋರ್ ಈಗ ನಮ್ಮೊಂದಿಗಿಲ್ಲ.

ಶಾಂತಿನಿಕೇತನದ ಸಂತಾಲಿ ಬುಡಕಟ್ಟಿನ ಜನ ಶುದ್ಧತೆಗೆ ಅತ್ಯಂತ ಹೆಚ್ಚಿನ ಮಹತ್ವ ನೀಡಿದವರು. ಕಲಾಭವನದ ಕ್ಯಾಂಪಸನ್ನು ಅಂದಿನಿಂದಲೂ ಶುದ್ಧಗೊಳಿಸುತ್ತಿದ್ದವರೂ ಅವರುಗಳೇ. ಇಂದಿಗೂ ಅವರೇ ಅದನ್ನು ಬಹು ಅರ್ಥಗಳಲ್ಲಿ ಸ್ವಚ್ಛವಾಗಿಡುತ್ತಿರುವವರು. ಅಲ್ಲಿನ ಕಲಾವಿದ ವಾಷ್ ತಂತ್ರದಲ್ಲಿ, ಜಲವರ್ಣಗಳಲ್ಲಿ, ಶಿಲ್ಪಗಳಲ್ಲಿ ಅತ್ಯಂತ ಹೆಚ್ಚು ಚಿತ್ರಿತ ವ್ಯಕ್ತಿಗಳೂ ಈ ಸಂತಾಲಿಗಳೇ. ಕಲಾವಿದ್ಯಾರ್ಥಿಗಳೊಂದಿಗೆ ೧೯೪೦ರ ದಶಕದಲ್ಲೇ ರಾಮ್‌ಕಿಂಕರ್ ಬೈಜ್ ನಿರ್ಮಿಸಿದ 'ಬ್ಲಾಕ್ ಹೌಸ್' ಅನ್ನು (ವಿದ್ಯಾರ್ಥಿನಿಲಯದ ಒಂದು ಭಾಗ) ಸೃಷ್ಟಿಸಿದ್ದೂ ಸಂತಾಲಿಗಳ ಸ್ವಚ್ಛ ಮನೆಗಳ ವಿನ್ಯಾಸದ ಮೂಲಮಾದರಿಗಳನ್ನು ಆಧರಿಸಿಯೇ. ಮಣ್ಣಿನ ಮನೆಗಳು ಚಳಿಗಾಲದಲ್ಲಿ ಬೆಚ್ಚಗೆ ಹಾಗೂ ಬಿಸಿಲಗಾಲಕ್ಕೆ ತಣ್ಣಗಿರುವ ಸಾಮರ್ಥ್ಯವುಳ್ಳದ್ದಾಗಿದ್ದವು.

ನಾನು ಅಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲಕ್ಕೆ ಶಂಕರಗೌಡ ಬೆಟ್ಟದೂರರ ಬಗ್ಗೆ ನನಗೆ ತಿಳಿದಿರಲಿಲ್ಲ. ಕರ್ನಾಟಕದ ಕಲಾಬರಹಗಾರರಾಗಲಿ, ಅಲ್ಲಿನ ಕಲಾಭವನದವರಾಗಲಿ--ಇಬ್ಬರೂ ಇವರನ್ನು ಕುರಿತು ಏನೂ ಹೇಳಲಿಲ್ಲ. ಸಂತಾಲಿ ಜನರಂತೆ ಸ್ವಚ್ಛ, ಮನೋನಿಷ್ಠ ಬೇಸಾಯ, ವೈದ್ಯವೃತ್ತಿ ಹಾಗೂ ಚಿತ್ರಕಲೆಯಲ್ಲಿ , ತಮ್ಮ ಊರಿನಲ್ಲಿ ಕಳೆದುಹೋಗಿದ್ದರು ಗೌಡರು.

ಕಳೆದೊಂದತ್ತು ವರ್ಷದ ಹಿಂದೆ ಅವರ ಪರಿಚಯವಾಗಿದ್ದು ಇಳಕಲ್ಲಿನಲ್ಲಿ. ಮೊದಲಿಗೆ ಅವರ ಶಿಸ್ತಿಗೂ, ಕಲಾವಿದ ಬಳಗದ ಅಶಿಸ್ತಿಗೂ ಅಜಗಜಾಂತರ ವ್ಯತ್ಯಾಸವಿದೆ ಎನ್ನಿಸಿತ್ತು. ಆದ್ದರಿಂದಲೇ ಅವರು ಇಂದಿಗೂ ತಮ್ಮ ಯೋಗ್ಯಾನುಸಾರವಾದ ಪ್ರಸಿದ್ಧಿಗೆ ಬರಲೇ ಇಲ್ಲವೇನೋ. ಸುಮಾರು ನಾಲ್ಕು ದಶಗಳ ಕಾಲ ಗೌಡರು ಬೆಟ್ಟದೂರು, ರಾಯಚೂರಿನಲ್ಲಿ ಕಳೆದುಹೋಗಿದ್ದರು. ಎರಡು ವರ್ಷದ ಹಿಂದೆ ಬೆಂಗಳೂರಿನ ಚಿತ್ರಕಲಾಪರಿಷತ್ತಿನಲ್ಲಿ ತಮ್ಮ

ಸಮಗ್ರ ಕೃತಿಗಳ ಒಂದು ಸಮ್ಯಕ್–ಪ್ರದರ್ಶನ (ರೆಟ್ರೊಸ್ಪೆಕ್ಷನ್) ತಾವೇ ಏರ್ಪಡಿಸಿಕೊಂಡಿದ್ದರು, ಯುವ ಕಲಾವಿದನೊಬ್ಬ ತನ್ನ ಮೊದಲ ಪ್ರದರ್ಶನವನ್ನೇರ್ಪಡಿಸಿಕೊಳ್ಳುವ ಉಮೇದಿನಿಂದ. ಅಲ್ಲಿನ ಪ್ರದರ್ಶನ ವ್ಯವಸ್ಥೆ, ಚಿತ್ರಣ ರೀತಿ, ಬಂದವರೊಂದಿಗಿನ ಒಡನಾಟ– ಇವೆಲ್ಲ ನನಗೆ ಶಾಂತಿನಿಕೇತನ ಕಲಾಭವನದ ನೆನಪುಗಳನ್ನು, ಬೆಂಗಳೂರಿನಲ್ಲಿ ತರಿಸಿತ್ತು. ನಾನು ಕಂಡಂತಹುದಲ್ಲದ, ಆದರೆ ಶಂಕರಗೌಡರು ತಮ್ಮ ವಿದ್ಯಾರ್ಥಿದೆಸೆಯಲ್ಲಿ ಮಾತ್ರ ಕಂಡಂತಹ ಕಲಾಭವನದ ವಾತಾವರಣ ಆ ಗ್ಯಾಲರಿಯಲ್ಲಿತ್ತು. ಇದನ್ನೇ ನಾವು ನಾಸ್ಟಾಲ್ಜಿಯ ಅನ್ನಬಹುದೆ? ಸಮಗ್ರ ಭಾರತೀಯ ಆಧುನಿಕ, ಆಧುನಿಕೋತ್ತರ ದೃಶ್ಯಕಲಾ ಶಾಲೆಗಳ ಮೂಲಧಾತು ಈ ಹಿನ್ನೆನಪು, ನಾಸ್ಟಾಲ್ಜಿಯ. ಅದಕ್ಕೇ ತಾತ್ವಿಕ ಸ್ವರೂಪವನ್ನು ಒದಗಿಸಿ, "ದ ಲಿವಿಂಗ್ ಟ್ರೆಡಿಷನ್" (ಜೀವಂತ ಸಂಪ್ರದಾಯ) ಎಂದು ಪುಸ್ತಕ ಬರೆದರು ಕೆ.ಜಿ.ಸುಬ್ರಹ್ಮಣ್ಯನ್. ಹಿನ್ನೆನಪಿನ ಹೊರೆಯ ಭಾರದ ನೇತ್ಯಾತ್ಮಕ ಅಂಶಗಳನ್ನು ಒಪ್ಪದಿದ್ದರೂ ಈ ವಾದದ ಇತ್ಯಾತ್ಮಕ ಗುಣವೇ ಬೆಂಗಾಲ್ ಶಾಲೆಯನ್ನು ಪ್ರೊಗ್ರೆಸಿವ್ ಶಾಲೆಯಿಂದ ಭಿನ್ನಗೊಳಿಸುವುದು. ಇದೇ ಕಾರಣಕ್ಕೇ ಬೆಂಗಾಲ್ ಸಂಸ್ಕೃತಿಯು ಕನ್ನಡ ಸಂಸ್ಕೃತಿಯ ಗಮನವನ್ನು ಒಂದು ಶತಮಾನದಿಂದಲೂ, ಒಂದು ಹೆಜಿಮೋನಿಕ್ ಶ್ರೇಣೀಕರಣದಲ್ಲಿ ಹಿಡಿದಿರಿಸಿರುವುದು.

ಶಂಕರಗೌಡರ ಬಗ್ಗೆ ಬರೆವಾಗ, ಕನ್ನಡದಲ್ಲಿ ಕಲಾವಿದರ ಬಗ್ಗೆ ಬರೆಯಲು ಸಿದ್ಧವಿರುವ 'ಬರಹದ ರೂಪ'ದ ಬಗ್ಗೆಯೇ ಆತಂಕವಿತ್ತು. ಈ ಆತಂಕವು ಇಲ್ಲಿನ ಬರಹದಾದ್ಯಂತ ಹರಡಿಕೊಂಡಿದೆ ಕೂಡ. ಮೊನೊಗ್ರಾಫ್ ರೀತಿಯಲ್ಲಿ ಒಬ್ಬ ಕಲಾವಿದನ/ಳ ಹುಟ್ಟು, ಬಡತನ, ಆರ್ಥಿಕ, ಸಾಮಾಜಿಕ ಕಷ್ಟವನ್ನು ಗೆದ್ದ ಹಿರೋಯಿಸಂ, ಅವರುಗಳ ಕಲಾಪ್ರದರ್ಶನಗಳು, ಪಡೆದ ಪ್ರಶಸ್ತಿಗಳು, ಅವರ ಕೃತಿಗಳನ್ನು ಜನ (ಅದರಲ್ಲೂ ಪರದೇಶಿಯರು) ಕೊಂಡುಕೊಂಡದ್ದು, ಅವರುಗಳು ತಮ್ಮ ಪ್ರತಿಭೆಯ ಮುಖಾಂತರ ಇಷ್ಟೆಲ್ಲ ಸಾಮಾಜಿಕವಾಗಿ ಗುರ್ತಿಸಿಕೊಂಡರೂ ಅವರ ಮೌನವಾದ ಸಾವು, ಸರ್ಕಾರದ ನಿರಾಸಕ್ತಿ ಹಾಗೂ ಜನಪ್ರಿಯ ಪ್ರಕಾರಗಳ ಗದ್ದಲದಿಂದಾಗಿ ಅವರುಗಳು ಎಲೆಮರೆಯ ಕಾಯಿಗಳಾಗಿಯೇ ಉಳಿದುಬಿಟ್ಟಿರುವುದು ಎಂದು ಬರೆದುಬಿಡುವುದು ಇಲ್ಲಿಯವರೆಗೂ ಬಹುಪಾಲು ರೂಢಿಯಲ್ಲಿರುವ ಕ್ರಮ ಕೂಡ. ಇಂತಹವುಗಳನ್ನು ಒಂದಿಪ್ಪತ್ತು ಪುಟದಲ್ಲಿ ಬರೆದುಬಿಡುವುದು ಒಂದರ್ಥದಲ್ಲಿ ಕಲಾವಿದರಿಗೆ, ಕಲಾರಂಗಕ್ಕೆ ಅಪಚಾರ ಮಾಡಿದಂತೆಯೂ ಹೌದು. ಕನ್ನಡದ ಮುಖ್ಯವಾಹಿನಿ ಸಾಹಿತ್ಯದಲ್ಲಿ ಇಂತಹುದೇ ಬರವಣಿಗೆಯ ಒಂದು ಕ್ರಮವು ಚಾಲ್ತಿಯಲ್ಲಿದೆ. ಆದರೆ ಅದು ಒಂದು ವಿಶೇಷ ಪ್ರಶಸ್ತಿ ಪ್ರಧಾನದ ಕಾಲಕ್ಕೆ ಭಿನ್ನವತ್ತಳೆ ರೂಪದ ಬ್ರೋಷರ್‌ಗಾಗಿ ಬಳಸಿಕೊಳ್ಳಲಾಗುತ್ತದೆ. ಸಾಹಿತಿಯೊಬ್ಬನ/ಳ ಕೃತಿಯ ಗಂಭೀರ ಚರ್ಚೆಯ ಕಾಲಕ್ಕೆ ಇಂತಹ ಬರವಣಿಗೆಯು ನಿಷಿದ್ಧ. ಕಲಾವಿದರನ್ನು ಕುರಿತು ಮೊನೊಗ್ರಾಫ್‌ಗಳನ್ನು ಬರೆದವರ ಮೂಲ ಮಾದರಿ ಎಲ್ಲಿಯದೆಂದು ತಿಳಿಯಿತಲ್ಲವೆ? ಅದನ್ನು ತಪ್ಪಿಸಿಕೊಳ್ಳುವುದೂ ಅಷ್ಟೇನೂ ಸುಲಭವಲ್ಲ. ಆದರೆ ತಪ್ಪಿಸಿಕೊಳ್ಳದಿದ್ದರೆ ಕ್ಲೀಷೆಯ ಶಾಪ ಅನಿವಾರ್ಯ.

'ಕಲೆಗಿಂತ ಕಲಾವಿದನೇ ಮುಖ್ಯ' ಎಂಬುದು ಇಂತಹ ಮೊನೊಗ್ರಾಫ್‌ಗಳ ಮೂಲ, ಮುಗ್ಧ ಆಶಯ. ಶಂಕರಗೌಡರನ್ನು ಕುರಿತು ಬರೆವ ಕಾಲಕ್ಕೆ ನನ್ನನ್ನು ಕಾಡಿಸಿದ ವಿಷಯವಿದು. ಜೊತೆಗೆ ಮೊನೊಗ್ರಾಫ್–ಮಾದರಿಗಳಲ್ಲಿ ಕಲಾವಿದನ ಬಲಹೀನತೆಯ, ಮನುಷ್ಯ ಸಂಬಂಧಗಳ ಉಪದ್ವಾಪಿಗಳ, ಹಾಗೂ ಸಹ ಕಲಾವಿದರು – ಕಲಾಚಳುವಳಿಗಳೊಂದಿಗಿನ ರಾಗದ್ವೇಷಗಳ ವ್ಯವಹಾರಗಳ ಬಗ್ಗೆ ಗಾಢ ಮೌನವಿದೆ. ಒಂದರ್ಥದಲ್ಲಿ ದೃಶ್ಯಕಲಾವಿದರ ಮೊನೊಗ್ರಾಫಿಕ್ ಬರಹ ಪ್ರಕಾರವು ವಸಾಹತುಶಾಹಿ ಬರಹ ಮಾದರಿಯಾದ 'ಎವಲ್ಯೂಷನಿಸ್ಟ್' ಮಾದರಿಯಲ್ಲಿ ಸಾಂಸ್ಥೀಕರಣಗೊಂಡುಬಿಟ್ಟಿದೆ ಕೂಡ.

ಗೌಡರನ್ನು ಕುರಿತು ಬರೆವಾಗ ಬರವಣಿಗೆಯ ಈ ಸಾಂಸ್ಥೀಕರಣದೊಳಗಿನಿಂದಲೇ ಅದರ ಸಮಸ್ಯೆಗಳನ್ನು ಮನಸ್ಸಿನಲ್ಲಿರಿಸಿಕೊಂಡೇ ಈ ಮೊನೊಗ್ರಾಫ್ ಅನ್ನು ಬರೆಯಲು ಪ್ರಯತ್ನಿಸಿದ್ದೇನೆ. ಕರ್ನಾಟಕದ ದೃಶ್ಯಕಲೆಯ

ಚರಿತ್ರೆಯು ಗೌಡರನ್ನು ನಿರಾಕರಿಸಿದುದಕ್ಕಿಂತಲೂ (ಕಲಾವಿದರಾದ ನಿಕೊಲಸ್ ಹಾಗೂ ಸ್ವೆಟಸ್ಲಾವ್ ರೋರಿಕ್‌ರನ್ನು ನಿರಾಕರಿಸಿದಂತೆ) ಶಾಂತಿನಿಕೇತನದ ಕಲಾಚರಿತ್ರೆಯ ಹಾಗೆ ಮಾಡಿದ್ದು ಹೆಚ್ಚು ಗಮನೀಯ. ಅಂದರೆ ಬೆಂಗಾಲಶಾಲೆಯ ಕಲಾಚರಿತ್ರೆಯಲ್ಲಿ, ಬೆಂಗಾಲ ಭೂಪ್ರದೇಶದಿಂದ, ಸಂಸ್ಕಾರದಿಂದ ಹೊರಗೆ ನೆಲೆಸಿ ಕೃತಿ ರಚಿಸಿದವರ ಬಗ್ಗೆ ಗಾಢ ಮೌನವನ್ನು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಳ್ಳಲಾಗಿದೆ. ಕರ್ನಾಟಕದ ಕಲಾವಿದರ ಬಗೆಗಿನ ಕನ್ನಡ ಸಂಸ್ಕೃತಿಯ ಮೌನವು ಮುಗ್ಧತೆಯದ್ದಾದರೆ, ಬೆಂಗಾಲದವರ ಮೌನವು ಹೆಚ್ಚು ರಾಜಕೀಯ ಉದ್ದೇಶ ಹಾಗೂ ಶಕ್ತಿ ಹೊಂದಿರುವಂತಹದ್ದು.

ಗೌಡರನ್ನು ಕುರಿತ ಕರ್ನಾಟಕ ಕಲಾವಲಯದ ಮುಖ್ಯ ಓದುವಿಕೆ ಇದು: "ಅವರು ನಿರಂತರವಾಗಿ, ಕಲೆದೈವತ್ತು ವರ್ಷದಿಂದಲೂ ಕೃತಿ ರಚಿಸುತ್ತ ಬರಲಿಲ್ಲ. ೧೯೫೦ರ ದಶಕದ ಅವರ ವಿದ್ಯಾರ್ಥಿ ಜೀವನದ ಅಸುಪಾಸಿನ ಕೃತಿಗಳೇ ಅವರ ಅತ್ಯುತ್ತಮ ಘಟ್ಟ, ಅವರು ರಾಜಕಾರಣ, ವೈದ್ಯವೃತ್ತಿ ಹಾಗೂ ರೈತ ಚಳುವಳಿಗಳಲ್ಲಿ ಕಳೆದುಹೋಗಿದ್ದರು", ಇತ್ಯಾದಿ. ಅವರನ್ನು ಬಲ್ಲವರಲ್ಲಿ ಕೆಲವರು ಮಾತ್ರ ಹೇಳುವ ಮಾತಿದು. ಆದರೆ ಹಾಗೆ ಹೇಳುವವರೆಲ್ಲ ಕಲಾವಿದರೇ! ಈ 'ಎವಲ್ಯೂಷನಿಷ್ಟ್' ವಿನ್ಯಾಸದ ಚಿಂತನೆಯ ಪ್ರಕಾರ ಒಬ್ಬ ಕಲಾವಿದ (ಶಾಸ್ತ್ರೀಯ ಸಂಗೀತಕಾರನಂತೆ) (ಅ) ಕಾಲಕ್ರಮದಲ್ಲಿ ನಿರಂತರವಾಗಿ ಕೃತಿ ರಚಿಸುತ್ತಿರಬೇಕು, (ಆ) ಕಲೆಯ ಸೃಷ್ಟಿಯನ್ನು ಬಿಟ್ಟು ಬೇರೊಂದು ವೃತ್ತಿಯಲ್ಲಿ ತೊಡಗಿಸಿಕೊಳ್ಳುವಂತಿಲ್ಲ (ಇ) ಸುದೀರ್ಘ ಕಾಲ ಕೃತಿರಚಿಸುವ ತುರ್ತಿದೆ (ಈ) ವಯಸ್ಸಿಗೂ ಪ್ರೌಢತೆಗೂ ನೇರ ಸಂಬಂಧವಿದ್ದು, ವಯಸ್ಸು–ಪ್ರೌಢತೆ ಎರಡೂ ಹೆಚ್ಚಾದ ಮೇಲೇ ಕಲಾವಿದನೊಬ್ಬ ಪ್ರಶಸ್ತಿಗೆ ಭಾಜನರಾಗಬೇಕಷ್ಟೆ. ಇಲ್ಲಿ ರೊಮ್ಯಾಂಟಿಕ್ ಕಲ್ಪನೆಯ ಅತಿವೃಷ್ಟಿಯನ್ನು ಗಮನಿಸಿ. ಕಲಾವಿದ ಶಂಕರಗೌಡನ ವ್ಯಕ್ತಿತ್ವವನ್ನು ಈ ಪ್ರಶ್ನೆಗಳೊಳಗಿನ ಖಾಲಿ ಸ್ಥಳಗಳಲ್ಲಿ ಹುಡುಕಬೇಕಾಗುತ್ತದೆ. ಇಂತಹ ಚಿಂತನೆಗಳನ್ನು ಹುಟ್ಟುಹಾಕುವ ಕಲಾವಿದ ಸಮೂಹಕ್ಕೇ ತಿಳಿದಿರುವ ಒಂದಷ್ಟು ವಿಷಯ, ಫ್ಯಾಕ್ಟ್‌ಗಳನ್ನು ಪರಿಗಣಿಸಿ, ಹೇಗೆ ಅವರ 'ನಂಬಿಕೆ' ಹಾಗೂ 'ವಿಷಯ ಸಂಗ್ರಹಣೆ'ಯು ಪರಸ್ಪರ ವೈರುಧ್ಯಗೊಳ್ಳುತ್ತವೆಂಬುದನ್ನು ಗ್ರಹಿಸಬೇಕಾಗುತ್ತದೆ.

ಕೆ. ವೆಂಕಟಪ್ಪ ಮತ್ತು ಲಿಯೊನಾರ್ಡೊ–ಡ–ವಿಂಚಿ ತಮ್ಮ ಜೀವನದ ಕೊನೆಯ ವರ್ಷಗಳಲ್ಲಿ ಕಲಾಕೃತಿ ರಚಿಸುವುದನ್ನು ನಿಲ್ಲಿಸಿಬಿಟ್ಟಿದ್ದರು. ಇಪ್ಪತ್ತೇಳನೇ ವಯಸ್ಸಿನಲ್ಲಿ ಕ್ರಾಂತಿಕಾರಕ 'ರೆಡಿಮೇಡ್' ಕಮೋಡನ್ನು ಕಲಾಕೃತಿಯಾಗಿಸಿದ ಡುಶಾಂಪ್, ಆ ನಂತರ ಇಪ್ಪತೇಳು ವರ್ಷ ಕೃತಿ ರಚಿಸಲಿಲ್ಲ. ದೊರೆಯೊಬ್ಬನಿಗೆ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ್ದ ಡ–ವಿಂಚಿ ತಾನೊಬ್ಬ ವಿಜ್ಞಾನಿ, ವೈದ್ಯ, ಅಭಿಯಂತರ ಇತ್ಯಾದಿಯೆಂದೆಲ್ಲ ಹೇಳಿಕೊಂಡು ನಂತರ "ನಾನು ಚಿತ್ರರಚನೆಯನ್ನೂ ಮಾಡಬಲ್ಲೆ" ಎಂದು ಹೇಳಿಕೊಂಡಿದ್ದಾನೆ. ತನ್ನ ಸಾಹಿತ್ಯಕ್ಕೆ ನೋಬೆಲ್ ಪ್ರಶಸ್ತಿ ದೊರೆಕಿದ ಮೇಲೆ, ೬೭ನೇ ವಯಸ್ಸಿನಲ್ಲಿ ರವೀಂದ್ರನಾಥ್ ಠಾಗೂರ್ ಚಿತ್ರಕಲೆಯನ್ನು ಪ್ರಾರಂಭಿಸಿದ್ದು, ಐವತ್ತರ ನಂತರದ ವಯಸ್ಸಿನಲ್ಲಿ ಎಂ.ಕೆ. ಇಂದಿರಾ ಕಾದಂಬರಿ ಸೃಷ್ಟಿಯನ್ನೂ ಪ್ರಾರಂಭಿಸಿದ್ದಿದೆ. ಅಮೃತ ಶೇರ್‌ಗಿಲ್ ತನ್ನ ಇಪ್ಪತ್ತೇಳನೇ ವಯಸ್ಸಿನಲ್ಲಿ ಹಾಗೂ ವಿನ್ಸೆಂಟ್ ವ್ಯಾನ್‌ಗೋ ತನ್ನ ಮೂವತ್ತೇಳನೇ ವಯಸ್ಸಿಗೆ ತಮ್ಮ ಅತ್ಯುತ್ತಮ್ಮ, ಪ್ರೌಢ ಕೃತಿಗಳನ್ನು ಹಾಗೂ ತಮ್ಮ ಎಲ್ಲ ಕೃತಿಗಳನ್ನೂ ಸೃಷ್ಟಿಸಿಬಿಟ್ಟಿದ್ದಾಗಿತ್ತು. ಏಕೆಂದರೆ ಕ್ರಮಬದ್ಧವಾಗಿ ಆಯಾ ವಯಸ್ಸಿನಲ್ಲೇ ಅವರಿಬ್ಬರು ಇಹಲೋಕವನ್ನು ತ್ಯಜಿಸಿದ್ದು.

ಅಂದರೆ ನಾನು ಮೇಲೆ ಗುರ್ತಿಸಿರುವ ನಾಲ್ಕೂ ಕಲಾತ್ಮಕ ನಂಬಿಕೆಗಳು ಕಲಾಸಮೂಹದಲ್ಲೂ ಆಳವಾಗಿ ಬೇರೂರಿದೆ ಎಂದಂತಾಯ್ತು, ಅದಕ್ಕೆ ವ್ಯತಿರಿಕ್ತವಾದ ಜೀವಂತ ಉದಾಹರಣೆಗಳಿದ್ದಾಗ್ಯೂ ಸಹ. ಈ ನಿಟ್ಟಿನಲ್ಲಿ ಕಲಾಸಮೂಹದ ಕಲಾವಿದನ ವ್ಯಕ್ತಿತ್ವದ ಪರಿಧಿಯ ಹೊರಗುಳಿದ ವ್ಯಕ್ತಿ ಶಂಕರಗೌಡ ಬೆಟ್ಟದೂರು. ಅವರ ಬದುಕು ಹಾಗೂ ಜೀವನಶೈಲಿ ಎಂದರೆ ಕಲಾಸಾಂಘಿಕ ಕಲ್ಪನೆಯ ವ್ಯತಿರಿಕ್ತ ನಡುವಳಿಕೆಗೆ ಹಿಡಿದ ಒಂದು ನಿರ್ಭಾವುಕ ಕನ್ನಡಿ ಎಂದಂತಾಯ್ತು.

ಭಾರತದಲ್ಲಿ ಸೃಜನಶೀಲ ಕಲಾವಿದರ ಆತ್ಮಚರಿತ್ರೆ ಎಂದರೆ ಇತಿಹಾಸ ಮತ್ತು ಮಿಥ್ಯೆಯನ್ನು, ಪರಸ್ಪರ ಭಿನ್ನಗೊಳಿಸಲಾಗದಷ್ಟು ಬೆರೆಸುವ ಒಂದು ಮೈದಾನ. ಅದಕ್ಕೆ ಕಾರಣ ಸಂಸಾರವೆಂಬ ಸಾಂಸ್ಥೀಕರಣಕ್ಕೂ ದೃಶ್ಯಕಲೆ ಎಂಬ ಸಾಂಸ್ಕೃತಿಕ ರಾಜಕಾರಣಕ್ಕೂ ಇರುವ ಸಂಬಂಧದ ಅಯೋಮಯ ಗುಣ. ಗೌಡರಿಗೀಗ ಸರಿಸುಮಾರು ೮೦ ವರ್ಷ ವಯಸ್ಸು. ಸ್ವತಃ ಅವರೇ ಹೇಳುವಂತೆ, "ಈಗ ವ್ಯವಸಾಯದಿಂದ ನಿವೃತ್ತನಾಗೇನ್ರಿ. ಇದೇನಿದ್ರೂ ಚಿತ್ರಕಲೇಲಿ ಪೂರ್ಣ ಮುಳುಗೋದೇ ಆದೀತು". ಕಳೆದ ಐದು ದಶಕವು ಭಾರತದ ಪ್ರಮುಖ ಕಲಾಚಳುವಳಿಗಳು, ಬದಲಾವಣೆಗಳು, ಅದಕ್ಕಿಂತ ಹೆಚ್ಚಾಗಿ "ಕಲೆ" ಎಂಬುದರ ಅರ್ಥವ್ಯಾಪ್ತಿಯೇ ಗುರುತು ಹಿಡಿಯಲಾಗದಷ್ಟು ರೂಪಾಂತರ ಹೊಂದಿದ ಕಾಲ. ಕಲಾವಿದರಾಗಿ ಶಂಕರಗೌಡರ ಜೀವನದ ಅತ್ಯುತ್ತಮ ಕಾಲವೂ ಇದೇ. 'ಒಂದೇ ರೀತಿ' ಚಿತ್ರ ಬಿಡಿಸುವುದು ಏಕಶೈಲಿಯ ಇತಿಮಿತಿಯನ್ನು ಹೇಗೆ ಉದ್ದೀಪಿಸುತ್ತದೋ ಹಾಗೆ ಅನಿವಾರ್ಯವೆನಿಸುವ ಬದಲಾವಣೆಗೂ ಪ್ರತಿರೋಧ ಒಡ್ಡುವಂತಹದ್ದು. ಈ ಹಿನ್ನೆಲೆಯಲ್ಲಿ ಈ ದ್ವಿಭಾಷೀಯ ಕಿರುಪುಸ್ತಕವನ್ನು ಬರೆದಿದ್ದೇನೆ. ಅವರ ಬದುಕಿನ ಭೌತಿಕ ಆಗುಹೋಗುಗಳನ್ನು, ಅವು ಇಲ್ಲವೇ ಇಲ್ಲವೆನ್ನಿಸುವಷ್ಟು ಕಡಿಮೆ ಬರೆದು, ಅವರ ಜೀವನಶೈಲಿ ಹಾಗೂ ಕೃತಿಯು ಹೇಗೆ ಒಂದು ರಾಷ್ಟ್ರೀಯ, ಅಂಚಿನ ಶಾಲೆಗೆ ಪ್ರತಿಕ್ರಿಯಿಸಿತು ಎಂಬುದನ್ನು ವಿಶ್ಲೇಷಿಸಲು ಪ್ರಯತ್ನಿಸಿದ್ದೇನೆ. "ತನ್ನೊಳಗೇ ಅಂಚು-ಕೇಂದ್ರವೆಂಬ ಪುರುಷ-ನಿರ್ಮಿತ ರಾಜಕಾರಣದಲ್ಲಿ ತೊಡಗಿಕೊಂಡದ್ದು ಶಾಂತಿನಿಕೇತನದ ಕಲಾಭವನವೆಂಬ ಶಾಲೆಯ ದ್ವಿಮುಖಿ ನೀತಿಗೆ ಧ್ಯೋತಕ" ಎಂದು ಅಲ್ಲಿಯೇ ಓದಿದ ನನ್ನ ಸಹಪಾಠಿ ಡಾ. ಪೋಲ ಸೇನ್‌ಗುಪ್ತ ಇತ್ತೀಚಿನ "ಆರ್ಟ್ ಅಂಡ್ ಡೀಲ್" ಕಲಾಪತ್ರಿಕೆಯಲ್ಲಿ ಬರೆದಿದ್ದಾರೆ. ಶೂದ್ರ, ಸ್ತ್ರೀವಾದ, ಸಬಾಲ್ಟರ್ನ್ ಅಧ್ಯಯನಗಳಲ್ಲಿ ಅಂಚಿನವರೇ ಕೇಂದ್ರದವರ ರಾಜಕಾರಣದಲ್ಲಿ ತೊಡಗಿದಾಗ, ಆಂತರಿಕ ವಲಸಿಗ ಸಂಸ್ಕೃತಿ ತೀವ್ರವಾದಾಗ, ಅದರೊಳಗೇ ನಿಶ್ಚಲವಾಗಿ ಏಕಶೈಲಿಯಲ್ಲಿ ಕೃತಿರಚಿಸುತ್ತ ಸಾಗುವವರ ಕ್ರಿಯೆಯು ಭೌತಿಕ ಹಿಂಸೆಯಿಂದ ಹೊರತಾದ ಪ್ರತಿರೋಧದ್ದಾಗಿರುತ್ತದೆ. ಶಂಕರಗೌಡರ ಕೃತಿಗಳು ಈ ನಿಟ್ಟಿನಿಂದ ಬಹು ಸೂಕ್ತವಾದವು. ಓದುಗರು ಶಂಕರಗೌಡರನ್ನು ಹಾಗೂ ತನ್ಮೂಲಕ ಈ ಬರವಣಿಗೆಯನ್ನು ಸ್ವೀಕರಿಸುತ್ತಾರೆಂಬ ನಿರೀಕ್ಷೆಯೊಂದಿಗೆ ಈ ಮುನ್ನುಡಿ ಕೊನೆಗೊಳಿಸುತ್ತೇನೆ.

ಈ ಪುಸ್ತಕಕ್ಕೆ ಅನೇಕದ ತಾಳ್ಮೆಯ ನೆರವು ದೊರಕಿದೆ. ಅಪಾರ ಸಹನೆಯಿಂದ ಸ್ವತಃ ಕಾದ ಶಂಕರಗೌಡ ಬೆಟ್ಟದೂರರು, ಅಷ್ಟೇ ಅರ್ಥಪೂರ್ಣವಾಗಿ ನಿರೀಕ್ಷಿಸಿದ ಸುರೇಖ, ಎಲ್ಲ ರೀತಿಯಲ್ಲಿಯೂ ನೆರವು ನೀಡಿದ ಅಧ್ಯಕ್ಷರಾದ ವಿ.ಟಿ. ಕಾಳೆ, ರಿಜಿಸ್ಟ್ರಾರ್ ವಿ.ಎನ್. ಮಲ್ಲಿಕಾರ್ಜುನ ಸ್ವಾಮಿ, ಲಲಿತಕಲಾ ಅಕಾಡೆಮಿಯ ಗಂಗ, ವೆಂಕಟೇಶ್, ರಾಘು, ಮುತ್ತು ಮತ್ತು ಚಿತ್ರಕಲಾ ಪರಿಷತ್ತಿನ ಕಲಾಇತಿಹಾಸದ ನನ್ನ ಸಹವರ್ತಿಗಳಾದ ಡಾ. ರಾಘವೇಂದ್ರ ಕುಲಕರ್ಣಿ, ಟಿ.ಎನ್. ಕೃಷ್ಣಮೂರ್ತಿ, ನನ್ನ ಯೋಚನಾಲಹರಿಯನ್ನು ನಿರಂತರವಾಗಿ ಪರೀಕ್ಷೆಗೊಡ್ಡುವ ಕಲಾ ಇತಿಹಾಸದ ನನ್ನ ಆತ್ಮೀಯ ವಿದ್ಯಾರ್ಥಿಗಳು ಹಾಗೂ ನನ್ನ ತಂದೆ-ತಾಯಿ, ಶಿವಕುಮಾರ್, ಪ್ರೀತಿ, ಕವಿತ ಮತ್ತು ಹಿಮಾನಿಗೆ ನಾನು ಅಭಾರಿಯಾಗಿದ್ದೇನೆ. ಕಳೆದ ಕೆಲವು ತಿಂಗಳಲ್ಲಿ ನಮ್ಮನ್ನು ಅಗಲಿದೆ ಮೇರುನಟ ಡಾ. ರಾಜ್, ಹಿರಿಯ ಗೆಳೆಯ ಪೂರ್ಣಚಂದ್ರ ತೇಜಸ್ವಿ ಹಾಗೂ ಕಿರಿಯ ಸೋದರ ಎಚ್.ಎ. ರವಿಕುಮಾರರಿಗೆ ಈ ಪುಸ್ತಕದ ಮೂಲಕ ಒಂದು ಗಹನವಾದ ಶ್ರದ್ಧಾಂಜಲಿ.

– ಎಚ್.ಎ. ಅನಿಲ್ ಕುಮಾರ್



ಶಂಕರಗೌಡ ಬೆಟ್ಟದಮಾರ

# ಶಂಕರಗೌಡ ಬೆಟ್ಟದೂರ

## (ಅ) ಚಿತ್ರದೊಳಗಿನ ಚಿತ್ರದೊಳಗೊಂದು ಕಲಾವಿದನ 'ಆಕಾರ'

ಅದೊಂದು ಸುಮಾರು ಎಂಟಡಿ ಅಳತೆಯ ಸುರುಳಿ ಚಿತ್ರ. ಅದರೊಳಗೊಂದು 'ಚಿತ್ರಿತ ಚಿತ್ರ ಸುರುಳಿ'! ಅಸಲಿ ಚಿತ್ರ ಹಾಗೂ ಅದರೊಳಗಿರುವ ಚಿತ್ರಗಳೆರಡೂ ಒಂದೇ ಕೈನ ಸೃಷ್ಟಿ ಎಂದು ಹೇಳಬೇಕಿಲ್ಲವಷ್ಟೇ. ಚಿತ್ರದ ಒಳಗಿನ ಸುರುಳಿ ಚಿತ್ರವನ್ನು ಹತ್ತಾರು ಜನ ಗುಂಪುಗುಂಪಾಗಿ, ಕುತೂಹಲದಿಂದ ನೋಡುತ್ತಿದ್ದಾರೆ. ಅವರಲ್ಲಿ ಹಲವರು ವೀಕ್ಷಕರಿಗೆ ಬೆನ್ನು ಹಾಕಿ ನಿಂತಿದ್ದಾರೆ. ಚಿತ್ರದೊಳಗಿನ ವೀಕ್ಷಕರು ಚಿತ್ರದ ಹೊರಗಿನ ವೀಕ್ಷಕರಿಗೆ ಬೆನ್ನು ಹಾಕಿದಂತಾಯ್ತು. ನಿಜ ಜಗತ್ತಿನ ವೀಕ್ಷಕರಿಗೆ

ಅ) ಈ ಸಮಗ್ರ ಚಿತ್ರ

ಆ) ಚಿತ್ರದೊಳಗಿನ ಚಿತ್ರ ಮತ್ತು

ಇ) ಅದನ್ನು ಅಸಲಿ ಚಿತ್ರದ 'ಒಳಗೇ' ನಿಂತು ನೋಡುತ್ತಿರುವ ವೀಕ್ಷಕ – ಎಂದು ಮೂರು ವಿಷಯಗಳನ್ನು ಒಟ್ಟಾಗಿ, ಒಂದೇ ಕ್ಯಾನವಾಸಿನ ಮೂಲಕ, ಒಂದೇ ಚೌಕಟ್ಟಿನೊಳಗೆ ಪ್ರಸ್ತುತ ಪಡಿಸಿದಂತಾಯ್ತು.



ಐವತ್ತು ವರ್ಷದ ಹಿಂದೆ ಶಾಂತಿನಿಕೇತನದ ಕಲಾಭವನದ ವಿದ್ಯಾರ್ಥಿಯಾಗಿದ ರಾಯಚೂರಿನ ಶಂಕರಗೌಡ ಬೆಟ್ಟದೂರು ಈ ಚಿತ್ರದೊಳಗೆ 'ಮಧ್ಯಭಾಗದಲ್ಲಿ' ಕುಳಿತಿರುವ ವ್ಯಕ್ತಿ (1956). ಮತ್ತು ಈ ಚಿತ್ರ ರಚಿಸಿದ ಕಲಾವಿದ ಸಹ! ಈ ಚಿತ್ರದ ವೀಕ್ಷಕರಿಗೆ ಕಲಾವಿದ ಬೆನ್ನು ಹಾಕಿ ಕುಳಿತಿರುವುದು ಉದ್ದೇಶಪೂರ್ವಕವೆ ? ಮತ್ತೊಬ್ಬ ಕಲಾವಿದನ ಮತ್ತೊಂದು ಕಲಾಕೃತಿಯನ್ನು ಇದರೊಂದಿಗೆ ಹೋಲಿಸಬಹುದು. ಬಿನೋದ್ ಬಿಹಾರಿ ಮುಖರ್ಜಿಯವರ ಚಿತ್ರವದು. ಶಾಂತಿನಿಕೇತನದ ಎರಡು ಭಿನ್ನ ತಲೆಮಾರಿಗೆ ಸೇರಿದ ಇಬ್ಬರು ಭಿನ್ನ ಕಲಾವಿದರ ಎರಡು ಕಲಾಕೃತಿಗಳು ನಡುವಣ ಹೋಲಿಕೆ ಮಾತ್ರ ಬಹಳಷ್ಟಿವೆ; ಮುಖರ್ಜಿ ಮತ್ತು ಗೌಡರು ಶಾಂತಿನಿಕೇತನದಲ್ಲಿ ಭಿನ್ನ ಕಾಲ–ಸಂದರ್ಭಗಳಲ್ಲಿ ವಿದ್ಯಾರ್ಥಿಗಳಾಗಿದ್ದವರು, ಕ್ರಮಬದ್ಧವಾಗಿ ಗುರುಶಿಷ್ಯರಾಗಿದ್ದವರು. ತಮ್ಮ ತಮ್ಮ ಶೈಲಿಗಳನ್ನು ಶಾಂತಿನಿಕೇತನ ಶೈಲಿ ಮತ್ತು ಕಲೆಯ ಹೊರಗುಳಿಯ ತಮ್ಮಗಳ ವೈಯುಕ್ತಿಕ ಬದುಕಿನಲ್ಲೂ ಆಳವಡಿಸಿಕೊಂಡವರು. ಮೊದಲನೆಯವರು ಒಳಗಿನವರಾದರೆ ಎರಡನೆಯವರು ಹೊರಗಿನವರು.

ಇಬ್ಬರ ನಡುವಣ ವ್ಯತ್ಯಾಸವಿಷ್ಟೇ. ಕಲಾವಿದರಾಗಿ ಬಿನೋದರ 'ವ್ಯಕ್ತಿತ್ವವು' ಕಲಾ ಇತಿಹಾಸದ ಮಾಧ್ಯಮಗಳ ಮೂಲಕ ಚಿರಪರಿಚಿತವಾಗಿದೆ. ಸಮಕಾಲೀನ ಕಲಾಗ್ರಹಿಕೆಯ ಭಾಷೆಯಲ್ಲಿ ಹೇಳಬಹುದಾದರೆ, ಮಾಧ್ಯಮಗಳೇ ಬಿನೋದರಿಗೆ ಒಂದು ಸ್ಪಷ್ಟ ವ್ಯಕ್ತಿತ್ವವನ್ನು ಸೃಷ್ಟಿಸಿಬಿಟ್ಟಿವೆ. ಶಾಂತಿನಿಕೇನದ ಮತ್ತೊಬ್ಬ ಹಳೆಯ ವಿದ್ಯಾರ್ಥಿಯಾಗಿದ್ದ ಸತ್ಯಜಿತ್ ರೇ ತನ್ನ "ಇನ್ನರ್ ಐ" ('ಒಳಗಿನ ಕಣ್ಣು') ಬಯೋಗ್ರಫಿಕ್ ಸಿನೆಮದ ಮೂಲಕ ಇಂತಹ ಒಂದು ಗಟ್ಟಿ ವ್ಯಕ್ತಿತ್ವ ಸೃಷ್ಟಿಸಿಕೊಟ್ಟಿದ್ದಾರೆ ಬಿನೋದರಿಗೆ. ಅಂತಹ ನಿರ್ಮಿತಿಗಳ (ಕನ್‌ಸ್ಟ್ರಕ್ಟ್) ಹೊರಗೊಬ್ಬ 'ಬಿನೋದ್ ಬಿಹಾರಿ' ಎಂಬ ವ್ಯಕ್ತಿತ್ವವೆಂಬುದೊಂದು ಮಿಥ್ಯೆಯಷ್ಟೇ. ಇಂತಹ ಚಿಂತನೆಯ ಧಾಟಿಯಿಂದಾಗಿ ಸಂಸ್ಕೃತಿ ಚಿಂತನಕಾರ ಜೀನ್ ಬೌದ್ರಿಲಾರ್ಡನು ಗಲ್ಫ್ ಯುದ್ಧ ನಡೆದೇ ಇಲ್ಲವೆಂದದ್ದು ಮತ್ತು ಉಂಬರ್ಟೊ ಈಕೊ ಡಿಸ್ನಿಲ್ಯಾಂಡ್, ಡಿಸ್ನಿವರ್ಲ್ಡ್ ಅನ್ನು 'ಅತಿನೈಜ' (ಹೈಪರ್–ರಿಯಾಲಿಟಿ) ಜಗತ್ತೆಂದು ಕರೆದದ್ದು. ಈ ಚಿಂತನಾದೃಷ್ಟಿಯಿಂದ ಶಂಕರಗೌಡ ಬೆಟ್ಟದೂರರೆಂಬ ಕಲಾವಿದರಿಗೆ ಒಂದು ವ್ಯಕ್ತಿತ್ವವೆಂಬುದು ಇನ್ನೂ ದಕ್ಕಬೇಕಾಗಿದೆ.

## (ಆ) ಅಂಚಿನ ಕಲಾವಿದನ ಕೇಂದ್ರ ಕಥನ

ಬಿನೋದ್ ಬಿಹಾರಿಯವರ ಒಂದು ನಿರ್ದಿಷ್ಟ ಕೃತಿಯು ಮೇಲ್ಕಾಣಿಸಲಾದ ಬೆಟ್ಟದೂರರ ಕೃತಿಯನ್ನು ಹೋಲುವುದು ಈ ರೀತಿ : ಎರಡೂ ಕೃತಿಗಳಲ್ಲೂ ಆಯಾ ಕಲಾವಿದ ವೀಕ್ಷಣೆಗೇ ಬೆನ್ನು ಮಾಡಿ ಕುಳಿತಿದ್ದಾನೆ. ಕಲಾಕೃತಿಯೊಂದನ್ನು 'ಕಲಾವಿದನೊಬ್ಬನ ಸಾಧನೆ' ಎಂದು ಪರಿಗಣಿಸುವುದಕ್ಕಿಂತಲೂ ಒಂದು 'ವೀಕ್ಷಿಸಲರ್ಹವಾದ ದೃಶ್ಯವಷ್ಟೇ' ಎಂದು ಹೇಳಿದಂತಾಯಿತು ಈ ಎರಡೂ ಕೃತಿಗಳು. ಈ ಹೇಳಿಕೆಯ ಒಳಗೆ ಕಲಾವಿದರ 'ವಿನಯವೂ' ಅಡಕವಾದಂತಾಯ್ತು. "ಕಲಾವಿದನಿಗಿಂತ ಕಲೆಯೇ ದೊಡ್ಡದು, ಕಲಾಕೃತಿ ತಾನಾಗಿಯೇ ಮಾತಾನಾಡಬೇಕು. ಕಲೆಗಾಗಿ ಕಲೆ" ಎಂಬಂತಹ ನಂಬಿಕೆ ತೀವ್ರವಾಗಿದ್ದ ಕಾಲದಲ್ಲಿ, ಅಂತಹ ನಂಬಿಕೆಗಳ ಆದಾರದಿಂದ ಇಂತಹ ಕೃತಿಸಂಯೋಜನೆ ರೂಪುಗೊಂಡಿರಲು ಸಾಧ್ಯ.*1* ಶಂಕರಗೌಡರ ಈ ಒಂದು ಚಿತ್ರದ ಮೂಲಕ ಅವರ ಸಮಗ್ರ ಚಿತ್ರಗಳನ್ನು ನೋಡುವ ಒಂದು ಸಾಧ್ಯತೆ ಇದು. ಆದರೆ ಇದು, ಈ ಚಿತ್ರಗಳನ್ನು ಓದಲಿರುವ ಒಂದೇ ಕ್ರಮ ಎಂದೇನಲ್ಲ. ಇದು ಮೊದಲ ಓದುವ ಕ್ರಮ ಎಂದುಕೊಳ್ಳಿ.

ಶಾಂತಿನಿಕೇತನದ ಅಸಲಿ ಚಿತ್ರಕಲಾ ದರ್ಶನದ ಮೂಲಭೂತ ಅಂಶವೇ ಇದು. ಅದರ ಹೊರಗಿನಿಂದ ನಮಗೆ ಕಂಡುಬರುವಂತೆ ಇದು ದಿಟ. "ಕಲಾವಿದನಿಗಿಂತ ಕಲಾಕೃತಿ ಮತ್ತು ಕಲೆಯ ಮೌಲ್ಯ ದೊಡ್ಡದು" ಎಂಬ ಜನಪ್ರಿಯ ನಂಬಿಕೆಗೂ ಶಾಂತಿನಿಕೇತನದ ಶಿಕ್ಷಣ ತತ್ವಕ್ಕೂ ಒಂದು ಸಾತತ್ಯತೆ ಇದೆ. ಬೆಟ್ಟದೂರರ (ಮತ್ತು ಬಿನೋದ್ ಬಿಹಾರಿಯವರ) ಕಲಾಕೃತಿಗಳ ಹಿರಿಮೆ ಎಂದರೆ ಒಂದು ಕಲಾಶಾಲೆಯ ತತ್ವವನ್ನು ಒಂದು ಕೃತಿಯ ಒಳಗೆ ಹಿಡಿದಿರಿಸುವ ಪ್ರಯತ್ನ. ಬಿನೋದ್ ಬಿಹಾರಿ ಆ ಶಾಲೆಯ ಹೆಚ್ಚು ತಾತ್ವಿಕ ದೃಶ್ಯೀಕರಣದ ರೂಪುರೇಷೆಗಲನ್ನು ತಮ್ಮ ಕೃತಿಗಳ ಮೂಲಕವೇ ಸೃಷ್ಟಿಸಿದವರು. ಅವರ ***"ಮೀಡಿಯವಲ್ ಸೈಂಟ್ಸ್"*** ಭಿತ್ತಿಕೃತಿ ('ಮದ್ಯಕಾಲೀನ,

ಭಕ್ತಿಚಳುವಳಿಯ ಸಂತರು') ಶಾಂತಿನಿಕೇತನ ದೃಶ್ಯಭಾಷೆಯ ಗಂಭೀರ ಶೈಲಿಯ ಅತ್ಯುತ್ತಮ ಉದಾಹರಣೆ. ನಂದಲಾಲ್ ಬೋಸರ ಬಹುಪಾಲು ರೇಖಾಚಿತ್ರಗಳು ಇದೇ ದೃಶ್ಯಭಾಷೆಯನ್ನು ದೈನಂದಿನ ಜೀವನದೊಂದಿಗೆ ಬೆಸೆದು ಬಿಡುತ್ತವೆ. ಇಂಪ್ರೆಷನಿಸ್ಟ್ ಕಲಾವಿದ ರೆನ್ವಾ (ಖಜಟಿಉಡಿ) ಹೇಗೆ ಆ ಇಸಂನ ಬೌದ್ಧಿಕ ಚಿಂತನೆಯ ಹೊರಗೇ ಉಳಿದುಬಿಟ್ಟ ಕಲಾವಿದನಾಗಿದ್ದನೋ ಹಾಗೆ ರಾಮ್‌ಕಿಂಕರ್ ಬೈಜ್ ಬೆಂಗಾಲದ ಶೈಲಿಗೆ. ಒಂದೇ ಕಲಾಶಾಲೆಯ ಬೇರೆ ಬೇರೆ ಮುಖಗಳನ್ನು ಅದರ ಪ್ರಮುಖ ಹರಿಕಾರರೆಲ್ಲ, ತಮ್ಮ ಕೃತಿಗಳ ಮೂಲಕ ಪ್ರಸ್ತುತ ಪಡಿಸುವುದು ಒಂದು ಲೋಕರೂಢಿ.

ಬೆಟ್ಟದೂರರು ತಮ್ಮ ಸಮಗ್ರ ಚಿತ್ರಗಳ ಹಾಗೂ ತಮ್ಮ ಜೀವನಶೈಲಿಯ ಮೂಲಕ ಆ ಶಾಲೆಯ ಒಂದು ಅಗೋಚರ, ಅಂಚಿನ ಮುಖವನ್ನು ಪ್ರಸ್ತುತಪಡಿಸುತ್ತಾರೆ. ಬೆಂಗಾಲ್ ಶಾಲೆಯ ಹೊರಗುಳಿದ ಇಂತಹ ಕಲಾವಿದರ ಕೊಡುಗೆಗಳ ಮೂಲಕವೇ ಒಂದು ಕಾಲದ (1910–30) ಸ್ಥಳೀಯ ಶಾಲೆಯೊಂದು ಮುಂದೊಂದು ದಿನ (1950ರ ಹೊತ್ತಿಗೆ) ರಾಷ್ಟ್ರೀಯ ಶಾಲೆಯಾಗಿದ್ದು. ಆದರೆ ಇಲ್ಲಿವಯರೆವಿಗೂ ಪ್ರಕಟವಾಗಿರುವ ಕಲಾಭವನದ (ಶಾಂತಿನಿಕೇತನ) ಸಮಗ್ರ ಸಾಹಿತ್ಯದಲ್ಲಿ ಅಲ್ಲಿಯೇ ಪಾಠ ಹೇಳಿ ಅಲ್ಲಿನವರೇ ಅದವರನ್ನು ಹೊರತುಪಡಿಸಿದವರ ಕೊಡುಗೆಯ ಕುರಿತು *ಅಗಾಧ ಮೌನವೊಂದು* ನೆಲೆಸಿದೆ. ಇದನ್ನು ಸರಳವಾಗಿ ಹೀರಾಯಿಕ್ ನರೇಟಿವ್, ಪಾಲಿಟಿಕ್ಸ್ (ಮುಖ್ಯವಾಹಿನಿ ರಾಜಕಾರಣ) ಎನ್ನುತ್ತೇವೆ.

***ಸರಳಗೊಳಿಸಿ ಹೇಳುವುದಾದರೆ ಭಾರತದ ಒಂದು ರಾಷ್ಟ್ರೀಂಯ ದೃಶ್ಯಸಂಸ್ಕೃತಿಯೊಂದರ ಮುಖ್ಯವಾಹಿನಿ ರಾಜಕಾರಣದಲ್ಲಿ ಅಂಚಿನ ಅವಸ್ಥೆ ಏನು ಎಂಬ ಕಥೆಯೂ ಒಂದು ಅಧ್ಯಾಯಕ ಶಂಕರಗೌಡರ ಕಥೆಯೂ ಕೂಡ.***

## (ಇ) ಇದು ಅವನ್‌ಗಾರ್ಡ್ ಇರಬಹುದೆ?

ಬಿನೋದ್ ಬಿಹಾರಿ ಶಾಂತಿನಿಕೇತನ ಕಲಾಶಾಲೆಯ ಪರಿಧಿಯ ಒಳಗೇ ಅಧ್ಯಾಪಕರಾಗಿ ಇದ್ದು ಆ ಪರಿಧಿಯ ಚೌಕಟ್ಟನ್ನು ನಿರ್ಧರಿಸಿದವರು. ಶಂಕರಗೌಡರು ತಮ್ಮ ತಾರುಣ್ಯದ ಐದಾರು ವರ್ಷ ಮಾತ್ರ ಅಲ್ಲಿದ್ದು, ದೆಹಲಿಯಲ್ಲಿ ಒಂದೆರೆಡು ವರ್ಷಗಳನ್ನು ಕಲಾವೃತ್ತಿಗಾಗಿ ವ್ಯಯಿಸಿದ ನಂತರ ರಾಯಚೂರಿನ ಬೆಟ್ಟದೂರಿನಲ್ಲಿ ನೆಲೆಸಿದವರು. ಆ ನಂತರ ಐದು ದಶಕಗಳ ಕಾಲ ಕಲೆಯಲ್ಲಿ ಕೃಷಿ ಮಾಡಿದವರು, ನೈಜ ಕೃಷಿಯಲ್ಲಿಯೂ ಬದುಕಿನ ಕಲಾವಂತಿಕೆಯನ್ನು ಕಂಡವರು, ತುಂಬು ಸಂಸಾರಿಯಾದ ಶಂಕರೇಗೌಡರು.



ಶಂಕರಗೌಡರ ಜೀವನಶೈಲಿಯ ಆಯ್ಕೆಯೇ 'ವ್ಯವಸ್ಥೆ–ವಿರುದ್ಧವಾದುದು'. ಇದನ್ನು ಸರಳವಾಗಿ ಇಂಗ್ಲೀಷಿನಲ್ಲಿ ಹಾಗೂ ಕಲಾ ಇತಿಹಾಸದ ಭಾಷೆಯಲ್ಲಿ ಅವನ್ ಗಾರ್ಡ್ (ಂತಚಿಟಿಣ ಉಚಿಡಿಜಜ) *2* ಎನ್ನುತ್ತೇವೆ. ಇವರು ಶಾಂತಿನಿಕೇತನದ ಕಲಾಭವನದಲ್ಲಿ 1950ರ ದಶಕದಲ್ಲಿ ಓದುತ್ತಿದ್ದ ಕಾಲಕ್ಕೇ ಯೂರೋಪಿನಲ್ಲಿ ಅವನ್‌ಗಾರ್ಡ್ ಆರಂಭವಾಗಿ ಒಂದು ಶತಮಾನವಾಗಿ ಹೋಗಿತ್ತು. ಮತ್ತು ಅದಾಗಲೇ ಮುಕ್ತಾಯದ ಹಂತ ಮುಟ್ಟಿದ್ದೂ

ಆಗಿತ್ತು. ಅಂದರೆ ವ್ಯವಸ್ಥೆಯ ವಿರುದ್ಧವಾಗಿ, ಗ್ಯಾಲರಿಯ ಹೊರಗೆ, ಮಾರುಕಟ್ಟೆಯ ಹಾಗೂ ವಿಮರ್ಶೆಯ ಹೊರಗುಳಿವ ಕಲಾಕೃತಿಗಳನ್ನು ರಚಿಸುವ ಒಂದು ನೂರು ವರ್ಷ ಕಾಲದ ಈ ಸಂಪ್ರದಾಯದವರು ಇಲ್ಲವಾಗತೊಡಗಿದರು. ಎಂ.ಎಫ್.ಹುಸೇನ್ ಆದಾಗಲೇ ಬಡತನದ ರೊಮ್ಯಾಂಟಿಸಿಸಂನಿಂದ ಹೊರಬಂದು ಹೊಸದಾಗಿ ದಕ್ಕಿದ ಶ್ರೀಮಂತಿಕೆಯಿಂದಾಗಿ ರೊಮ್ಯಾಂಟಿಸಿಸಂ ಅನ್ನು ಒಂದು ಶೈಲಿಯನ್ನಾಗಿಸಿ ಕೊಂಡದ್ದಾಗಿತ್ತು. ಗೌಡರು ಅಂದಿನಿಂದ ಇಂದಿನವರೆಗೂ ಅಪ್ರಜ್ಞಾವಸ್ಥ ಅವನ್‌ಗಾರ್ಡ್ ಕಲಾವಿದರಾಗಿಯೇ ಉಳಿದುಬಿಟ್ಟಿದ್ದಾರೆ. ಇದು ಸುಲಭದ ಮಾತಲ್ಲ. ***ವ್ಯವಸ್ಥೆಯ ವಿರುದ್ಧ ಹೋರಾಡುವುದೇ ಒಂದು ವ್ಯವಸ್ಥೆಯಾಗಿ*** ಹೋಗುವ ಅಪಾಯವು ಎಲ್ಲ ರಂಗಗಳಲ್ಲಿಯೂ ಇವೆ. ಶಂಕರಗೌಡರು ಪಡೆದ ಶಾಂತಿನಿಕೇತನ ಶಿಕ್ಷಣವು ರವಿವರ್ಮನ ಕಲ್ಪನೆಯ ಚಿತ್ರಕಲಾರಂಗದ ವ್ಯವಸ್ಥೆಯ ವಿರುದ್ಧವಾಗಿ ಕಾರ್ಯನಿರ್ವಹಿಸಿತ್ತು.

ಗೌಡರು ತೈಲವರ್ಣದಲ್ಲಿ ಕೃತಿ ರಚಿಸಿದ್ದು ಕಡಿಮೆ. ಅವರಿಗೆ ದೊರೆತ ಶಿಕ್ಷಣದಲ್ಲಿ "ತೈಲವರ್ಣವೆಂಬುದು ರವಿವರ್ಮನ ಮೂಲಕ ಭಾರತ ತಲುಪಿದ ಪಶ್ಚಿಮದ ನವವಸಾಹತುಶಾಹಿ ಧೋರಣೆ"ಯಾಗಿಯೇ ಕಂಡುಬಂದಿದ್ದಿತು. ತಿಳಿದೋ ತಿಳಿದೆಯೋ ಗೌಡರು ಈ ನಿಲುವನ್ನು ಜಲವರ್ಣ ಹಾಗೂ ವಾಷ್ ಮಾಧ್ಯಮವಾಗಿ ಐದು ದಶಕದ ಕಾಲ ಸ್ವೀಕರಿಸಿದವರು. ಅವನ್‌ಗಾರ್ಡ್ ಚಿಂತನೆಯೊಂದು ಮಾದ್ಯಮವಾಗಿ ಮಾರ್ಪಾಟಾದ ಮಾಂತ್ರಿಕತೆಯನ್ನು ಬೆಂಗಾಲ್ ಶಾಲೆಯೆನ್ನುತ್ತೇವೆ. ಅದಕ್ಕೊಂದು ಮುಗ್ಧತೆಯ ಜಾಣ ಕವಚ ತೊಡಿಸಿ, ಆ ಅವನ್‌ಗಾರ್ಡ್‌ನ ಸಾಂಸ್ಥೀಕರಣ **ಗುಣವನ್ನೇ ಲೇವಡಿ ಮಾಡಿ ತೋರಿಸಿದ್ದನ್ನು ಶಂಕರಗೌಡರ ಕಲಾಕೃತಿಗಳ ಮೂಲಗುಣವೆನ್ನಬಹುದು.**

ಈ ಬಗೆಯ ತಾತ್ವಿಕ ಅರ್ಥೈಸುವಿಕೆಯನ್ನು ಹೊರತುಪಡಿಸಿ ನೋಡುವುದು ಬೌದ್ಧಿಕವಾಗಿ ನಿಷಿದ್ಧ. ಉದಾಹರಣೆಗೆ, ವೈಯಕ್ತಿಕ ತಾತ್ವಿಕ ನಿಲುವನ್ನು ಹೊರತುಪಡಿಸಿದರೆ ಬೆಟ್ಟದೂರರ ಕೃತಿಗಳನ್ನು ಗ್ರಹಿಸಲಿರುವ ಒಂದೇ ರೀತಿಯೆಂದರೆ ಅದು ಸಾಂಸ್ಥೀಕರಣದ ಹೊರಗಿನದು. ಅದನ್ನು ಚರ್ಚೆ, ಸಂವಾದ, ಚಿಂತನೆ ಎಂಬ ಮೂರು ಗ್ರಹಿಕೆಯ ಕ್ರಮಗಳ ಹೊರಗಿರಿಸಲಾಗಿದೆಯಾದ್ದರಿಂದಲೇ ತಾತ್ವಾತೀತವಾಗಿ ಗೌಡರ ಬಗ್ಗೆ ಬಯೋಗ್ರಾಫಿ ಬರೆಯುವುದು ಕೇವಲ ವರದಿ ಒಪ್ಪಿಸಿದಂತಾಗದೆ ಉದ್ದೇಶಪೂರ್ವಕವಾಗಿ ಅವರ ಕೃತಿಗಳನ್ನು ತತ್ವದ ಹೊರಗಿರಿಸಿದಂತಾಗುತ್ತದೆ.

## (ಈ)ಕೆ.ಜಿ.ಎಸ್. ಹುಸೇನ್ 'ಚಿತ್ರ' ಮಾದರಿಗಳು

ಭಾರತದ ಕಲಾವಿದನೊಬ್ಬ ಜನಪ್ರಿಯನಾಗಿದ್ದರೆ ಅದು ಎರಡು ಮಾದರಿಗಳ ಮುಖೇನವೆ. ಹುಸೇನ್ ಮಾದರಿಯೊಂದು. ಕೆ.ಜಿ.ಸುಬ್ರಹ್ಮಣ್ಯನ್ ಮಾದರಿ ಮತ್ತೊಂದು. ಹುಸೇನ್ ಮಾದರಿಯು ಗುಣದೋಷಗಳ ನಿರ್ಮಿತಿಯ (ಕನ್‌ಸ್ಟ್ರಕ್ಟ್) ಹೊರಗಿನ ಕಾರಣಗಳಿಂದಾಗಿ ಹುಟ್ಟಿಕೊಂಡಂತಹದ್ದು, ರಾಜಾರವಿವರ್ಮನಂತಹದ್ದು. ಹುಸೇನ್ ಅಂತಹವರು ವ್ಯಕ್ತಿಗಳಾಗಿ ಎಲ್ಲರಿಗೂ ಪರಿಚಯ ಆದರೆ ಅವರ ಕ್ರಿಯಾತ್ಮಕ ಕೊಡುಗೆ ಅದೇ ಸಮಾಜಕ್ಕೆ, ಕಲಾಇತಿಹಾಸಕ್ಕೆ ಅನಾಮಿಕವಾಗಿ ಉಳಿದುಬಿಡುತ್ತದೆ. *3*

ತದ್ವಿರುದ್ಧವಾಗಿ, ಕೆ.ಜಿ.ಎಸ್. ಚಿಂತನೆ ತಿಳಿಯದವರಿಗೆ ಅವರ ಹೆಸರನ್ನು ಕೇಳಿರುವ ಸಾಧ್ಯತೆಯೂ ಇಲ್ಲ. ಕೆ.ಜಿ.ಎಸ್. ಎಂದರೆ ನಮ್ಮ ಪರಿಸರದ ದೃಶ್ಯಗಳು ನೆನಪಾಗುತ್ತವೆ. ಸಹಜವಾಗಿ ಕಂಡದ್ದರ ಅಸಹಜ ಹೊಸತನ ಗೋಚರವಾಗುತ್ತದೆ. ಎಲ್ಲೆಂಲ್ಲಿಂದಲೋ ಪಡೆವ ದೃಶ್ಯಸ್ಫೂರ್ತಿ ಹಾಗೇಕೆ ಪ್ರಭಾವಿಸುತ್ತವೆಂಬುದನ್ನು ವಿವರಿಸುತ್ತವೆ. ನಮ್ಮಲ್ಲೇ ಇರುವ ವಸ್ತುಗಳಲ್ಲಿ ದೈವ ಗೋಚರಿಸಿ, ದೈವಕ್ಕೆ ನಮ್ಮ ಪೂರ್ವಿಕರು ಕಂಡುಕೊಂಡ ನಿರ್ದಿಷ್ಟ ವಸ್ತು–ಮಾಧ್ಯಮಗಳ ಅರಿವು ಹೆಚ್ಚಾಗುತ್ತದೆ. **"ವ್ಯಕ್ತಿಯೆಂದರೆ ಒಂದು ದೇಹ, ವ್ಯಕ್ತಿತ್ವವೆಂದರೆ ನಮ್ಮ ಪೂರ್ವಿಕರೆಲ್ಲರ ಗುಣ, ಚಟಗಳು ಅಡಕವಾಗಿರುವ ನಾವು"** ಎಂಬ ಲೆವಿಸ್ತ್ರಾಸನಂತಹವನ ಪ್ರಾಗೈತಿಹಾಸಿಕ–ಮನಃಶಾಸ್ತ್ರೀಯ ಚಿಂತನೆಯನ್ನು ದೃಶ್ಯಭಾಷೆಯ ಪರಿಧಿಯೊಳಕ್ಕೆ ಎಳೆದು ತರುವುದನ್ನು ಕೆ.ಜಿ.ಎಸ್. ಚಿಂತನೆ ಎನ್ನುತ್ತೇವೆ. ತದ್ವಿರುದ್ಧವಾಗಿ "ಕಲೆಯೆಂದರೆ ಅದರ ಅಗಾಧ ಆರ್ಥಿಕ ಮಾರ್ಪಡಿಸುವಿಕೆ, ವಿಶಾಲ ಅವಕಾಶದಲ್ಲಿ ವರ್ಣಮಯತೆಯ ಇನ್‌ಸ್ಟಾಂಟ್ ಪ್ರತ್ಯಕ್ಷ" ಗೊಳಿಸುವ ತಂತ್ರಗಾರಿಕೆಯನ್ನು ಹುಸೇನ್ ಮಾದರಿ ಎನ್ನುತ್ತೇವೆ.

ಕೆ.ಜಿ.ಎಸ್. ಮಾದರಿಗೆ ದೃಶ್ಯಶಿಕ್ಷಣದಲ್ಲಿ ಅಗ್ರಸ್ಥಾನ, ಹುಸೇನ್ ಮಾದರಿಗೆ 'ಪೇಜ್ ತ್ರೀ' ತವರುಮನೆ. ಎರಡೂ ಮಾದರಿಯಿಂದ ವಂಚಿತರಾದರೂ ಶಂಕರಗೌಡರ ಪ್ರಜ್ಞಾಪೂರ್ವಕ ಒಲವು ಕೆ.ಜಿ.ಎಸ್. ಮಾದರಿಯ ಕಡೆಗೆ. ಶಂಕರಗೌಡರ ಕಳೆದೈದು ದಶಕದ ಕಲಾಸೃಷ್ಟಿಯ ಕ್ರಿಯೆ ಒಂದು ವೈಯುಕ್ತಿಕ, ಒಂಟಿ ಅವನ್‌ಗಾರ್ಡ್. ಒಮ್ಮೆ ಕಲಿತ ಒಂದು ದೃಶ್ಯಸೃಷ್ಟಿ ಸೂತ್ರ ಅವರ ನಿರಂತರ ವಿಶ್ಲೇಷಣಾತೀತ ಬಳಕೆ–ಶಂಕರೇಗೌಡರ ಮುಖ್ಯ ಚಿತ್ರಸೃಷ್ಟಿಯ ಸೂತ್ರ. ಕಲಾಶಾಲೆಯಲ್ಲಿ ಪದವಿಯ ನಂತರ ರಾಯಚೂರಿನ ಬೆಟ್ಟದೂರಿನಲ್ಲಿ ವ್ಯವಸಾಯದೊಂದಿಗೆ, ಆಯುರ್ವೇದ ಮತ್ತು ಕಲೆಯನ್ನು ಬೆರೆಸಿ, ಸಂಸಾರವೆಂಬ 'ಸಂಸ್ಥೆ'ಯೊಂದಿಗೆ ತಮ್ಮನ್ನು ಗುರ್ತಿಸಿಕೊಂಡ ಈ ಕಲಾವಿದರ ಆಯ್ಕೆಯು ಮಿಕ್ಕುಳಿದ ಕರ್ನಾಟಕದ ಕಲಾವಿದರ ಪೂರ್ಣಾವಧಿ ಕಲಾರಂಗದ ತೊಡಗಿಸಿಕೊಳ್ಳುವಿಕೆಯ ಅರ್ಥೈಸುವಿಕೆಯನ್ನು ಪುನರ್‌ಪರಿಶೀಲಿಸಿ– ದಂತಾಯಿತು. ಇದರಿಂದಾಗಿ ಮೊದಲ ಪರಿಣಾಮವೆಂದರೆ ಇವರು ದೈಹಿಕ ಹಾಗೂ ಮಾನಸಿಕ ಸ್ವಾಸ್ಥ್ಯವನ್ನು ಅಪರೂಪಕ್ಕೆಂಬಂತೆ ಸಮೀಕರಿಸಿದವರು. ಈ ಮೂರೂ ವೃತ್ತಿಗಳಲ್ಲಿ ಸಾಂಕೇತಿಕ ಅರ್ಥಗಳನ್ನು ಹೊರಡಿಸಿ, ತನ್ಮೂಲಕ ಈ ಕಲಾವಿದರ ಕಲಾಸೃಷ್ಟಿಯ ಭೂಪಟವೊಂದನ್ನು ರಚಿಸಲು ಸಾಧ್ಯ.

## (ಉ) ಅಂಚು–ಕೇಂದ್ರ ರಾಜಕಾರಣದೊಳಗಿನ ಒಂಟಿತನದ ಚಿತ್ರಣ



ಭಾರತೀಯ ರೈತಾಪಿ ಜೀವನವು ಬಹುಪಾಲು ಪ್ರಕೃತಿಯ ಕೃಪೆಯಾಧರಿಸಿ ಇರುವಂತಹದ್ದು. 'ರೊಮ್ಯಾಂಟಿಕ್ ಜೀವನಶೈಲಿ' ಎಂದೇ ಪ್ರಸಿದ್ಧವಾದ, ಜನಸಾಮಾನ್ಯರ ಕಲ್ಪನೆಯಲ್ಲಿರುವ ಕಲಾವಿದನ ಜೀವನಶೈಲಿಯೂ ಇಂತಹದ್ದೇ. ಆದರೆ ಶಂಕರಗೌಡರ ಜೀವನಶೈಲಿಯು, ಅವರ ವೈದ್ಯವೃತ್ತಿಯ ಹಿನ್ನೆಲೆಯ ಕಾರಣದಿಂದಲೋ ಏನೋ, ಭಿನ್ನವಾದುದಾಗಿದೆ. ಎಲ್ಲೋ ಒಂದೆಡೆ, ***ವಾಷ್ ತಂತ್ರದಲ್ಲಿ ಪ್ರಕೃತಿಯ ಒಂದು ಹೊರಾಂಗಣ ಚಿತ್ರ ಬಿಡಿಸಿ, ಮತ್ತೊಂದರೆ ಘಳಿಗೆಯಲ್ಲಿ ಆ ಚಿತ್ರವನ್ನು ಆಧರಿಸಲಾದ ಅಸಲಿ ಪ್ರದೇಶಕ್ಕೆ ರೈತಾಪಿ ಜವಾಬ್ದಾರಿಯೊಂದಿಗೆ ನಿಜದಲ್ಲಿ ಹೊಂದಿಹೋಗಬೇಕಾದಂತಹ***

*ಸಂಕೀರ್ಣ, ವ್ಯವಸ್ಥಿತ ಜೀವನಶೈಲಿಯನ್ನು ಅಳವಡಿಸಿಕೊಂಡವರು ಶಂಕರಗೌಡರು.*

ತಾವು ಬದುಕಿದವರನ್ನು ಚಿತ್ರಿಸಿ, ಚಿತ್ರಿಸಿದವರ ನಡುವೆ ಬದುಕಿದವರು ಈ ಕಲಾವಿದ. ಇವರಿಗಿಂತ ಕಿರಿಯರಾದ ಕರ್ನಾಟಕದ ಮತ್ತೊಬ್ಬ ಕಲಾವಿದ ಕೆ.ಟಿ.ಶಿವಪ್ರಸಾದ್‌ರ ಕೃತಿಗಳಲ್ಲೂ ಇಂತಹ ಸಾಧ್ಯತೆಗಳಿವೆ.*4* ಇಂದೊಂದು ತೆರನಾದ ಅಥೆಂಟಿಸಿಟಿಯನ್ನು ಕಲಾಕೃತಿಗಳಿಗೆ ನೀಡುತ್ತದೆ. *ಸೌಂದರ್ಯಶಾಸ್ತ್ರೀಯ ಮಾಪನವನ್ನು ಮೀರಿಬೆಳೆದ ಸೌಂದರ್ಯಶಾಸ್ತ್ರೇತರ (ಪೋಸ್ಟ್-ಎಸ್ತೆಟಿಕ್ಸ್) ನೆಲೆಯ ಕಲಾಕೃತಿಗಳ ಸಾಲಿಗೆ ಹೀಗೆ ಸೇರ್ಪಡೆಯಾಗುತ್ತವೆ ಇವರ ಕೃತಿಗಳು.* ಅಂದರೆ ಇವರ ಪರಿಚಯವಿಲ್ಲದೆ ಹಾಗೂ ಇವರ ಬಗ್ಗೆ ತಿಳುವಳಿಕೆ ಇರಿಸಿಕೊಂಡು ಇವರ ಕೃತಿಗಳನ್ನು ನೋಡಿದಾಗ ಎರಡು ಭಿನ್ನ ಅನುಭವವಾಗುತ್ತದೆ. ಮೊದಲನೆಯ ಕ್ರಮದಲ್ಲಿ ಇವರ ಕೃತಿಗಳು ಸಪ್ಪೆ. ಎರಡನೆಯ ನೋಟಕ್ರಮವೇ ಇವರಿಗೆ ಹೊಂದಿಕೊಳ್ಳುವುದಾಗಿದ್ದು, ಮೊದಲ ನೋಟಕ್ರಮವು 1960ರ ದಶಕದ ಭಾರತೀಯ ವಿಮರ್ಶೆ ಹುಟ್ಟುಹಾಕಿದ ಒಂದು ಕಾಲ್ಪನಿಕ ಮಾಪನ ಕ್ರಿಯೆಯಷ್ಟೇ.

*ಕಲಾಕೃತಿ ತಾನಾಗಿಯೇ ಮಾತನಾಡಿದ್ದು ಕಲಾ ಇತಿಹಾಸದಲ್ಲಿ ಇಲ್ಲವೇ ಇಲ್ಲ.* ಪದಗಳು, ಮಾತು, ವಾಚ್ಯತೆ, ಅಕ್ಷರ, ದಾಖಲಾತಿಯ ಉದ್ದೇಶವುಳ್ಳ ದೃಶ್ಯ-ಚಲನದೃಶ್ಯ ಮಾಧ್ಯಮಗಳ ಸಹಾಯವಿಲ್ಲದೆ ಯಾವುದೇ ಸಂಸ್ಕೃತಿಯಲ್ಲಿ ಸ್ವೀಕೃತವಾಗಿರುವ ದೃಶ್ಯಕಲಾಕೃತಿ ಇಲ್ಲವೇ ಇಲ್ಲ. ಇದ್ದಲ್ಲಿ ಅಂತಹುದನ್ನು 'ಕಲಾಕೃತಿ' ಎಂದು ಕರೆಯಲು ಸಾಧ್ಯವೇ ಇಲ್ಲ. ಇದಕ್ಕೆ ಉದಾಹರಣೆಯಾಗಿ ಶ್ರವಣಬೆಳಗೊಳದ ಗೊಮ್ಮಟನ ಮೂರ್ತಿಯನ್ನು ಪರಿಗಣಿಸಿ ನೋಡಿ. ಅದನ್ನು 'ಕಲಾಕೃತಿ'ಯಾಗಿಸುವ ಪ್ರಯತ್ನವು ಮೇಲ್ಕಾಣಿಸಿದ ಯಾವುದೇ ಸ್ವೀಕೃತ ಮಾಧ್ಯಮ-ದೃಶ್ಯವ್ಯಾಕರಣದ ಮೂಲಕ ಆಗದಿರುವುದರಿಂದ ಅದನ್ನು ಕಲಾಕೃತಿಯಾಗಿ ನೋಡಲಾಗಿಲ್ಲ, ಇಂದಿನವರೆಗೂ. *5*

ಕೇವಲ ಕಣ್ಣಿನ ಪಾಪೆಗೆ (ರೆಟಿನ) ಪ್ರಭಾವಕಾರಿಯಾಗಿ ಕಾಣುವುದು ಮಾತ್ರ ಕಲೆ ಮತ್ತು ಒಳ್ಳೆಯ ಕಲೆಯಾಗುವುದಾದರೆ ಜರ್ಮನ್ ಎಕ್ಸ್‌ಪ್ರೆಷನಿಸ್ಟ್ ಕೃತಿಗಳು ಹಾಗೂ ಜನಪ್ರಿಯ ಕಲೆ ಮಾತ್ರ ಒಳ್ಳೆಯ ಕೃತಿಯಾಗಬಹುದೇನೋ. *ಇಂತಹ ಸರಳೀಕೃತ ಕಲ್ಪನೆಗಳ ಸಂಕೀರ್ಣ ತಾತ್ವಿಕತೆಯ ಕಾರಣಗಳಿಂದಾಗಿ ಮತ್ತು ಸರಿ ಕಲ್ಪನೆಗಳ ದಾರಿದ್ರ್ಯದಿಂದಾಗಿಯೇ ಗೌಡರ ಕೃತಿಗಳು ಸೂಕ್ತ ಕಾಲಕ್ಕೆ, ಸೂಕ್ತ ಪರಿಸರದಲ್ಲಿ, ಸೂಕ್ತ ತಾತ್ವಿಕ ಓದಿಗೆ-ಬೆಂಗಾಲ್ ಶಾಲೆಯ ಶಾಂತಿನಿಕೇತನದ ಕಲಾವಿದರಿಗೆ ದಕ್ಕಿದಂತೆ - ದಕ್ಕಲಿಲ್ಲ. ಇದೊಂದು ಅಂಚು-ಕೇಂದ್ರ ಸಾಂಸ್ಕೃತಿಕ ರಾಜಕಾರಣದ ಜ್ವಲಂತ ಉದಾಹರಣೆ.*

ಚಿಕಿತ್ಸಕ ಕಲಾವಿದರಾಗಿ ರೂಪುಗೊಂಡ ನಂತರ ವೈದ್ಯವೃತ್ತಿ ರೂಢಿಸಿಕೊಂಡವರು ಗೌಡರು. 'ಸ್ಥಳೀಯತೆ'ಯನ್ನು ('ರೀಜನಲ್ ಸ್ಕೂಲ್ ಆಫ್ ಥಾಟ್') ಒಂದು ಆದರ್ಶವನ್ನಾಗಿ, ಹೆಚ್ಚು ನಿಸರ್ಗ ಚಿತ್ರಣದ ಮೂಲಕ ಗೌಡರು ಬಳಕೆಗೆ ತಂದದ್ದಕ್ಕೆ

ಕಾರಣ ಶಾಂತಿನಿಕೇತನದ ಆದರ್ಶ ಎಂದು ಮೊದಲಿಗೆ, ಎಂದಿನಂತೆ ತಪ್ಪಾಗಿ ಭಾಸವಾಗಬಹುದು. ಆದರೆ ಮೂಲ ಶಾಲೆಯಿಂದಲೇ ಇವರ ಕೃತಿಗಳು ವ್ಯತ್ಯಾಸಗೊಳ್ಳುತ್ತವೆ, ಕೆ. ವೆಂಕಟಪ್ಪನವರ ಕೃತಿಗಳಂತೆ. ಅವರ ಕೃತಿಗಳು ಜೆ.ಜೆ.ಕಲಾಶಾಲೆಯ ಅಕಾಡೆಮಿಕ್, ಬೆಂಗಾಳ್ ಶಾಲೆ ಹಾಗೂ ಕಲ್ಕತ್ತ ಶಾಲೆಯ ವಿಕ್ಷಿಪ್ತ ಸಮ್ಮಿಳನವಾಗಿ ಕಾಣುತ್ತವೆ. *6* ಕೇಂದ್ರದ ಕಲಾತತ್ವವೊಂದು ಸ್ಥಳೀಯವಾಗಿ ಅನುಷ್ಠಾನಗೊಳ್ಳುವಾಗ ಕೇಂದ್ರಕ್ಕೆ ಧಕ್ಕದ, ಅರ್ಥವಾಗದ ಅನೇಕ ಅನುಸಂದಾನಗಳು ಉಂಟಾಗುತ್ತದೆ. ಅಂತೆಯೇ, ಗೌಡರ ಕೃತಿಗಳಲ್ಲಿ ನಿಸರ್ಗವಿದೆ. ಆದರೆ ಶಾಂತಿನಿಕೇತನದ ಭೌತಿಕ ಹಾಗೂ ತತ್ವದ ಪರಿಧಿಯ ಒಳಗೇ ಇದ್ದವರು ಬಿಡಿಸಿದ ನಿರ್ಮಮಕಾರದ, ಪುತ್ಥಳಿಯಂತಹ ಸ್ಥಳೀಯ ಜನಜೀವನದ ಚಿತ್ರಣವಿಲ್ಲಿಲ್ಲ. ಏಕೆಂದರೆ ಮೂಲತಃ ಅವರೆಲ್ಲ ಬೆಂಗಾಲ್ ಗ್ರಾಮೀಣ ಸಂಸ್ಕೃತಿ ಬಿಂಬಿಸುವ ಮಾನವ, ಪ್ರಾಣಿ, ಪಶುಪಕ್ಷಿ, ನಿಸರ್ಗ ದೃಶ್ಯಗಳನ್ನು ಬಿಡಿಸಿದವರು. ಕರ್ನಾಟಕದ ಗ್ರಾಮೀಣ ಶೈಲಿಗೂ ಅಲ್ಲಿಗೂ ಅಜಗಜಾಂತರ ವ್ಯತ್ಯಾಸ. ಉದಾಹರಣೆಗೆ, ಕರ್ನಾಟಕದ ನಿಸರ್ಗ ದೃಶ್ಯಗಳಲ್ಲಿ (ಉತ್ತರದಿಂದ ದಕ್ಷಿಣ ಕರ್ನಾಟಕ ಕಲಾವಿದರವರೆಗೂ) 'ಒಂಟಿಯಾಗಿರುವುದರ' ಬಗ್ಗೆ 'ಏಕಾಂಗಿತನವೆನ್ನುವುದಿಲ್ಲ'. ಬೆಂಗಾಲ್ ಶಾಲೆಯ ಚಿತ್ರಗಳು ಈ ಏಕಾಂಗಿತನವನ್ನು, ಅದರ ಸಾಧಕ ಬಾಧಕಗಳನ್ನು ಚೀನದ ಝೆನ್ ಕ್ಯಾಲಿಗ್ರಾಫಿ ಚಿತ್ರಗಳಂತೆ, ಅವುಗಳಿಂದಲೇ ಪ್ರಭಾವಿತವಾಗಿ, ಒಂದು 'ಉತ್ಸವದಂತೆ' ಆಚರಿಸುವುದು ಕಂಡುಬರುತ್ತದೆ. ತದ್ವಿರುದ್ಧವಾಗಿ, ಕನ್ನಡಿಗರ ಆತ್ಮಕ್ಕೆ ಆತ್ಮೀಯವಾದ ಈ ಒಂಟಿತನ, ಪರರೊಂದಿಗೆ ಸುಲಭವಾಗಿ ಬೆರೆಯಲು ಸಂಕೋಚ ಇತ್ಯಾದಿಯ ಚಿತ್ರಣ ಬೆಂಗಾಲ್ ಶಾಲೆಯ ಕೇಂದ್ರ ಕೃತಿಗಳಲ್ಲಿ ಕಂಡುಬರದು. ಅದರ ಚಿಂತನೆಯ ಶಾಲೆಯ ಒಂದು ಭಾಗವೇ ಆಗಿರಬಲ್ಲ ಕನ್ನಡದ ಒಂಟಿತನವನ್ನು ಕೇಂದ್ರ ಚಿಂತನ ಮಾಲೆಯ ಒಂದು ಶತಮಾನದ ಬೆಂಗಾಲ್ ಕಲಾಚರಿತ್ರೆಯು ನಿರಾಕರಿಸುತ್ತದೆ.*7*

## (ಊ) ಆಂತರಿಕ ವಲಸೆಯ ಸಾಂಸ್ಕೃತಿಕ ಹಿನ್ನೆನಪು

*ಕಲೆ ಎಂಬುದು ಒಂದು ಸಾಮಾಜಿಕ ತೊಡಗಿಸಿಕೊಳ್ಳುವಿಕೆ. ಇದು ಹಾಗೂ ಇತರೆ ಜನಸಾಮಾನ್ಯ ತೊಡಗಿಸಿಕೊಳ್ಳುವಿಕೆಯ ನಡುವಣ ವ್ಯತ್ಯಾಸವನ್ನು ತೊಡೆದು ಹಾಕಿದುದು ಕಲಾವಿದ ಶಂಕರಗೌಡರ ಜೀವನದ ಒಟ್ಟು ಸಾರಾಂಶ.* ಮುಂದೆ ಈ ಲೇಖನವನ್ನು ಓದುವ ಮುನ್ನ ಶಂಕರಗೌಡರ ಬಗೆಗಿನ ಈ ದೀರ್ಘ ಲೇಖನ ಅಥವ ಪುಟ್ಟ ಪುಸ್ತಕದ ಹಂದರವನ್ನು ಕುರಿತು ಒಂದೆರೆಡು ಅಂಶಗಳನ್ನು ಸ್ಪಷ್ಟವಾಗಿ ಅರ್ಥಮಾಡಿಕೊಳ್ಳಬೇಕಾಗಿದೆ.



ಕಳೆದ ಶತಮಾನದ ಐವತ್ತರ ದಶಕದಲ್ಲಿ ಕಲಾವೃತ್ತಿ ಆರಂಭಿಸಿದ ಗೌಡರು ತಮ್ಮ ಮೊದಲ ಸಮಗ್ರ ಪ್ರದರ್ಶನ (ರೆಟ್ರೊಸ್ಪೆಕ್ಟ್) ವನ್ನು ಏರ್ಪಡಿಸಿದ್ದು 2006ರಲ್ಲಿ, ಐದು ದಶಕ ಅಥವ ಒಂದು ಶತಮಾನದ ನಂತರವೇ! ಪ್ರದರ್ಶನ, ಅದನ್ನು ಏರ್ಪಡಿಸಲು ಅವಶ್ಯಕವಿರುವ ಕಲಾಪ್ರದರ್ಶನದ ಗ್ಯಾಲರಿ ಆರ್ಥಿಕತೆ ಇತ್ಯಾದಿಗಳ ಪರಿಧಿಯ ಹೊರಗಿನ ಕಲ್ಪನೆಯಲ್ಲಿ ಮೂಲಭೂತವಾಗಿ ರೂಪುಗೊಂಡದ್ದು ಬೆಂಗಾಲ್ ಕಲಾಶಾಲೆ. ಗ್ಯಾಲರಿಗಳು ಹುಟ್ಟುವ ಮುನ್ನ ತಾತ್ವಿಕವಾಗಿ ಅಂತ್ಯ ಕಂಡದ್ದು ಬೆಂಗಾಲ್ ಶಾಲೆ. ಅಲ್ಲಿ ಕಲಾಸೃಷ್ಟಿ

ಒಂದು 'ಬದುಕಿನಶೈಲಿ'ಯಾಗಿತ್ತೇ ಹೊರತು ಒಂದು ವೊಕೇಶನ್ ಅಲ್ಲ. ಮೊದಲ ವರ್ಗದಲ್ಲಿ ಕಲಾಕೃತಿ ರಚಿಸುವುದಕ್ಕೂ ಒಂದು ಮೇಜನ್ನು ಅತ್ತಲಿಂದ ಇತ್ತ ಸರಿಸುವುದಕ್ಕೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಇತ್ತೀಚಿನವರೆಗೂ ಶಾಂತಿನಿಕೇತನ ಕ್ಲಾಸ್‌ರೂಮ್ ಶಾಲೆಗಳಲ್ಲಿ ಮೇಜು ಕುರ್ಚಿಗಳೂ ಇರಲಿಲ್ಲವೆಂಬುದು ಕೇವಲ ಲೇವಡಿಯೂ ಅಲ್ಲ. ಡೊಮೆಸ್ಟಿಕ್ ಮತ್ತು ಆರ್ಟಿಸ್ಟಿಕ್ ಮಧ್ಯೆ ವ್ಯತ್ಯಾಸ ಅಂತಲ್ಲಿ ಮಾಯ. ಕಲಾತ್ಮಕ 'ಎಂಪಥಿ'ಗೂ ದೈನಂದಿನ 'ಸಿಂಪಥಿ'ಗೂ ಇರುವ ವ್ಯತ್ಯಾಸವೂ ಇಂತಹ ಸಂದರ್ಭದಲ್ಲಿ ಇಲ್ಲವಾಗುತ್ತದೆ. ಪಾಶ್ಚಾತ್ಯ ನವ್ಯ (ಮಾಡರ್ನ್) ಕಲಾ ಇತಿಹಾಸದಲ್ಲಿ ಬಾಹೌಸ್ ವಾಸ್ತುಕಲೆ, ದೃಶ್ಯಕಲೆ, ಕರಕುಶಲ ಕಲೆ ಇತ್ಯಾದಿ ಸಂಸ್ಕೃತಿಯಿಂದ ಪ್ರಾರಂಭಗೊಂಡ ಇಂತಹ ಪರಿಕಲ್ಪನೆಯು ಜರ್ಮನಿಯ ಜೋಸಫ್ ಬಾಯ್ಸ್ ಅಂತಹವರ ಸೌಂದರ್ಯಶಾಸ್ತ್ರೋತ್ತರ (ಪೋಸ್ಟ್–ಏಸ್ತೆಟಿಕ್) ಪರಿಕಲ್ಪನೆಯ 'ಸಾಮಾಜಿಕ ಶಿಲ್ಪ'ದವರೆಗೂ ('ಸೋಷಿಯಲ್ ಸ್ಕಲ್ಪ್ಚರ್') ಪ್ರೌಢವಾಗಿ ಬೆಳೆದು ಬಂದುದು ಈ ನೋಟ–ಸಂಸ್ಕೃತಿ. ಗೌಡರ ಕೃತಿಗಳು ಈ ಅರ್ಥದಲ್ಲಿ 'ಕಲಾತ್ಮಕ' ಹಾಗೂ 'ದೈನಂದಿನ' ನಡುವೆ ಒಂದು ಅನುಸಂಧಾನವನ್ನು ಅದೆಷ್ಟು ತೀವ್ರವಾಗಿ ಏರ್ಪಡಿಸುತ್ತವೆ ಎಂದರೆ ಅವರನ್ನು ಕಲಾವಿದರೆಂದೂ, ಅವರ ಕೃತಿಗಳನ್ನು ಕಲೆಯೆಂದು ಒಪ್ಪುವುದೇ ಕಷ್ಟಕರವಾಗುವಂತೆ ಬೇರೆ ಯಾವುದೋ ಒಂದು ಮಾನದಂಡವೇ ದಂಡಿಯಾಗಿರುವಂತೆ ಕಾಣುತ್ತದೆ.

ರೆನಾಯಸಾನ್ಸ್ ಕಾಲದಿಂದ ಆರಂಭಗೊಂಡ ಪಾಶ್ಚಾತ್ಯ ದೃಶ್ಯಭಾಷೆಯಲ್ಲಿ ಅದೇ ವಸ್ತುಗಳಿಗೆ ಬೇರೆ, ಭಿನ್ನ, ವಿಭಿನ್ನ ಅರ್ಥಗಳನ್ನು ನೀಡಲಾಗುತ್ತಿತ್ತು. ಉದಾಹರಣಗೆ ತೈಲವರ್ಣ. ವಸ್ತುವಿಕತೆಗಿಂತಲೂ ಅದರ ರೂಢಿಗತ ವಸಾಹತು ಮನೋಭಾವವನ್ನು ಒಡೆಯುವ ಉದ್ದೇಶವೇ ತೈಲವರ್ಣವನ್ನು – ಗೌಡರು ಕಲಿತ – ಕಲಾಶಾಲೆಯು ಹೆಚ್ಚಾಗಿ ನಿರಾಕರಿಸಲು ಕಾರಣ. ಅವರು ***ರೂಢಿಗತವಾಗಿ ಚಿತ್ರಿತವಾಗುವ ಭೌತಿಕ ಜಗತ್ತಿಗೆ ಹೊಸ ಅರ್ಥ ನೀಡುವ ಬದಲು ಹೊಸ ಅರ್ಥವೊಂದಕ್ಕೆ ಸೂಕ್ತವಾದ ವಸ್ತುವನ್ನು ಕಲಾತ್ಮಕವಾಗಿ ಬಳಸುವುದು ಹೊಸ ಮಾಧ್ಯಮದ ಕಲಾವಿದರ ಮುಖ್ಯ ಚಟ.*** ಈ ಹಿನ್ನೆಲೆಯಲ್ಲಿ ಗೌಡರದ್ದು ಮಧ್ಯಮ ಮಾರ್ಗ. ಹಳೆಯ ವಸ್ತುಗಳನ್ನು ಬಳಸಿ, ಹೊಸ ತಂತ್ರಗಾರಿಕೆಯನ್ನು ಬಳಸಿದ್ದು ಭಿನ್ನವಾಗಿ. "ಬೆನ್ನೆಲುಬಿಲ್ಲದ, ಗೂರಲು ರೋಗಿಗಳಂತೆ ಕಾಣುವ ವ್ಯಕ್ತಿಗಳ ಚಿತ್ರಣವನ್ನು ಬೆಂಗಾಲ್ ಚಿತ್ರಗಳು ಎನ್ನುತ್ತೇವೆ", ಎಂದು ಶಿವರಾಮ ಕಾರಂತರ ಕೈಲಿ ವ್ಯಂಗ್ಯವಾಡಿಸಿಕೊಂಡ ಬೆಂಗಾಲದ ವಾಷ್ ತಂತ್ರವೇ ಗೌಡರ ವಾಷ್ ಚಿತ್ರಣ ತಂತ್ರ ಸಹ. ಈ ತಂತ್ರದಲ್ಲಿ (ತೈಲವರ್ಣ ಚಿತ್ರಣ ತಂತ್ರವನ್ನು ಹೋಲಿಸಿದರೆ) 'ಕಳೆಯುವುದರ' ಮೂಲಕವೂ 'ಕೂಡುವ' ಸಾಧ್ಯತೆಗಳಿವೆ.

ಇದನ್ನು ಇನ್ನೂ ಸರಳಗೊಳಿಸಿ ಹೇಳಬಹುದು. ವಾಷ್ ತಂತ್ರದಲ್ಲಿ ಜಲವರ್ಣವನ್ನು ಪದೇಪದೇ, ಪದರಪದರವಾಗಿ ಬಳಿಯಲಾಗುತ್ತದೆ. ಕಾಗದವು ಹೀರಿಕೊಂಡ ಬಣ್ಣಗಳನ್ನು ಹೊರತುಪಡಿಸಿ ಮೇಲ್ಮೈಯಲ್ಲೇ ಉಳಿದುಕೊಂಡ ವರ್ಣವನ್ನು ತೊಳೆದು ತೆಗೆದು ಹಾಕಲಾಗುತ್ತದೆ. "ಪುನರಪಿ ಚಿತ್ರಣ, ಪುನರಪಿ ಶುದ್ಧೀಕರಣ" ಎಂಬಂತಹ ಚಿತ್ರಣ ಕ್ರಮವಿದು. ಆಗ ವಾಷ್ ಟೆಂಪರ ತಂತ್ರಗಾರಿಕೆಯುಳ್ಳ ಚಿತ್ರಗಳಲ್ಲಿ ಬೆಳಕು ಒಳಗಿನಿಂದ

ಹೊಮ್ಮಿದಂತೆನಿಸುತ್ತವೆ. ಆದ್ದರಿಂದಲೋ ಏನೋ ಅಂತಹ ಚಿತ್ರಗಳೊಳಗಿನ ಆಕಾರಗಳಲ್ಲಿ ಸೂರ್ಯನ ಬೆಳಕಿನ ಕೃತಕ ನೆಳಲು-ಬೆಳಕು ಕಂಡುಬರದು (ಉದಾಹರಣೆ : ಭಾರತೀಯ ಮುಘಲ್, ರಾಜಸ್ಥಾನಿ ಮಿನಿಯೇಚರ್ ಚಿತ್ರಗಳು ಹಾಗೂ ಅಭನೀಂದ್ರನಾಥ, ಚುಗ್ತಾಯ್, ನಂದಲಾಲ್ ಬೋಸ್ ಮುಂತಾದವರ ಚಿತ್ರಗಳು). ಒಳಗಿನಿಂದ ಹೊಮ್ಮುವ ಬೆಳಕನ್ನು ನಿರ್ದಿಷ್ಟವಾಗಿ ನಾಯಕ-ನಾಯಿಕೆಯರ ಮಿನಿಯೇಚರ್ ಚಿತ್ರಗಳಲ್ಲಿ 'ದಿವ್ಯಬೆಳಕು' ಎಂಬಂತೆ ಓದುವ ಕ್ರಮ ಅದ್ಭುತ. ಇದನ್ನು ಮಿನಿಯೇಚರ್ ಕಲಾಇತಿಹಾಸಕಾರರಲ್ಲಿ ಅಪರೂಪಕ್ಕೆಂಬಂತೆ ಗುಲಾಂ ಮೊಹಮ್ಮದ್ ಶೇಕ್ ಮಾಡಿದ್ದಾರೆ. ಇತರೆ ಇತಿಹಾಸಕಾರರಿಗೆ ಆ ಬೆಳಕನ್ನು ನೋಡಲಾಗದ ಅಂಧಕಾರ ಕವಿದಂತಿದೆ. ಬಹುಪಾಲು ಗೌವಶ್ ವಾಶ್ ಕಲಾವಿದರು ತಮ್ಮ ಚಿತ್ರಣ ತಂತ್ರದ ಗುಟ್ಟುಬಿಟ್ಟುಕೊಡುವುದಿಲ್ಲ. ಅಂತಹವರು ಭಾವಿಸುವುದೇನೆಂದರೆ ಅದ್ಯಾವುದೋ 'ಒಂದು, ನಿರ್ದಿಷ್ಟ' ವಾಷ್ ತಂತ್ರವಿದೆ ಎಂದು. ಆದರೆ ಇಟ್ಯಾಲಿಯನ್ ರೆನಾಯಸಾನ್ಸ್ ಕಾಲದ ವಾಷ್ ತಂತ್ರದಿಂದಾರಂಭಿಸಿ ಮುಘಲ್, ಬೆಂಗಾಲ್ ವಾಷ್ ತಂತ್ರದವರೆಗೂ ನೂರಾರು ವರ್ಷಗಳ, ಸಾವಿರಾರು ಮೈಲಿಗಳ, ಲಕ್ಷಗಟ್ಟಲೆ ಕಲಾವಿದರಲ್ಲಿ ವ್ಯತ್ಯಾಸಗಳಿವೆ ಎಂಬುದನ್ನೇ ಅನೇಕರು ಒಪ್ಪಲಾರದು. ಈ ಪ್ಯಾರಾದ ವಿಶ್ಲೇಷಣೆಯನ್ನೇ ಕೆಲವರು ಒಪ್ಪರು ಎಂಬ ಸತ್ಯದ ಹಿಂದೆ ವಾಷ್ ತಂತ್ರದ ವಿಶ್ವರೂಪದ ಇಣುಕುನೋಟ ಸಾಧ್ಯವಾಗುತ್ತದೆ.

ಐವತ್ತು ವರ್ಷಗಳ ವ್ಯತ್ಯಾಸದಲ್ಲಿ ಗೌಡರ ಚಿತ್ರಗಳಲ್ಲಿ ಕಂಡುಬರುವ ಒಂದು ವ್ಯತ್ಯಯವೆಂದರೆ ಉದ್ದೇಶಪೂರ್ವಕವಾಗಿ ಕ್ಷೀಣಗೊಳಿಸಲಾಗುತ್ತಿರುವ ತಂತ್ರದ್ದೇ! ಅಂದರೆ ಬಾಹೌಸ್ ಸಂಸ್ಕೃತಿಯಂತೆಯೇ ಇವರ ಚಿತ್ರಗಳಲ್ಲಿಯೂ ಶೃಂಗಾರಗೊಳಿಸುವ, ವಿವರಿಸುವ ಗುಣ ಕಡಿಮೆ. ಅತಿ ವಿವರವನ್ನು, ಬಳ್ಳಿ, ಲತೆ, ಬಳಕು, ಬಾಗುವಿಕೆಗಳನ್ನು ಬಲವಂತವಾಗಿ ಹೊರದೂಡಲಾಗಿದೆ ಇಲ್ಲಿ. ಬಾಹೌಸರ 'ಅಂತರರಾಷ್ಟ್ರೀಯ ಶೈಲಿ'ಯ ('ಇನ್ಟರ್‌ನ್ಯಾಷನಲ್ ಸ್ಟೈಲ್') ಮೂಲೋದ್ದೇಶವೇ ಇದು. ಯಾವುದೇ ವಿಷಯವನ್ನು ಗೌಡರು ಚಿತ್ರಿಸಿರಲಿ, ಅಲ್ಲಿ ಮೊದಲಿಗೆ 'ಸರಳವಾಗಿರುವುದು ಎಷ್ಟು ಸಂಕೀರ್ಣ'ವೆಂಬುದರ ಚಿತ್ರಣಕ್ಕೇ ಮೊದಲ ಆದ್ಯತೆ! ಏಕೆಂದರೆ ಇವರ ಚಿತ್ರಗಳ ಮೇಲ್ಮೈಯ ಮೇಲಿರುವುದಕ್ಕಿಂತಲೂ ಅವುಗಳ ಆಳಕ್ಕಿರಬಹುದಾದ ಸತ್ವದ ಕಡೆಯೇ ಹೆಚ್ಚು ಗಮನ ನೀಡಲಾಗಿದೆ. ತದ್ವಿರುದ್ಧವಾಗಿ ಗ್ರೀನ್‌ಬರ್ಗ್ ಚಿತ್ರವೊಂದರ ಮೇಲ್ಮೈನ ಪ್ರತಿಪಾದಕ. ***ಈ 'ಮೇಲ್ಮೈ' ಆಳದ ನಡುವಿನ ಸಮರವೇ ದೃಶ್ಯಕಲೆಯಲ್ಲಿ ಮಾಡರ್ನಿಟಿಯನ್ನು ನಿರ್ಧರಿಸಿರುವುದು ಎಂದರಿತರೆ ಗೌಡರ ಪ್ರಯತ್ನದ ಆಳ-ಅರಿವು ಅರ್ಥವಾದೀತು.*** ಹೆಬರ್ಮಾಸ್, ಬೌದ್ರಿಲಾರ್ಡ್, ಗ್ರೀನ್‌ಬರ್ಗರ ನಡುವಣ ತಾತ್ವಿಕ ಸಮರದ ಕೇಂದ್ರ ವಿಷಯವೇ ಕ್ಯಾನ್ವಾಸೊಂದರ 'ಮೇಲ್ಮೈ-ಆಳದ' ನಡುವಿನ ಕದನ!



ಗೌಡರದ್ದು ಸರಳವಲ್ಲದ ಆದರೆ ಸಹಜವಾದ ದೃಶ್ಯಗಳು. ಅವುಗಳಲ್ಲಿ ನಿಸರ್ಗ ನೋಟಗಳೇ ಹೆಚ್ಚಾಗಿ ಕಣ್ಣಿನ ಪಾಪೆಗೆ ಗೋಚರಿಸುವುದು. ಚಿತ್ರದ ಒಳಗೂ, ಹೊರಗೂ 'ಅಂದೊಮ್ಮೆ' ಆಸ್ತಿತ್ವದಲ್ಲಿ ಇದ್ದಂತಹ ದೃಶ್ಯಗಳಿವು. ಇಂದು ಚಿತ್ರದ 'ಒಳಗೆ' ಆ ದೃಶ್ಯಗಳುಂಟು, ಹೊರಗಿಲ್ಲ. ಹೊರಗೆ ಅವುಗಳನ್ನು ಕಾಂಕ್ರೀಟು ಜಂಗಲ್‌ಗಳಾಗಿ

ಸ್ಥಳಾಂತರಿಸುವ ಮೂಲಕ ಆ ಮಾಯವಾದ ನಿಸರ್ಗ ದೃಶ್ಯಗಳ ನೆನಪನ್ನು 'ಬಾಧೆ'ಯನ್ನಾಗಿ ಮಾರ್ಪಡಿಸಲಾಗಿದೆ ಎಂಬುದೊಂದು ಅಚ್ಚರಿ. ಅಂತಹ 'ಬಾಧೆ'ಯನ್ನು ಉಲ್ಬಣಿಸುವ ಸಾಮರ್ಥ್ಯ ಗೌಡರ ನಿಸರ್ಗದೃಶ್ಯಗಳಿಗಿವೆ. ಈ ವ್ಯತ್ಯಾಸಕ್ಕೆ ಕಾರಣಗಳು ಕಳೆದ ಐದು ದಶಕಗಳ ಕರ್ನಾಟಕದ ರಾಜಕೀಯ, ಸಾಮಾಜಿಕ, ಆರ್ಥಿಕ ಕಾರಣಗಳಂತಹ ಆಳವಾದ ಬದಲಾವಣೆಗಳು. ಈಗಲೂ ಈ ಕಲಾವಿದ, ಹೊರಗಿನ ದೃಶ್ಯ ಬದಲಾಗಿದ್ದರೂ ಒಳಗಿನದನ್ನು ಹಾಗೆಯೇ ಚಿತ್ರಿಸುತ್ತಿರಲು ಕಾರಣ ಈ ಬದಲಾವಣೆಗಳನ್ನೇ ಕಡೆಗಣಿಸುವ ಗಾಂಧಿಯನ್ ಧೋರಣೆ. *8*

*ಸೌಂದರ್ಯಶಾಸ್ತ್ರೀಯ ದೃಷ್ಟಿಯಿಂದ ಹೇಳಬಹುದಾದರೆ ಕ್ಯಾನ್ವಾಸೊಂದರ ಭೌತಿಕ ಮೇಲ್ಮೈಯ ವಿವರ ತೀವ್ರಗೊಳಿಸಿದರೆ ಅದರ ಅಂತರಾಳದ, ಆದಿಭೌತಿಕ ಅರ್ಥ ಒಡೆದು ಹೋಗುತ್ತದೆ. ಮೇಲ್ಮೈಯನ್ನು ಅತಿ ಸರಳಗೊಳಿಸುತ್ತ ಸಾಗಿದರೆ ಗಮನ ಅಲ್ಲಿಯೇ ನೆಲೆಸಬಹುದೆಂಬುದೇ ಗೌಡರ ದೃಷ್ಟಿ-ಧೋರಣೆ. ಕಳೆದೈವತ್ತು ವರ್ಷಗಳಲ್ಲಿ ಎಲ್ಲೆಡೆಯಾದಂತೆ ಕರ್ನಾಟಕದ ಭೂಪ್ರದೇಶಗಳೂ ಮಾರ್ಪಾಡಾದಾಗ ಅವುಗಳನ್ನು ಆಗ, ಅವುಗಳ ಎದಿರು ಕುಳಿತು, ಈಗ ಅವುಗಳ ಆಗಿನ ಇರುವಿಕೆಯ ನೆನಪನ್ನು ಬಗೆದು ಚಿತ್ರಿಸಿ ವಿಚಿತ್ರ ರೀತಿಯ ದೃಶ್ಯಗಳನ್ನು ಕಟ್ಟಿಕೊಟ್ಟಿದ್ದಾರೆ ಗೌಡರು.* ಕೈಗಾರೀಕಣವುಂಟಾದ ಕಾಲಕ್ಕೇ ನಿರ್ದಿಷ್ಟವಾಗಿ ಇಂಗ್ಲೆಂಡಿನಲ್ಲಿ ರೊಮ್ಯಾಂಟಿಕ್ ಭಾವ ಹಾಗೂ ನಿಸರ್ಗ ಚಿತ್ರಣ ಒಟ್ಟಿಗೆ ಹುಟ್ಟಿಕೊಳ್ಳಲು ಕಾರಣವೇ ಈ ಹಿನ್ನೆನಪು. ಇದನ್ನು ನಾಸ್ಟಾಲ್ಜಿಯ ಎನ್ನುತ್ತೇವೆ. ಇಪ್ಪತ್ತನೇ ಶತಮಾನದಲ್ಲಿ ವಲಸಿಗ, ಡಯಸ್ಪೋರಿಕ್ ಸಂಸ್ಕೃತಿ ಹೆಚ್ಚಾದಷ್ಟೂ ಈ ನಾಸ್ಟಾಲ್ಜಿಯದ ಕಾಟವೂ ಹೆಚ್ಚಾಗಿದೆ, ಪರದೇಶಿಯಾದವರಲ್ಲಿ. ಇಲ್ಲಿದ್ದುಕೊಂಡೇ ಪರದೇಶೀ ಭಾವ ಅನುಭವಿಸುವವರು ಕಾರಣಾಂತರಗಳಿಂದ ಊರು ಬಿಟ್ಟು ಹೋದವರೇ ಹೊರತು ದೇಶವನ್ನೇ ಬಿಟ್ಟು ಹೋದವರಲ್ಲ. ಒಂದೇ ಸಂಸ್ಕೃತಿಯುಳ್ಳವರ ನಡುವೆ ವಲಸೆ ಬಂದು ನೆಲಸುವುದು ಬೇರೆ, ಪರದೇಶದ ಬೇರೆಯ ಜನಾಂಗದೊಂದಿಗೇ ನೆಲೆಸುವುದು ಬೇರೆ. ಎರಡನೆಯ ಉದಾಹರಣೆಯಲ್ಲಿ ಬಿಟ್ಟು ಬಂದ ಊರಿನ ಭದ್ರತೆಗೆ ಅಪಾಯವಿಲ್ಲ. ಮೊದಲನೆಯದರಲ್ಲಿ, (ಡ್ಯಾಮ್ ನಿರ್ಮಾಣದ ಕಾಲಕ್ಕೆ ಊರಿಗೆ ಊರೇ ಗುಳೇ ಹೋಗುವಂತಹ ಸಂದರ್ಭಗಳಲ್ಲಿ) ತನ್ನಂತಹುದೇ ಸಂಸ್ಕೃತಿಯೊಂದರೊಂದಿಗೆ ಇನ್ನೂ ಬದುಕಿರುವವರ ಜೊತೆ ಬದುಕಬೇಕಾಗಿ ಬಂದಾಗ ತನಗಿಲ್ಲದ, ಅವರಿಗಿರುವ ವ್ಯಗ್ರ ಭಾವ ಉದ್ದೀಪಿತವಾಗುವುದು ಸಹಜ. ***ಗೌಡರ ಕೃತಿಗಳಲ್ಲಿ ಅಂತಹ ಆಂತರಿಕ ವಲಸೆಯ (ಇನ್ಟರ್ನಲ್ ಡಯಸ್ಪೊರ) ಜಲಕುಗಳಿವೆ.***

ಚಿತ್ರಿತ ವಸ್ತು ಅದೇ ಆದರೂ ಅದರ ಅರ್ಥ ಇಂದು 'ಬದಲಾಗಿದೆ' ಅಥವ 'ಮಾಯವಾಗಿದೆ'. ಇರುವ ಅರ್ಥಗಳನ್ನು ಕಳೆದುಕೊಳ್ಳುವ ಮೂಲಕ ಇಲ್ಲದುದರ ಅರ್ಥವನ್ನು ಪಡೆದುಕೊಳ್ಳುತ್ತವೆ ಬೆಟ್ಟದೂರರ ಭೌತಿಕ ಚಿತ್ರಗಳೊಳಗಿನ ಸ್ಮೃತಿಚಿತ್ರಗಳಲ್ಲಿ ಅಡಕವಾಗಿರುವ ಚಿತ್ರಿತ ಅಂಶಗಳು. ಡೆರಿಡನ 'ಎರೇಶರ್' (ಅಳಿಸಿಹಾಕುವಿಕೆ) ತತ್ವವು ಇಲ್ಲಿ ನಿರ್ದಿಷ್ಟ, 'ಸಮಕಾಲೀನ-ವಸಾಹತೋತ್ತರ ಅಂತರಿಕ ವಲಸಿಗ ಸಂಸ್ಕೃತಿಯ' ನೆಲೆಯಲ್ಲಿ ಕೆಲಸ ಮಾಡುತ್ತಿದೆ. ಒಂದು ಉದಾಹರಣೆಯನ್ನು ಪರಿಗಣಿಸಿ : ಸಮಗ್ರವಾಗಿ

ಬೆಟ್ಟದೂರರ ಚಿತ್ರಗಳನ್ನು ನೆನೆಸಿಕೊಂಡರೆ ವೀಕ್ಷಕನ ಸ್ಮೃತಿಯಲ್ಲಿ ಮೊದಲು ಮೂಡುವುದು ಅದು ಉಕ್ಕಿಸುವ 'ಭಾವ'ವೇ ಹೊರತು 'ದೃಶ್ಯ'ಗಳಲ್ಲ. ಕೇವಲ ಒಂದು ಹಂದರವಾಗಿ ಕಂಡುಬರುವ ದೃಶ್ಯವನ್ನು (ಟೆಕ್ಸ್‌ಚರ್) ಭಾಷಾಶಾಸ್ತ್ರದ ಭಾಷೆಯಲ್ಲಿ 'ಸಿಗ್ನಿಫೈಯರ್' ಎಂದೂ, ಅದು ಮೂಡಿಸುವ ಅರ್ಥವನ್ನು 'ಸಿಗ್ನಿಫೈಡ್' ಎಂದೂ ಕರೆಯುತ್ತೇವೆ. ಮೊದಲನೆಯದಿಲ್ಲದೆ ಎರಡನೆಯದಿಲ್ಲ, ಮೊದಲನೆಯದು ಎರಡನೆಯದು ಎಂಬ ವರ್ಗೀಕರಣವು ಮನುಷ್ಯನನ್ನು ದೇಹ–ಜೀವ ಎಂದು ವಿಂಗಡಿಸಿದಂತಾದುದರಿಂದ, ಅವೆರಡನ್ನೂ ವಿಭಾಗಿಸಲಾಗದು ಎಂಬಿತ್ಯಾದಿ ಪರ–ವಿರೋಧಮಯ ನಿಲುವುಗಳನ್ನು 'ಡಯಲೆಕ್ಟಿಕಲ್' *9* ಭಾಷಾಶಾಸ್ತ್ರೀಯ ನಿಲುವೆನ್ನುತ್ತೇವೆ. ಇದನ್ನು ಕಲಾ ಇತಿಹಾಸಕ್ಕೆ ಎರವಲು ತಂದು ಗೌಡರ ಕೃತಿಗಳನ್ನು ಹೆಚ್ಚು ಅರ್ಥಪೂಣವಾಗಿ ನೋಡಲು ಸಾಧ್ಯ. 'ಸಿಗ್ನಿಫೈಡ್' ಅನ್ನು 'ಹೊರತುಪಡಿಸಿದ' ಅಂಶಗಳು ಗೌಡರ ಕೃತಿಗಳಲ್ಲಿ ಮೊದಲು ಕಾಡಬಲ್ಲುದು, ಅವರ ಹಿನ್ನೆಲೆಯಾದ ರೈತಾಪಿ ಜೀವನದ ಬಗ್ಗೆ ಒಲವುಳ್ಳವರಿಗೆ. ವೈರುಧ್ಯಮಯ ಅಂಶವೆಂದರೆ 'ಸಿಗ್ನಿಫೈಡ್' ಅನ್ನು ಹೊರತುಪಡಿಸಿ ಯಾವುದೇ ದೃಶ್ಯವಿರುವುದು ಅಸಾಧ್ಯ. ಅದಲ್ಲಿದ್ದರೂ ಅದನ್ನು ಕ್ಯಾಂಟನ ನಿಲುವಿನಿಂದ ದೃಶ್ಯವೆಂದು ಕರೆಯಲಾಗದು. *ನಮ್ಮ ಇಂದ್ರೀಯ ಗೋಚರವಾಗುವ ವಸ್ತುಗಳಿಗೆ ಇಂದ್ರೀಯಾನುಭವದಾಚೆಗೂ ಅಸ್ತಿತ್ವ ಇರುವ ಸಾಧ್ಯತೆಯನ್ನು ಕ್ಯಾಂಟ್ ಊರ್ಜಿತಗೊಳಿಸುತ್ತಾನೆ.* ಉದಾಹರಣೆಗೆ : ಕಾಮನಬಿಲ್ಲಿನ ಹಂದರದಲ್ಲಿ ಅಲ್ಟ್ರಾವಯಲೆಟ್ ಬಣ್ಣ, ಆರನೇ ಇಂದ್ರಿಯಾನುಭವ, ದೇವರು, ದೆವ್ವ ಇತ್ಯಾದಿ. ಈ ನಿಟ್ಟಿನಿಂದ ಗೌಡರ ಕೃತಿಗಳಲ್ಲಿನ ಅನನ್ಯ, ಕ್ರಿಯಾತ್ಮಕ ಅಂಶಗಳನ್ನು ಗುರ್ತಿಸಲು ಸಿಗ್ನಿಫೈಯರ್ ಮತ್ತು ಸಿಗ್ನಿಫೈಡನ್ನು ಪರಸ್ಪರ ಬೇರ್ಪಡಿಸಲು ಕ್ಯಾಂಟ್ ನಮಗೆ ಸಹಾಯ ಮಾಡುತ್ತಾನೆ. ಗೌಡರ ಕೃತಿಗಳು ಅವರ ಸಮಕಾಲೀನ ನಿಸರ್ಗಚಿತ್ರಕಾರರಾದ ರುಮಾಲೆ, ಎನ್. ಹನುಮಯ್ಯ ಮುಂತಾದವರಿಗಿಂತ ಭಿನ್ನವಾಗುವುದು. ಈ ನಿಟ್ಟಿನಿಂದಲೇ. ಹಾಗೆ ಭಿನ್ನಗೊಳಿಸುವುದರ ಮೂಲಕ ಅವರ ಕೃತಿಗಳಲ್ಲಿನ 'ಅನನ್ಯತೆಯನ್ನು' ಗುರ್ತಿಸುವ ಪ್ರಯತ್ನವೂ ದೃಶ್ಯಕಲೆಯ ಆಧುನಿಕತೆಯ, ಗ್ರೀನ್‌ಬರ್ಗನ ಮಾಧ್ಯಮದ–ಅನನ್ಯತೆಯ ಅಭಿಪ್ಸೆಯ ಒಂದು ಭಾಗವೇ!

ಹನುಮಯ್ಯನವರ ನಿಸರ್ಗದಲ್ಲಿ ಮೂಲಧಾತು ಅದ್ಭುತ. ಅದಿಲ್ಲದಿದ್ದರೆ ಅವರ ಕೃತಿಗಳ ಕೇಂದ್ರವನ್ನು ಒಡೆದುಹಾಕಿದಂತೆ. ಆ ಒಂದು 'ನಾಸ್ಟಾಲ್ಜಿಯ'ವನ್ನು ಹಾಗೇ ಕಾಲದಲ್ಲಿ ಧೃವೀಕರಿಸಿದಂತೆ ಹಿಡಿದಿರಿಸಿರುವುದೇ ಗೌಡರ ಚಿತ್ರಗಳ ದೊಡ್ಡಸ್ತಿಕೆಯೂ ಆಗಿರಬಹುದು.



ಯಾವುದೇ ಭ್ರಮೆಗಳಿಲ್ಲದೆ ಅವರ ಕೃತಿಗಳನ್ನು ಇಂದಿನ ಸಂದರ್ಭದಿಂದ ಅವಲೋಕಿಸಬೇಕಾಗುತ್ತದೆ. ಏಕೆಂದರೆ ಅವರ ಕಲೆಯನ್ನು ಅವಲೋಕಿಸಲಿರುವ ಹಲವು ವೀಕ್ಷಣಾ/ ಗ್ರಹಣಾಕ್ರಮಗಳಲ್ಲಿ ಇದೇ ಸೂಕ್ತವಾದುದು. ಉಳಿದ ಕ್ರಮಗಳು ಮತ್ತವುಗಳ ಊನ ಹೀಗಿವೆ :

ಅ) ಕಳೆದೈದು ದಶಕದಲ್ಲಿ, ಅವರ ಕೃತಿಗಳು ಮೂಡಿಬರುವ ಹೊತ್ತಿಗೆ ಇವರ

ಸುತ್ತಮುತ್ತಲಿನ ಕೃತಿಗಳಿಗೊಂದು ನಿರ್ದಿಷ್ಟ ಅರ್ಥ, ಅನುಭವಗಲನ್ನು ನೀಡುವ ಕಲಾ ಬರಹವಿರಲಿಲ್ಲ.

ಆ) ಇದ್ದ ಬರಹಗಳು (ಜಿ. ವೆಂಕಟಾಚಲಂ, ಪಿ.ಆರ್.ತಿಪ್ಪೇಸ್ವಾಮಿ, ಬಿ.ವಿ.ಕೆ. ಶಾಸ್ತ್ರೀ ಇತ್ಯಾದಿ ವಿಮರ್ಶಕರ ಹೆಸರಿನ ನಿಯತಕಾಲಿಕ ಜರ್ನಲಿಸ್ಟಿಕ್ ಬರಹಗಾರರು) ಶಂಕರಗೌಡರ ಬಗ್ಗೆ ಬರೆದುದು ಅಪರೂಪ. ಆಗಿನಿಂದ ಈಗಿನವರೆಗೂ ಬಂದಿರಬಹುದಾದ ಅವರನ್ನು ಕುರಿತ ಬರಹಗಳೂ ಚಿತ್ರಗಳೊಳಗಿನ ವಿವರಗಳ ವಿವರಣೆ, ಕಲಾವಿದರ ಜೀವನ ಚರಿತ್ರೆಯ ವರದಿ ಇತ್ಯಾದಿಗಳು ಒಂದು ನಿರ್ಧಿಷ್ಟ ಸಾಂಸ್ಕೃತಿಕ ರಾಜಕಾರಣದ ಪ್ರತೀಕ. ಈ ವರದಿಯಾತ್ಮಕ ವಿಶ್ಲೇಷಣೆಯ ಅತ್ಯುತ್ಕಟಾವಸ್ಥೆ ಎಂದರೆ ರೂಪ ರಾಜಕಾರಣವೆ (ಫಾರ್ಮಲಿಸಂ).

ಶಂಕರಗೌಡರ ಕಲೆಯನ್ನು ಕುರಿತಂತೆ ಕೆಲವೇ ಲೇಖನಗಳನ್ನು (ಹಲವು ದಶಕಗಳ ವ್ಯತ್ಯಾಸಗಳಲ್ಲಿ ಮೂಡಿಬಂದಂತಹದ್ದು) ಆಧರಿಸಿ ಅವರ ಕೃತಿಗಳು, ಕಲಾವಿದನಾಗಿ ಅವರ ವ್ಯಕ್ತಿತ್ವ ಇತ್ಯಾದಿಗಳನ್ನು ಸಂಗ್ರಹಿಸಿ ಬರೆದುಬಿಡಬಹುದು. ಏಕೆಂದರೆ ಕರ್ನಾಟಕದ ಆಧುನಿಕ ಹಾಗೂ ಸಮಕಾಲೀನ ಕಲೆ ಕುರಿತು ಕನ್ನಡದ ಬರಹಗಳು ಅಸಹಜ, ಅನೈತಿಹಾಸಿಕ ಹೊಗಳಿಕೆಗಳಿಂದ ಕೂಡಿವೆ. ಅಂತಹ ಬರಹಗಳಿಂದಾಗಿ ಗೌಡರಂತಹವರ ಕಲಾವೃತ್ತಿಗೆ ಅಪಚಾರ ಮಾಡಿದಂತೆಯೂ ಆಗಿಹೋಗಿದೆ.

ನಗರ-ಕೇಂದ್ರಿತ ಕಲಾವಿದರ ಜನಪ್ರಿಯತೆ ಹಾಗೂ ಗ್ಯಾಲರಿಗಳ ಸಂಪರ್ಕ ಗೌಡರ ಕೃತಿಗಳಿಗೆ ದೊರಕಲಿಲ್ಲ. ಆದ್ದರಿಂದಲೇ ಇವರ ಕಲೆಯ ಜನಪ್ರಿಯತೆಗೆ ಆಗೆಲ್ಲ (ಮತ್ತು ಈಗಲೂ ಸಹ) ಅವಶ್ಯಕವಾದ ಪ್ರಚಾರ ಮಾಧ್ಯಮ, ನಗರ-ಕೇಂದ್ರಿತ ಸಹಕಲಾವಿದರೊಂದಿಗಿನ ಸಾಹಚರ್ಯ ಲಭ್ಯವಾಗದೇ ಹೋಯಿತು. ಪರಿಣಾಮವಾಗಿ ಕರ್ನಾಟಕದ ಆಧುನಿಕ ಹಾಗೂ ಸಮಕಾಲೀನ ಕಲಾಚರಿತ್ರೆಯ ಬರೆಹದ ರಾಜಕಾರಣದಲ್ಲಿ ಇವರ ಪಾತ್ರ ಬಹಳಷ್ಟು ಚಿಕ್ಕದಾಗಿದೆ. ಅಂದರೆ ಕಲಾಇತಿಹಾಸವನ್ನೇ ನಿರ್ಭಾವುಕ, ವಸ್ತುನಿಷ್ಠ ಎಂದುಕೊಳ್ಳುವವರಿಗೆ ಶಂಕರಗೌಡರ ಗ್ರಾಮೀಣ ಜೀವನ ಪ್ರೇರಿತ ಕಲಾಸೃಷ್ಟಿಯ ಸೊಗಡು ಇಲ್ಲಿಯವರೆಗೂ ಗೋಚರವಾಗಿರುವುದು. ಅತ್ಯಲ್ಪ ಎಂಬ ಪರಿಜ್ಞಾನವೂ ಇರಬೇಕಾಗುತ್ತದೆ. ವರ್ಮಿಯರ್, ವ್ಯಾನ್‌ಗೋ ಮುಂತಾದ ಕಲಾವಿದರ ಪ್ರತಿಭೆಯನ್ನು ತಡವಾಗಿ ಸಮಾಜವು ಗುರ್ತಿಸಿದಂತೆ ಗೌಡರ ಪ್ರತಿಭೆಯನ್ನು ನಾವಿನ್ನೂ ಗುರ್ತಿಸಬೇಕಿದ್ದು, ಅದು ಒಂದು ಪುಸ್ತಕದ ಇತಿಮಿತಿಯಲ್ಲಿ ಹಿಡಿದಿರಿಸುವುದು ಆಗದ ಕೆಲಸ. ಕಲಾಇತಿಹಾಸಕ್ಕೆ ಆಗದ ಕೆಲಸ, ಸಾಂಸ್ಕೃತಿಕ ಅಧ್ಯಯನಕ್ಕೆ ಸಾಧ್ಯವಾಗಬಹುದೋ ಏನೋ.



## (ಖ) ಚಿತ್ರವೊಂದರ ಹಲವು ಪರಸ್ಪರ ಪೂರಕವಲ್ಲದ ಚಿತ್ರಗಳು

ಶಂಕರಗೌಡರ ಬಗ್ಗೆ ಬರೆಯುವುದೆಂದರೆ ಆಧುನಿಕೋತ್ತರ, ಸಮಕಾಲೀನ ಸಂದರ್ಭದಿಂದ ಆಧುನಿಕ ಕಲಾವಿದರೊಬ್ಬರ ಬಗ್ಗೆ ಬರೆದಂತೆ. ಅವರ ಚಿತ್ರಣ ರೀತಿ, ತಂತ್ರ ಎಲ್ಲವೂ ಬೇರೊಂದು ದಿಕ್ಕಿನಿಂದ ನಮಗೆ ಬಂದು ತಲುಪಿದಂತಿನಿಸುತ್ತದೆ.

ಬೆಂಗಾಲ್ ಪುನರುಜ್ಜೀವನವನ್ನು ನಮ್ಮ ನವೋದಯ ಬರಹಗಾರರು ವೈಭವೀಕರಿಸಿದ ರೀತಿಯಿಂದಾಗಿ ನಮ್ಮ ತಲೆಮಾರಿನ ಶಾಲೆಯಲ್ಲಿ ಓದುವಾಗ ವಿವೇಕಾನಂದರು ಹಾಗೂ ರವೀಂದ್ರನಾಥ್ ಟಾಗೋರರನ್ನು ಕನ್ನಡಿಗರೇ ಎಂದು ಅಪಾರ್ಥಮಾಡಿಕೊಂಡು ಬಿಟ್ಟಿದ್ದೆವು. ಅಂದರೆ ಕಲಾಚರಿತ್ರೆಯ ಮೂಲಕ ಮಾತ್ರ ನಮ್ಮ ಕಲೆ ಉಳಿದುಕೊಳ್ಳಬಹುದಾಗಿದ್ದು, ಎಲ್ಲಿ ಗ್ರಹಣ ಕ್ರಮಗಳು ಶಿಸ್ತುಬದ್ಧವಾಗಿಲ್ಲವೋ ಅಲ್ಲಿ ಕಲೆ ನಿಲ್ಲಲಾರದೆಂಬುದು ಒಂದು ಸತ್ಯ ವಿಚಾರ. ಕನ್ನಡದ ಸಾಹಿತ್ಯದ ಸಂದರ್ಭದಲ್ಲಿಯೂ ಈ ಮಾತು ಸತ್ಯವೆಂಬ ಅಂಶದಿಂದ ದೃಶ್ಯಕಲಾ ಸಮೂಹವು ಈಗಲಾದರೂ ಕಲಿಯಬೇಕಾದುದೇ ಇದನ್ನೇ. ಅದೇನೆಂದರೆ "ದೃಶ್ಯಕ್ಕೆ ವಾಚ್ಯತೆಯ ಸಾಥಿ ಅನಿವಾರ್ಯ" ವೆಂಬುದು.

ಬೆಟ್ಟದೂರರ ಕೃತಿಗಳನ್ನು ಶಾಂತಿನಿಕೇತನ ಕಲಾಚಳುವಳಿಯ ಕೇಂದ್ರ ಆಶಯದಲ್ಲಿರಿಸಿ ನೋಡುವುದು ತಪ್ಪಾಗುತ್ತದೆ ಎಂದು ಈ ಬರಹದಲ್ಲಿ ಈಗಾಗಲೇ ಸೂಚಿಸಲಾಗಿದೆ. ಬೆಂಗಾಲ್ ಕಲಾಚರಿತ್ರೆಯಲ್ಲಿ ಕೆ. ವೆಂಕಟಪ್ಪನವರಿಗೆ ಸ್ಥಾನ ದೊರಕದಿರುವುದೂ, ಮುಂದೆ ದೊರಕದಿರುವ ಸಾಧ್ಯತೆ ಹೆಚ್ಚಿರುವುದೂ ನನ್ನ ಈ ಅಭಿಪ್ರಾಯಕ್ಕೆ ಸಾಕ್ಷಿಯಾಗಿದೆ. ಕರ್ನಾಟಕದ ಹೊರಗಿನ ಯಾವುದೆ ರಾಜ್ಯದ ಕಲಾಶಾಲೆಯಲ್ಲಿ ಭಾರತದ ಸಮಗ್ರ ಕಲಾಇತಿಹಾಸವನ್ನು ಅಧ್ಯಯನ ಮಾಡುವ ಸಂದರ್ಭದಲ್ಲಿ ಯಾವುದೇ ಕರ್ನಾಟಕದ ಕಲಾವಿದರ ಬಗ್ಗೆ ಪ್ರಸ್ತಾವನೆ ಇರವುದಿಲ್ಲ. ಸಮಕಾಲೀನ ಕರ್ನಾಟಕದ ಕಲಾವಿದರ ಬಗ್ಗೆ ಮಾತ್ರ ಈ ಮಾತು ಅಪವಾದಕರ. ಗೌಡರ ಕೃತಿಗಳಲ್ಲಿ ಕಲಾಭವನದ ಅನುಭವದ ಕಲಿಕೆಯ ಸ್ಪರ್ಶ ಹೊರ ಉಡುಪು ಇದ್ದಂತೆ. ಅವುಗಳ ನಿಜವಾದ ಸತ್ವ ಇರುವುದು ಕರ್ನಾಟಕದ ರೈತಾಪಿ ಜೀವನದ ಹಿನ್ನೆಲೆಯಲ್ಲಿ. ಗೌಡರ ಬಹುಪಾಲು ಕೃತಿಗಳು ಹೊರಾಂಗಣದಲ್ಲಿ–ನಿಸರ್ಗದ ಸಾಹಚರ್ಯದಲ್ಲಿ ಘಟಿಸುತ್ತಿವೆ– ಎಂದು ಕ್ಲೀಷಾತ್ಮಕವಾಗಿ ಹೇಳಿಬಿಡಬಹುದು. ಇಲ್ಲೊಂದು ಸ್ಪಷ್ಟೀಕರಣದ ಅಗತ್ಯವಿದೆ. ಇಲ್ಲಿಯವರೆಗೂ ಬಂದಿರುವ ಕರ್ನಾಟಕದ ದೃಶ್ಯಕಲೆಯ ಬಗೆಗಿನ ಕನ್ನಡದ ಬರವಣಿಗೆಗಳು ಒಂದು ನಿರ್ದಿಷ್ಟ ಸೂತ್ರವನ್ನು ನಿರಂತರವಾಗಿ, ನೇತ್ಯಾತ್ಮಕವಾಗಿ ಅನುಸರಿಸುತ್ತ ಬಂದಿವೆ. ಕಲಾವಿದನೊಬ್ಬ ಹುಟ್ಟಿ ಬೆಳೆದು, ಓದಿ, ವೃತ್ತಿನಿರತರಾದ ಕ್ರಮಬದ್ಧತೆಯನ್ನು ನಿರ್ಭಾವುಕತೆ, ಅತಿಹೊಗಳಿಕೆಯಿಂದ ವಿವರಿಸುವುದೇ ಆ ಸೂತ್ರ. ಆ ಸೂತ್ರದಿಂದ ಶಂಕರಗೌಡರನ್ನು ಅವರ ಕಲಾಜೀವನವನ್ನು ಮತ್ತವರ ಕಲಾಕೃತಿಗಳನ್ನು ನೋಡದಿರುವುದೇ ಲೇಸು.



ಗೌಡರ ಸುರುಳಿ ಚಿತ್ರದಂತೆ ಅವರ ಬಹುಪಾಲು ಚಿತ್ರಗಳು ಹೊರಾಂಗಣವಾಗಿದ್ದರೂ ಬೆಂಗಾಲದ ಹೊರಾಂಗಣ ದೃಶ್ಯಗಳಿಗಿಂತಲೂ ಭಿನ್ನ. ಅಲ್ಲಿನ ಚಿತ್ರಗಳು ರೈತರಲ್ಲದವರು ರೈತಾಪಿ ಜನರನ್ನು, ಒಂದು ಹಂತ ಕೆಳಗಿನವರಾಗಿ ಭಾವಿಸಿ, ಚಿತ್ರಿಸಿದಂತಹ ಒಂದು ತೆರನಾದ ವಸಾಹತು ಕಲ್ಪನೆ. ಗೌಡರ ಚಿತ್ರವು ಚಿತ್ರಿಸುವ ಹಾಗೂ ಚಿತ್ರಿಸಲ್ಪಡುತ್ತಿರುವವರ ನಡುವೆ 'ಒಂದೇ ಕುಲದ ಬಳ್ಳಿಯ' ಹೊಂದಾಣಿಕೆ ಕಂಡುಬರುತ್ತದೆ. ಇವರ ಹೊರಾಂಗಣದಲ್ಲಿಯೂ ಎರಡು ವಿಧಃ (ಅ) ನಿಸರ್ಗ ಮತ್ತು (ಆ) ಮನೆಯ ಅಂಗಳದ ಒಳಗೇ ಗೋಚರಿಸುವ ಹೊರಾಂಗಣ. ಬ್ರಿಟಿಷ್ ನಿಸರ್ಗ ಚಿತ್ರಕಾರರಾದ ಟರ್ನರ್‌ನ ನಿಸರ್ಗ ಚಿತ್ರಣವು ನೈಸರ್ಗಿಕ ಕಾಡನ್ನು ಕುರಿತ

ಚಿತ್ರಣವಾದರೆ ಕಲಾವಿದ ಕಾನ್‌ಸ್ಟೇಬಲ್‌ನ ನಿಸರ್ಗವು ಮನುಷ್ಯ-ನಿರ್ಮಿತ ಹೊಲ, ಗದ್ದೆ ತೋಟಗಳು. ಗೌಡರ ಬಸವಣ್ಣನ ವಚನ (ಹಬ್ಬಕ್ಕೆ ತಂದ ಹರಕೆಯ ಕುರಿ) ಅಂತಹುವು ಕಾನ್‌ಸ್ಟೇಬಲ್ಲನಂತಹವನ ಹಂದರ ಹೊಂದಿದ್ದರೆ ಸಂಜೆಯ ಹೊತ್ತು ದನಗಳ, ಪಕ್ಷಿಗಳು ಮನೆಗೆ ಹಿಂದಿರುಗುತ್ತಿರುವ ದೃಶ್ಯ ಟರ್ನರ್ ಹಾಗೂ ಕಾನ್‌ಸ್ಟೇಬಲರಿಬ್ಬರ ನಿಸರ್ಗದ ಮಧ್ಯದ ಸ್ಥಿತಿಸೂಚಕ. ಈ ಚಿತ್ರಗಳನ್ನು ರೂಪಿಸಿರುವ ನೈಪುಣ್ಯತೆಯಲ್ಲಿ (ಸ್ಕಿಲ್) ಒಂದು ಮುಗ್ಧ ಗುಣವಿದೆ. ವೆಂಕಟಪ್ಪನವರ ಶೈಲಿ ಆತ್ಮವಿಶ್ವಾಸದ ಗುರುವಿನದ್ದು *10*. ಗೌಡರ ಕುಂಚವು ಪ್ರಜ್ಞಾಪೂರ್ವಕವಾಗಿ ಅಂತಹ ಅಹಮಿಕೆಯನ್ನು ತೊಡೆದುಹಾಕಿ ಮುಗ್ಧತೆಯೊಳಗಿನ ಸಂಕೀರ್ಣ ಗುಣವನ್ನೇ ವಿವರಿಸಿ ಹೇಳುತ್ತದೆ.

ಮಿನಿಯೇಚರ್‌ನಂತೆ ದೃಶ್ಯಗಳನ್ನು ವಿವರಿಸುವ ಗುಣ ಈ ಚಿತ್ರಗಳಿಗಿವೆ. ಈ ಚಿತ್ರಗಳನ್ನು ನೋಡುತ್ತಿದ್ದರೆ ಒಂದು ಕ್ಷಣದ ನೋಟಕ್ಕೆ ಅವು ದಕ್ಕವು. ಕ್ರಮೇಣ ಒಂದು ಪತ್ರವನ್ನು ಓದಿದಂತೆ. ಒಂದು ಕ್ಯಾಲೆಂಡರ್ ನೋಡಿದಂತೆ, ಹಾವು ಏಣಿ ಆಟದ ಚೌಕಗಳಲ್ಲಿ ಕಣ್ಣು ಒಂದು ಸೂತ್ರಕ್ಕೆ ಬದ್ಧವಾಗಿ ಹಲವು ದಿಕ್ಕುಗಳಿಂದ ಪಯಣಿಸಿದಂತೆ ಗೌಡರ ಸಂಯೋಜನಾ ತಂತ್ರವು ನಮ್ಮ ದೃಷ್ಟಿಯನ್ನು ಒಂದೆಡೆ ನಿಲ್ಲಲು ಬಿಡುವುದಿಲ್ಲ. ಸ್ವೆಟ್ಲಾನಾ ಅಲ್ಪರ್ಸ್ ಎಂಬಾಕೆ ತನ್ನ ಪುಸ್ತಕ ದ **ಆರ್ಟ್ ಆಫ್ ಡಿಸ್ಕ್ರೈಬಿಂಗ್**‌ನಲ್ಲಿ ಒಂದು ನೋಟಕ್ಕೆ ದಕ್ಕಿದ ಹಾಗೂ ದಕ್ಕದೆ, ಕ್ರಮೇಣ ಎಲ್ಲ ವಿವರವನ್ನೂ ಪ್ರಸ್ತುತಪಡಿಸುವಂತಹ (ಕ್ರಮಬದ್ಧವಾಗಿ) ದಕ್ಷಿಣ ಯುರೋಪು ಹಾಗೂ ಡಚ್ ಬರೋಕ್, ರೊಕೊಕೊ ಕಾಲದ ಕಲೆಯ ಬಗ್ಗೆ ವಿವರಿಸಿದ್ದಾರೆ. ಗೌಡರ ಚಿತ್ರಗಳೂ ಸಹ ಡಚ್ ಸ್ಟಿಲ್‌ಲೈಫ್ ಚಿತ್ರಗಳಂತೆ: ಎರಡು ಬೆಟ್ಟಗಳ ನಡುವಿನ ನದಿಯಲ್ಲಿ ಚುಕ್ಕಿಗಳಾಗಿ ಸಾಗುತ್ತಿರುವ ಹಲವು ಎತ್ತಿನ ಬಂಡಿಗಳು, ಮರದ ಪೊಟರೆಯಿಂದ ಹೊರಕ್ಕೆ ಇಣುಕು ಹಾಕುತ್ತಿರುವ ಮೊಲ, ಪಕ್ಕದ ದೇವಸ್ಥಾನದ ಎದುರಿನ ಕಲ್ಲನಾಗರದ ಬಳಿಯ ನಿಜ ನಾಗರ, ಆಕಾಶದಲ್ಲಿ ಸಂಧ್ಯಾಕಾಲಕ್ಕೆ ಸಾಗುತ್ತಿರುವ ಹಕ್ಕಿಗಳ ಸಾಲು ಇವೇ ಮುಂತಾದ ವಿವರಗಳನ್ನು ಒಂದು ಚಿತ್ರದಿಂದ ಮತ್ತೊಂದಕ್ಕೆ ಅದಲು ಬದಲು ಮಾಡಬಲ್ಲಂತಹ ಗುಣ ಹೊಂದಿರುವ ಸಣ್ಣಪುಟ್ಟ ವಿವರಗಳು.

ಈ ಲೇಖನದ ಪ್ರಾರಂಭದಲ್ಲಿ ವಿವರಿಸಲಾದ ಸುರುಳಿ ಚಿತ್ರದಲ್ಲಿಯೂ ಈ ಗುಣವಿದೆ. ಕಲಾವಿದ ವೀಕ್ಷಕನಿಗೆ ಬೆನ್ನು ಹಾಕಿ, ತಾನು ಚಿತ್ರಿಸಿರುವ ಇತರೆ ವಿವರಗಳನ್ನು ವೀಕ್ಷಕನಿಗೆ ನೋಡಲು ಬಿಡುತ್ತಾರೆ. ಇದು ನೋಡುವ ಒಂದು ಕ್ರಮ. ಮತ್ತು ಎಲ್ಲೋ ಒಂದೆಡೆ, ಚಿತ್ರದೊಳಗೇ, ಚಿತ್ರವನ್ನು ಸಮಗ್ರವಾಗಿ ನೋಡಲು ಸ್ವತಃ ಚಿತ್ರಿತ ಕಲಾವಿದನ ಆಕಾರವೇ ಒಂದು ತೊಡಕಾಗಿ ನಿಲ್ಲುತ್ತದೆ. ಆ ನಿರ್ದಿಷ್ಟ ಚಿತ್ರದಲ್ಲಿ ಗೌಡರು ತಮ್ಮ ಇತರೆ ಶಾಂತಿನಿಕೇತನ ಕಲಾಭವನದ ಸಹ ವಿದ್ಯಾರ್ಥಿಗಳನ್ನೂ ಚಿತ್ರಿಸಿದ್ದಾರೆ. ಎಲ್ಲರೂ ಕೆಳಗೆ ಹಾಸಲಾಗಿರುವ ಪ್ರಾಣಿ ಪಕ್ಷಿಗಳ ಮತ್ತೊಂದು ಸುರುಳಿಯಾಕಾರದ ಚಿತ್ರವನ್ನು ನೋಡುತ್ತಿದ್ದಾರೆ. ಆದರೆ ಈ ನಿಜದ ಸುರುಳಿಚಿತ್ರದೊಳಗಿನ ಆ ಚಿತ್ರಿತ-ಸುರುಳಿ ಚಿತ್ರವು ತಲೆಕೆಳಗಾಗಿ ಚಿತ್ರಿತವಾಗಿದೆ. ಈ ಚಿತ್ರದ ಒಳಗೆ ಒಳಗೊಂದರೊಳಗೊಂದು ಎಂಬಂತೆ ಹಲವು ಚಿತ್ರಗಳಿದ್ದು, ಪ್ರತಿ ಚಿತ್ರದ ಕೆಲವು ಆಕಾರಗಳು ಮತ್ತೊಂದರ

ಸಂಪೂರ್ಣ ದೃಶ್ಯ ಗ್ರಹಿಕೆಗೆ ತೊಡಕಾಗಿ ನಿಂತಿರುತ್ತದೆ. ಈ ಚಿತ್ರದ ಕರ್ತೃ ಗೌಡರಾದರೂ ಇದರೊಳಗಿನ ಪಶುಪಕ್ಷಿ ಸುರುಳಿ ಚಿತ್ರದ ಕರ್ತೃ ಯಾರು ಎಂಬುದರ ಬಗ್ಗೆ ಒಂದು ತಾತ್ವಿಕ ಒಮ್ಮತವಿಲ್ಲ. ಏಕೆಂದರೆ ಕೃತಿಯ ಒಳಗೆ ಅಡಕವಾಗಿರುವದೊಂದು ಕಲ್ಪಿತ ಕೃತಿ. ಕಲೆ ಎಂಬುದೇ ಒಂದು ಕಲ್ಪನೆ ಎಂದಾದರೆ ಅದರೊಳಗೊಂದು ಕಲ್ಪಿತ ಕಲಾಕೃತಿ ನೈಜತೆಯಿಂದ ಎರಡು ಬಾರಿ ದೂರಸರಿದಂತಾಯ್ತು!

## (ಋ) ಒಂದರೊಳಗೊಂದರೊಳಗೊಂದು

ಶಾಂತಿನಿಕೇತನದಿಂದ ಹಿಂದಿರುಗಿದ ನಂತರ ಗೌಡರು ಕಲಾವಿದರಾಗಿ ರೂಪುಗೊಳ್ಳಲು ಅವಶ್ಯಕವಾದ ಬೆಂಗಳೂರು, ಮುಂಬಯಿ, ದೆಹಲಿಯಂತಹ ಕೇಂದ್ರಗಳಿಂದ ದೂರ ಸರಿದರು. ಈಗ ರೂಢಿಯಲ್ಲಿದ್ದಂತೆ, ಕೇವಲ ಕಲೆಯನ್ನು ಮಾತ್ರ ಸೃಷ್ಟಿಸಿಕೊಂಡಿರದೆ, ಗೌಡರು ಆಯುರ್ವೇದ, ವೈದ್ಯವೃತ್ತಿ, ವ್ಯವಸಾಯ ಇತ್ಯಾದಿ ಹಲವು ಪದರಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಅವರ ಸುರುಳಿ ಚಿತ್ರದ ಒಳಗೊಂದು ಕಲ್ಪಿತ, ಅನಾಮಿಕ ಸುರುಳಿ ಚಿತ್ರವಿರುವುದಕ್ಕೂ ಅವರ ಜೀವನದ ಪದರಗಳಿಗೂ ಹೋಲಿಕೆ ಮಾಡಿದಲ್ಲಿ ಮಾತ್ರ ಈ ಕಲಾಕೃತಿಯಂತೆ ಇತರೆ ಗೌಡರ ಕಲಾವೃತ್ತಿಗೆ ಒಂದು ಕಲಾತ್ಮಕ ಮೌಲ್ಯ ದೊರಕುತ್ತದೆ. ಇಲ್ಲದಿದ್ದಲ್ಲಿ ಕಲೆಯಲ್ಲಿ ಅವರು ತೊಡಗಿಕೊಂಡದ್ದಕ್ಕೂ ವ್ಯವಸಾಯದಲ್ಲಿ ತೊಡಗಿಕೊಂಡದ್ದಕ್ಕೂ ಏನೇನೂ ವ್ಯತ್ಯಾಸವಾಗದೇ ಹೋಗುತ್ತದೆ. *ಅಂದರೆ ಶಂಕರಗೌಡರ ಪ್ರತೀ ಕೃತಿಯನ್ನು ಒಂದು ಎಂದು ನೋಡಲಾಗದು.* ಹಲವು ಚಿತ್ರಗಳ ಹಲವು ಅಂಶಗಳು ಭಿನ್ನ ಭಿನ್ನ ಕಾರಣಗಳಿಂದ ಸ್ಮೃತಿಯಲ್ಲಿ ಉಳಿದುಕೊಳ್ಳುತ್ತವೆ. *ಏಕೆಂದರೆ ಒಂದು ಚೌಕಟ್ಟಿನೊಳಗಿನ ಒಂದು ಚಿತ್ರಿತ ಕಾಗದವನ್ನು ಒಂದು ಕೃತಿಯೆಂದು ಪರಿಗಣಿಸುವ ನಮ್ಮ ರೂಢಿಗತ ನಂಬಿಕೆಯಲ್ಲಿ ಕಲಾಕೃತಿಗಳನ್ನು ಹಣದ ರೂಪಕ್ಕೆ ಮಾರ್ಪಡಿಸುವ ಕಲಾಗ್ಯಾಲರಿಯ ರಾಜಕಾರಣ ಕೈವಾಡವಿರುವುದೂ ದಿಟ.*11**

ಗೌಡರ ಕೆಲವು ಚಿತ್ರಗಳಲ್ಲಿನ ಕೆಲವು ಅಂಶಗಳು ಮತ್ತಿನ್ನೆಲ್ಲೋ, ಮತ್ಯಾವುದೋ ಕೃತಿಯಲ್ಲಿ ಕಾಣಿಸಿಕೊಳ್ಳುವುದೂ ಇದೆ, ಸ್ಪಾನಿಷ್ ನಿರ್ದೇಶಕ ಲೂಯಿ ಬ್ಯುನುಯಲ್‌ನ ಸಿನೆಮಗಳಂತೆ. ಉದಾಹರಣೆಗೆ ಚಿತ್ರಿತ 'ರೀತಿಯಿಂದಾಗಿಯೇ' ಎದ್ದು ನಿಲ್ಲುವ ಚಿತ್ರವೊಂದರಲ್ಲಿನ ಮರವೊಂದು ಮತ್ತೊಂದು ಚಿತ್ರದ ಮರದ 'ಸಮೂಹದಲ್ಲೂ' ಕಂಡುಬರುವುದಿದೆ. ಆಗ ಅಸಲಿಯಾಗಿ ಆ ಮರ ಯಾವ ಚಿತ್ರಕ್ಕೆ ಸೇರಿತ್ತೋ ಆ ಚಿತ್ರವನ್ನು ನಾವು ಮೊದಲು ನೋಡಿದ್ದ ಪಕ್ಷದಲ್ಲಿ ಅದರ ಎಲ್ಲ ಚಿತ್ರಿತ ವಿವರಗಳಲ್ಲದಿದ್ದರೂ ಆ ಮೊದಲ ಚಿತ್ರದ ಭಾವವೇನಿರುತ್ತದೆಯೋ ಅದು ಎರಡನೇ ಚಿತ್ರದೊಳಗೂ ನಮಗೆ ಅನುಭವವಾಗುವುದುಂಟು*12*. ಅದೂ ಒಂದಿಡೀ ಚಿತ್ರದ ಸಾರವನ್ನು ಅದರ ಒಂದಂಶ ಮಾತ್ರ (ಉದಾಹರಣೆಗೆ ಒಂದು ಮರ) ಹಿಡಿದಿರಿಸುವುದು ಒಂದಿಡೀ ತತ್ವಶಾಸ್ತ್ರವನ್ನೇ ಪ್ರತಿಪಾದಿಸುತ್ತದೆ. ಬ್ಯುನುಯಲ್ಲನೊಂದಿಗೆ, ಜರ್ಮನಿಯ ಸಿನೆಮ ನಿರ್ದೇಶಕ ಅಲೆಗ್ಸಾಂಡರ್ ಕ್ಲೂಗಾನ ಸಿನೆಮಗಳಲ್ಲಿಯೂ ಈ ಗುಣವಿದೆ. ಒಂದು ಸಿನೆಮದ ಪಾತ್ರಧಾರಿ ಅಚಾನಕ್ ಅದೇ ಅವತಾರದೊಂದಿಗೆ, ಕ್ಲೂಗಾನ ಮತ್ತೊಂದು



ಸಿನೆಮದಲ್ಲಿ ಪ್ರತ್ಯಕ್ಷವಾಗುತ್ತದೆ. ಇಂತಹ ಅಂಶವನ್ನು ತಾತ್ವಿಕವಾಗಿ ವರ್ಟಿಕಲ್ ಇನ್ವೇಷರ್ಸ್ ಎಂದೂ ಕರೆಯಬಹುದು. ಭಾಗಶಃವಾದುದು ಸಮಗ್ರತೆಯನ್ನು ಉದ್ದೀಪಿಸುವ, ಸಮಗ್ರವಾದುದು ಹೆಚ್ಚು ವಿಸ್ತಾರಗೊಳ್ಳುವ, ಸಂಪೂರ್ಣವೆನಿಸಿಕೊಂಡದ್ದು ಅಪೂರ್ಣಗೊಳ್ಳುವ ಕೃತಿಸಾಮರ್ಥ್ಯಯವನ್ನು ಗೌಡರ ಪ್ರತಿ ಕೃತಿಗಳ ನಿರ್ದಿಷ್ಟ ಓದುವಿಕೆ ಸಾಧ್ಯಗೊಳಿಸುತ್ತದೆ.

## (ಎ) ಉಪದೃಶ್ಯಕಥೆ

ಶಾಂತಿನಿಕೇತನದ ಕಲಾಇತಿಹಾಸಕಾರ ಆರ್. ಶಿವಕುಮಾರರು ಬಿನೋದ್ ಬಿಹಾರಿ ಮುಖರ್ಜಿಯವರ ಈ ಸ್ವಯಂ–ಭಾವಚಿತ್ರವನ್ನು ಸುದೀರ್ಘವಾಗಿ ವಿಶ್ಲೇಷಿಸಿರುವಂತಹ ಒಂದು ಲೇಖನವಿದೆ. ಮುಖರ್ಜಿಯವರ ಈ ಚಿತ್ರದೊಳಗೆ ಚಿಕ್ಕದಾಗಿ, ಬೆನ್ನು ತೋರಿಸಿ ಕುಳಿತ ಸ್ವತಃ ಮುಖರ್ಜಿ, ಕಿಟಕಿಯಾಚೆಗಿನ ನಿಸರ್ಗವನ್ನು ಕೈಯಲ್ಲಿ ಹಿಡಿದ ಕಾಗದದ ಮೇಲೆ ಬಿಡಿಸುತ್ತಿದ್ದಾರೆ. ಹೊರಗಿನ ನಿಸರ್ಗ ಹಾಗೂ ಕಾಗದದ ಮೇಲೆ ಮೂಡುತ್ತಿರುವ ದೃಶ್ಯವೆರಡೂ ಗೋಚರವಾಗುತ್ತಿದೆ ಈ ಚಿತ್ರದಲ್ಲಿ.

ಇಲ್ಲಿ ಒಂದು ವಿಷಯವನ್ನು ಸ್ಪಷ್ಟವಾಗಿ ಮನನ ಮಾಡಿಕೊಳ್ಳಬೇಕಾಗಿದೆ. ಚಿತ್ರ ಹಾಗೂ ಚಿತ್ರದೊಳಗಿನ ಚಿತ್ರವೆರಡನ್ನೂ ಒಟ್ಟಾಗೆ ನಾವು ಒಮ್ಮೆಲೆ ನೋಡಲಾಗುವುದಿಲ್ಲ ಎಂಬುದು ಮುಖ್ಯ. ಶುದ್ಧ ಕಲಾಭವನದ ಬೆನ್ನೆಲುಬಿಲ್ಲದ (ಬೋನ್‌ಲೆಸ್ ಸ್ಟೈಲ್) ಚೀನೀ ಶೈಲಿಯ ನೆನಪಿಸಬಲ್ಲ ಕಲಾಕೃತಿ ಇದು. ಈ ಚಿತ್ರದೊಳಗಿನ–ಚಿತ್ರ ತಂತ್ರವೆಂಬ ಸೌಂದರ್ಯದ ಅಂಶವಿರಬಹುದು, ಅದರ ಸುತ್ತಲೂ ಅಂಟಿಸಲಾಗಿರುವ ಬಣ್ಣದ ಟೇಪುಗಳೆರಡೂ ಬೆಟ್ಟದೂರರ ಕಲಾಜೀವನದ ಶೈಲಿಯ ಕಥೆಯನ್ನು ಹೇಳುತ್ತವೆ. ಕಲಾವಿದನಿಗಿಂತಲೂ ಕಲಾಕೃತಿಯೇ ಮಾತನಾಡಬೇಕಾಗಿ ಬಂದ ಸಂದರ್ಭದಲ್ಲಿ ಇಲ್ಲೊಂದು ಕಲಾಕೃತಿಯು ಅದರ ಸೃಷ್ಟಿಕರ್ತರ ಕಲಾಜೀವನದ ಕಥೆ ಹೇಳುತ್ತಿವೆ!

## ಶೈಲೀಕರಣದ ಹೊರಕ್ಕೆ

ಈಗ ಬೆಟ್ಟದೂರರಿಗೆ 80 ವರ್ಷ ವಯಸ್ಸು. ಐವತ್ತು ವರ್ಷದ ಹಿಂದೆ ಕಲೆಯನ್ನು ಕಲಿತವರು. ಅಷ್ಟರಲ್ಲಿ ಜಗತ್ತಿನಾದ್ಯಂತ ಮಾಡರ್ನಿಸಂ (ಆಧುನಿಕತೆ)ನ ಅರ್ಥವನ್ನು ಕ್ಲೆಮೆಂಟ್ ಗ್ರೀನ್‌ಬರ್ಗ್ ಸ್ಪಷ್ಟಪಡಿಸಿದ್ದಾಗಿತ್ತು. ಈಗ ನಾವದನ್ನು 'ಗ್ರೀನ್‌ಬರ್ಗ್‌ನ ಮಾಡರ್ನಿಸಂ' ಮಾತ್ರ ಎನ್ನುತ್ತೇವೆ. ರವೀಂದ್ರನಾಥ್ ಟಾಗೂರ್ ಮತ್ತು ಶಾಂತಿನಿಕೇತನದ ಆದರ್ಶವೆರಡೂ 1950ರಷ್ಟರಲ್ಲಾಗಲೇ ತೀರಿಕೊಂಡಿದ್ದಾಗಿತ್ತು. ಕಾಗದದ ಮೇಲೆ ಎರಡು ಆಯಾಮದ ಚಿತ್ರ ಮಾತ್ರ ಅಸಲಿ ಮತ್ತು ಶಿಲ್ಪದಲ್ಲಿ ಮೂರು ಆಯಾಮದ ಆಕಾರ ಮಾತ್ರ ಅಸಲಿ ಎಂದು ಗ್ರೀನ್‌ಬರ್ಗ್ ಹೇಳಿದ್ದ. ತದ್ವಿರುದ್ಧವಾಗಿ ಎರಡು ಮತ್ತು ಮೂರು ಆಯಾಮಗಳನ್ನು ಮೀರಿ ಚಿತ್ರವೊಂದು ಒಂದು ಸಮೂಹದ ಸೃಷ್ಟಿಗೆ ಮೂಲವಾದರೆ ಮತ್ತು ಸಮೂಹವೊಂದು ಅಂತಹುವುದನ್ನು ಸೃಷ್ಟಿಸಿದರೆ ಆಗ ಅದು ಒಂದು ಕಲಾಚಳುವಳಿಯಾಗುತ್ತದೆಂದು ಕಲಾಭವನದ ತತ್ವ ಸಾರುತ್ತದೆ.

ಬೆಟ್ಟದೂರರ ಕಲಾಶಿಕ್ಷಣ ಈ ಅರ್ಥದಲ್ಲಿ ಗ್ರೀನ್‌ಬರ್ಗನ ಆಧುನಿಕತೆಯ ತದ್ವಿರುದ್ಧವಾದ ಸಂದರ್ಭದಲ್ಲಿ ಜನಿಸಿದ್ದು. ಇಂದಿಗೂ ಉಳಿದುಕೊಂಡಿದೆ. ಅದೂ ಶೈಲಿಗಳೆಲ್ಲ ಉರುಳಿಬಿದ್ದು, ಶೈಲಿಗಳನ್ನು ಸೃಷ್ಟಿಸುವ ಕಲಾಸಂದರ್ಭವೇ ಮುಗಿದು, ಹೊಸವಸ್ತುಗಳ ಕಲಾಕೃತಿಗಳು ಹುಟ್ಟಿಬಂದಿವೆ. ಕೆಲವರಂತೂ ಕಲೆ ಸತ್ತಿದೆ ಎಂದು ನಿರೂಪಿಸಿದ್ದೂ ಆಯಿತು (ಅರ್ಥರ್ ದಾಂತೋನ ತತ್ವ). ಅಂದರೆ ಕೆಲ ಎಂದರೆ ತಲೆತಲಾಂತರದಿಂದ ನಾವೇನು ತಿಳಿದುಕೊಂಡಿದ್ದೆವೋ ಅದೆಲ್ಲ ಬುಡಮೇಲಾದ ಸಂದರ್ಭ ಇಂದಿದೆ. ಕೈ ಬರಹದ ಪ್ರತಿ ತೆಗೆದ ಸಂಪ್ರದಾಯದಲ್ಲಿ ಪಳಗಿದವರು ಅದೇ ಅಭ್ಯಾಸವನ್ನು ಫೋಟೋಕಾಪಿ (ಝೆರಾಕ್ಸ್ ಎಂದು ತಪ್ಪಾಗಿ ಹೇಳುತ್ತೇವಲ್ಲ ಅದು) ತೆಗೆವ ಕಾಲಕ್ಕೂ ಉಳಿದುಕೊಂಡು, ಈಗ ಸ್ಕಾನಿಂಗ್ ಯುಗದಲ್ಲೂ (ನಕಲು ಪ್ರತಿಯೇ ಅಸಲು ಎನ್ನಿಸುವ ಕಾಲದಲ್ಲಿ) ಅದೇ ಅಭ್ಯಾಸವನ್ನು ಉಳಿಸಿ–ಕೊಂಡಂತಾಗಿದೆ. ಶೆಗಾಲ್ ಮತ್ತು ಹೆಬ್ಬಾರ್ ಬೆಟ್ಟದೂರರ ಸಾಲಿನಲ್ಲಿ ಮೊದಲೇ ಈ ಅಭ್ಯಾಸವನ್ನು ಉಳಿಸಿಕೊಂಡ ಕಲಾವಿದರುಗಳು.

ಬಹುಪಾಲು ಚಿತ್ರಕಲಾವಿದರ ಇಂತಹ ಅಭ್ಯಾಸವು ಕ್ಲೀಷಾತ್ಮಕ ಎಂಬ ಒಂದು ನಂಬಿಕೆ ಇದೆ. ಒಬ್ಬ ನಟ ಒಂದೇ ರೀತಿ ನಟಿಸುವುದನ್ನು ಇಚ್ಛಿಸುವಂತೆ, ಗ್ಯಾಲರಿಗಳವರು ಒಂದೇ ಶೈಲಿಯ ಕೃತಿರಚಿಸುವ ಕಲಾವಿದರನ್ನೇ ನಂಬಿಕೊಳ್ಳುವ ರೂಢಿಯಿಂದಾಗಿ ಹುಟ್ಟಿಕೊಂಡ ನಂಬಿಕೆ ಇದು. ಈ ನಂಬಿಕೆಯೂ ಒಂದೆಡೆ ಕ್ಲೀಷೆಯಾಗಿಬಿಟ್ಟಿರುವುದೂ ದಿಟ! ಆದ್ದರಿಂದ ಇಂದಿನ ನಿಟ್ಟಿನಿಂದ ಬೆಟ್ಟದೂರರ ಕಲಾಕೃತಿಗಳನ್ನು ಮತ್ತು ಕಲಾಜೀವನವನ್ನು ಗ್ರಹಿಸಲು ಪ್ರಯತ್ನಿಸೋಣ. ಅವರ ಒಟ್ಟಾರೆ ಕೃತಿಗಳನ್ನು ಒಂದೆಡೆ, ಒಮ್ಮೆಲೆ, ನೋಡುವ ಅವಕಾಶ ಹೋದವರ್ಷ, 2005ರಲ್ಲಿ, ನನಗೆ ದೊರಕಿತ್ತು (ಚಿತ್ರಕಲಾಪರಿಷತ್ತಿನಲ್ಲಿ ಅವರು ಸ್ವತಃ ಏರ್ಪಡಿಸಿಕೊಂಡ ರೆಟ್ರೋಸ್ಪೆಕ್ಟ್ ಪ್ರದರ್ಶನದಲ್ಲಿ). ಐವತ್ತು ವರ್ಷದ ಕಲಾಕೃತಿಗಳನ್ನು ಒಟ್ಟಾರೆ ನೋಡುವುದು ಬೇರೆ, ಐವತ್ತು ವರ್ಷ ಕ್ರಮೇಣ (ರವಿವರ್ಮನ ಪ್ರಿಂಟ್‌ಗಳಂತೆ) ಬೇರೆ ಬೇರೆ ತಲೆಮಾರುಗಳ ದೈನಂದಿನ ಆಂತರ್ಯಕ್ಕೆ ಇಳಿಯುವುದು ಬೇರೆ.

ಶಂಕರಗೌಡರ ಕಲಾಕೃತಿಗಳನ್ನು ಸಮಗ್ರವಾಗಿ ಗ್ರಹಿಸಲು ಪ್ರಯತ್ನಿಸುವ. ಅವರ ಅತ್ಯುತ್ತಮ ಕಲಾಕೃತಿಗಳಲ್ಲಿ ಒಂದು ನೆಲಕ್ಕೆ, ನೆಲೆಗೆ ಭಾವುಕವಾಗಿ ಆತುಕೊಳ್ಳುವ ತೀವ್ರತೆ ಇದೆ. ನಗರ ಜೀವಿಗಳನ್ನು ನಿರಂತರವಾಗಿ ನೆನಪಿಸುವ ಗ್ರಾಮೀಣ ಚಿತ್ರಣ ಅವರದ್ದಲ್ಲ, ಗ್ರಾಮದಲ್ಲೇ ಬದುಕಿ ಅದನ್ನೇ ಚಿತ್ರಿಸುವ ಹಠವೂ ಇಲ್ಲಿ ಚಿತ್ರರೂಪದಲ್ಲಿ ವ್ಯಕ್ತವಾದುದಿಲ್ಲ. ಬದಲಿಗೆ ತಾವು ಬದುಕಿದ ಪರಿಸರವೂ ಕಲಾವಿದನ ಕೈಚಳಕಕ್ಕೆ ಒದಗಿ ಬಂದಷ್ಟು ಮಾತ್ರ ರೂಪುಗೊಂಡು ಅದರೊಳಗೆ ಕಲಾವಿದನ ಕುಸುರಿಕೆಲಸದ ಪರಿಣಾಮವಾಗಿ ಒಂದು ಐಹಿತ್ಯ ನಿರ್ಮಾಣವಾಗಿದೆ.



ಸರಳವಾಗಿ ಇದನ್ನು ಹೀಗೆ ವಿವರಿಸಬಹುದು. ಬೆಟ್ಟದೂರರ ನಿಸರ್ಗ ಚಿತ್ರಗಳು ಶುದ್ಧ ನೈಸರ್ಗಿಕ ಚಿತ್ರಗಳಲ್ಲ. ನೈಜ ಗ್ರಾಮದೃಶ್ಯದೊಳಗೆ ಐಹಿತ್ಯಗಳ ಬೆಸುಗೆಯ ಆಗಿವೆ. ಒಂದು ನೆಲ, ಜಲ, ಭೂದೃಶ್ಯದೊಂದಗಿರುವ ಒಂದು ದೊಡ್ಡ ಮರವು

ದೊಡ್ಡಾಲದ ಮರದಂತಹ ವ್ಯಕ್ತಿತ್ವದ ಮಹಾತ್ಮನೊಬ್ಬನ ಚಿತ್ರಣವೂ ಆಗಿರಬಹುದು ಮತ್ತು/ಅಥವ ನಿಜವಾಗಿಯೂ ಅಲ್ಲಿದ್ದ, ಅಲ್ಲಿರುವ ಮರವೂ ಆಗಿರಬಹುದು. ಮುಂಚಿನ ವಾಕ್ಯದಲ್ಲಿನ ಅರ್ಥವೇನೆಂದರೆ ಈ ನಿಸರ್ಗ ಕೃತಿಗಳಿಗೆ ದೃಗ್ಗೋಚರತೆಯನ್ನು ಮೀರಿದ ಒಂದು ವಿಶೇಷ ಆಯೋಮಯ ಗುಣವೊಂದಿದೆ. ಒಮ್ಮೆಲೆ ಇತ್ತ ಸಾಂಕೇತಿಕವೂ ಅತ್ತ ನೈಜವೂ ಆಗಬಹುದಾದ ಚಿತ್ರಗಳು ಈ ನಿಸರ್ಗ ಚಿತ್ರಗಳು.

ಇಂತಹ ದ್ವಿಮುಖ ನೀತಿಯಿರುವ ನಿಸರ್ಗಗಳೊಳಗೆ ಮೂರನೇ ಅಂಶವೊಂದು ಸೇರಿಕೊಂಡಿದೆ ಕೂಡ. ಬೃಹದ್ ಮರ, ಆಕಾಶ, ನೆಲ, ಜಲ, ಸಿರಿಯ ಗಾಂಭೀರ್ಯದ ನೋಟದ ಮಧ್ಯೆಯೇ ಒಂದು ಸಣ್ಣ ಪೊಟರೆಯೊಳಗೊಂದು ಮೊಲ, ಅಳಿಲು, ಕಲ್ಲನಾಗರದ ಪಕ್ಕವೇ ಒಂದು ನಿಜದ ನಾಗರ; ವಚನ ಸಾಹಿತ್ಯ ಆಧರಿಸಿದ ಒಂದು ಪೂರಕ-ಚಿತ್ರ (ಇಲ್ಲಸ್ಟ್ರೇಷನ್), ಅದರ ಪುನರಾವರ್ತನೆಯಾದ ಮತ್ತೊಂದು ಅಂತಹುದೇ ಕೃತಿ- ಇವೆಲ್ಲ ಭೌತಿಕ ಲೋಕದೊಂದಿಗೆ ಆದಿಭೌತಿಕ, ಸಾಂಕೇತಿಕ ಜಗತ್ತುಗಳ ಸಮೀಕರಣ ಮಾಡುವ ಪ್ರಯತ್ನವೇ. ಹಾಗೆ ಮಾಡಲು ಒಂದು ರೀತಿಯ ಭಂಡ ಧೈರ್ಯ ಬೇಕಾಗುತ್ತದೆ ಕೂಡ. 'ಉತ್ತಮ ಪ್ರಭುತ್ವ ಲೊಳಲೊಟ್ಟೆ' ಎಂಬ ಹೇಳಿಕೆಯಲ್ಲಿ ಲೊಳಲೊಟ್ಟೆಯು ಪ್ರಭುತ್ವವನ್ನೇ, ಕನ್ನಡವು ಸಂಸ್ಕೃತವನ್ನೇ, ಜನಪ್ರಿಯ ಕಲೆ ಮುಖ್ಯವಾಹಿನಿ ಕಲೆಯನ್ನೇ ಅಲುಗಿಸುವ ಅಣಕ, ಸೆಟೈರ್ ಹಾಗೂ ಒಂದು ಪ್ರಭುತ್ವವೇ ಲೊಳಲೊಟ್ಟೆಯ ಗುಣವನ್ನೂ ಹುದುಗಿಸಿಕೊಂಡಿರುವಂತೆಯೇ ಬೆಟ್ಟದೂರರ ಗಂಭೀರ ಭೂದೃಶ್ಯಗಳೊಳಗಿನ ಸಣ್ಣಪುಟ್ಟ ಹಕ್ಕಿಸಾಲುಗಳು, ಮೊಲ; ಹಾವು ಇತ್ಯಾದಿ.

(ಏ)

ಮತ್ತೆ ಸುರುಳಿ ಚಿತ್ರದೊಳಕ್ಕೆ ಹಿಂದಿರುಗೋಣ, ಅದರೊಳಗೆ ಸ್ವತಃ ಕಲಾವಿದರ ಆಕಾರವೇ ತೊಡಕಾಗಿದ್ದರೂ ಸಹ. ನಾವು ಚಿತ್ರವನ್ನು ನೋಡುವಾಗ, ಚಿತ್ರದೊಳಗಿನ ಕಲಾವಿದ ಚಿತ್ರದೊಳಗಿನ ಸುರುಳಿ ಚಿತ್ರವನ್ನು ನೋಡುತ್ತಿರುತ್ತಾನೆ. ನಿಜ ಜಗತ್ತಿನೊಂದಿಗೆ ಸೃಷ್ಟಿಸಲ್ಪಟ್ಟ ಜಗತ್ತನ್ನು ಬೆಸೆಯುವ ಒಂದು ಶಾಂತಿನಿಕೇತನದ ಸಂಪ್ರದಾಯವೆಂದು ಈಗಾಗಲೇ ತಿಳಿಸಿರುವೆ. ಇಪ್ಪತ್ತನೇ ಶತಮಾನದ ಏಳನೇ ದಶಕದವರೆಗೂ ಶಾಂತಿನಿಕೇತನದಲ್ಲಿ ಚಿತ್ರಕಲೆಯನ್ನು ಕಲಿತ ಏಕೈಕ ಕರ್ನಾಟಕದ ಕಲಾವಿದ ಬೆಟ್ಟದೂರಿನ ಶಂಕರಗೌಡ. ವೆಂಕಟಪ್ಪನವರು ಕಲಿತದ್ದು ಕಲ್ಕತ್ತದಲ್ಲಿ, ಬಹುಮಂದಿ ತಪ್ಪಾಗಿ ಭಾವಿಸುವಂತೆ ಶಾಂತಿನಿಕೇತನದಲ್ಲಲ್ಲ. ಇವೆರಡೂ ಊರುಗಳ ಕಲಾಶಾಲೆಯಲ್ಲಿ ನಡುವಣ ತಾತ್ವಿಕ ವ್ಯತ್ಯಾಸವು ಅಜಗಜಾಂತರವಾದುದು.



ಶಂಕರಗೌಡರು ಅಲ್ಲಿ ಕಲಿತದ್ದು 1951ರಿಂದ 1956ರವರೆಗೆ. ನೀನು ಮದುವೆಯಾದರೆ ಕಲಾವಿದನಾಗಲಾರೆ ಎಂದು ಹೇಳಿದ್ದರಂತೆ ಗುರುಗಳಲ್ಲೊಬ್ಬರಾದ ಖ್ಯಾತ ಅನಾರ್ಕಿಕ್ ಕಲಾವಿದ ರಾಮ್‌ಕಿಂಕರ್ ಬೈಜ್. ಐವತ್ತು ವರ್ಷದ ನಂತರ, ಈಗ, ಆ ಮಾತಿನ ಹಿನ್ನೆಲೆಯಲ್ಲಿ ಎಂಬತ್ತು ವಯಸ್ಸಿನ ಶಂಕರಗೌಡರ ವ್ಯಕ್ತಿತ್ವ ವಿಶೇಷ ಅರ್ಥವನ್ನೇ ಪಡೆದುಕೊಂಡುಬಿಟ್ಟಿದೆ: ಚಿತ್ರಕಲಾ ಪರಿಷತ್ತಿನಲ್ಲಿ ಕಳೆದ ವರ್ಷ ಅವರ ಸಮಗ್ರ

ಕೃತಿಗಳ ಪ್ರದರ್ಶನ ಏರ್ಪಟ್ಟಿತು. ಸ್ವತಃ ಅವರೆ ಏರ್ಪಡಿಸಿಕೊಂಡಿದ್ದಂತಹ ಪ್ರದರ್ಶನವಿದು. ಇವರಷ್ಟೇ ವಯಸ್ಸು, ಅನುಭವವುಳ್ಳ, ಬೆಂಗಲಾದ ಅಬನೀ ಸೇನ್ ಎಂಬ ಕಲಾವಿದರ ಕೃತಿಗಳ ಪ್ರದರ್ಶನ ಹಾಗೂ ಕ್ಯಾಟಲಾಗನ್ನು ರೈಟ್‌ಲೈನ್ಸ್ ಗ್ಯಾಲರಿಯವರು ಸಾಕಷ್ಟು ಪ್ರಚಾರದೊಂದಿಗೆ ಬೆಂಗಳೂರಿನಲ್ಲೇ, ಅದೂ ಬೆಟ್ಟದೂರರ ಪ್ರದರ್ಶನದ ಸಮಯದಲ್ಲೇ ಏರ್ಪಡಿಸಿದ್ದೊಂದು ವಿಪರ್ಯಾಸ. ತಮ್ಮದೇ ನಾಡಿನಲ್ಲಿ ಶಂಕರಗೌಡರು ಅನಾಮಿಕರಾಗಿ ಉಳಿದುಬಿಟ್ಟಿದ್ದಾರೆ ಎಂಬುದಕ್ಕೊಂದು ಭೌತಿಕ ಸಾಕ್ಷ್ಯವಿದು.

## ಬಾಹೌಸ್ ಎಂಬ ಸ್ಥಾವರ

ಪ್ರದರ್ಶನದಲ್ಲಿದ್ದ ಕೃತಿಗಳಲ್ಲೆಲ್ಲ ಮೇಲೆ ವಿವರಿಸಲಾದ, 50ರ ದಶಕದ ಈ ಕಲಾವಿದರ ಆರಂಭಿಕ ಚಿತ್ರಗಳೇ ಅತ್ಯುತ್ತಮವೆನಿಸುತ್ತವೆ. ಕಳೆದ ಐದು ದಶಕಗಳಲ್ಲಿ ಅವರ ಕೃತಿಗಳು ಬದಲಾದ, ರೂಪಾಂತರ ಹೊಂದಿದ ಹಂತಗಳನ್ನು ಗುರ್ತಿಸುವ ಫಾರ್ಮಲಿಸ್ಟಿಕ್ ವಿಶ್ಲೇಷಣೆ ಆಗಿಯೇ ಇಲ್ಲ–ಇವರ ಅನೇಕ ಸಮಕಾಲೀನರ ಬಗ್ಗೆಯೂ ಆಗಿರುವಂತೆ, ಅಥವ ಆಗದಿರುವಂತೆ. ಸುರುಳಿ ಚಿತ್ರದ ಸುತ್ತಲೂ ಹರಿದ ಭಾಗಗಳಲ್ಲಿ ಟೇಪು, ಗೋಂದು ಇತ್ಯಾದಿಗಳನ್ನು ಅಂಟಿಸಲಾಗಿದೆ. ವಾಸ್ತವೇನೆಂದರೆ ಈ ಚಿತ್ರಗಳು ದೆಹಲಿಯ ಮ್ಯೂಸಿಯಂ ಆಫ್ ಮಾಡರ್ನ್ ಆರ್ಟ್ ಗ್ಯಾಲರಿಗಳಲ್ಲಿ, ಶಂಕರಗೌಡರ ಗುರುಗಳಾಗಿದ್ದ ನಂದಲಾಲ್ ಬೋಸ್, ರಾಮ್ ಕಿಂಕರ್ ಬೈಜ್ ಮುಂತಾದವರ ಕೃತಿಗಳ ಸಾಲಿನಲ್ಲಿ ಇವು ಸಂಗ್ರಹಗೊಳ್ಳಬೇಕಿತ್ತು. ಅಂಚು–ಕೇಂದ್ರದ ರಾಜಕಾರಣ ಇಲ್ಲಿ ಸ್ಪಷ್ಟ. ನಮ್ಮಲ್ಲಿ ಬೆಂಗಳೂರು, ಮೈಸೂರು ಮತ್ತು ಮುಂಬೈ ನಗರಗಳಿಗೆ ಹತ್ತಿರವಾಗಿ ಬದುಕಿದ್ದ ಕಲಾವಿದರಿಗೆ ಸಂಗ್ರಹಾಲಯಗಳು ಏರ್ಪಟ್ಟಿವೆ. ಶಂಕರಗೌಡರು ಬಹಳ ದೂರ ಬೆಟ್ಟದೂರಿನಲ್ಲೇ ಉಳಿದುಕೊಂಡುಬಿಟ್ಟದ್ದು ಅವರ ಪ್ರಜ್ಞಾಪೂರ್ವಕ ಆಯ್ಕೆಯೂ ಹೌದು:

ಶಂಕರಗೌಡರ ಕಲಾಜೀವನದ ಐದು ದಶಕಗಳ ಕಾಲವು ಕರ್ನಾಟಕ, ಭಾರತ, ಭೌಗೋಳಿಕ ಕಲಾಇತಿಹಾಸದ ಅತ್ಯಂತ ಕ್ಲಿಷ್ಟಕರವಾದ ಕಾಲ. ಅನೇಕ ಮಾರ್ಪಾಡುಗಳು ಅದಂತಹ ಈ ಕಾಲದಲ್ಲಿ ಅವರ ಕೃತಿಗಳು ಒಂದೇ ಶೈಲಿಯವಾಗಿ ಉಳಿದುಕೊಂಡುಬಿಟ್ಟವು ಎನ್ನಿಸುವುದು ದಿಟ. ಕನ್ನಡದ ನವೋದಯ ಸಾಹಿತ್ಯ ಮತ್ತು ಪೌರಾಣಿಕ ಸಿನೆಮಗಳೊಂದಿಗೆ ಜನಿಸಿದ ಗೌಡರ ಕಲೆ ಅಲ್ಲಿಯೇ ನಿಂತಂತೆನಿಸಿಬಿಡುತ್ತದೆ, ಅದರ ನಂತರ ಹುಟ್ಟಿದ ಮಿಡ್‌ನೈಟ್ ಚಿಲ್ಡ್ರನ್‌ಗಳಿಗೆ. ಆದರೆ ಆ ಕಾಲಕ್ಕೆ ಒಂದೇ ಶೈಲಿಯಲ್ಲಿ ಉಳಿದುಕೊಂಡ ಬೇರೆ ಬೇರೆ ಕಲಾವಿದರನ್ನೆಲ್ಲ ಒಂದೇ ಗುಂಪಿಗೆ ಸೇರಿಸಲಾಗದು! ಉದಾಹರಣಗೆ, ಕೆ.ಕೆ. ಹೆಬ್ಬಾರ್, ಶಗಾಲ್ ಮುಂತಾದವರು ತಾವಿದ್ದ ನಗರಗಳನ್ನು ಮರೆತಂತೆ ತಾವುಗಳು ಹುಟ್ಟಿ ಬೆಳೆದ ಜಾಗಗಳ ನೆನಪನ್ನು (ನಾಸ್ಟಾಲ್ಜಿಯ) ಚಿತ್ರಿಸಿದರು– ಒಂದು ಗುರ್ತಿಸಬಲ್ಲ, ನಿರ್ದಿಷ್ಟ ಶೈಲಿಯಲ್ಲಿ. ಶಂಕರಗೌಡರೂ ಅದನ್ನೇ ಮಾಡಿದರು. ಐವತ್ತು ಅದರಲ್ಲೂ ಕಳೆದ ಐವತ್ತು ವರ್ಷಗಳು ಏರುಪೇರಿಲ್ಲದಂತಹ ಕಾಲ ಎಂಬಂತೆ ಚಿತ್ರಗಳನ್ನು ರಚಿಸಿದರು. ಹೆಬ್ಬಾರರು ಭೌತಿಕವಾಗಿ ಹುಟ್ಟಿದೂರಿನಿಂದ ದೂರ ಸರಿದದ್ದು, ಅದೂ ಗ್ರಾಮೀಣದಿಂದ ನಗರಕ್ಕೆ ಬಂದದ್ದರಿಂದ ಹುಟ್ಟುಹಾಕಿದ ಹಿನ್ನೆನಪೇ ಅವರ ಚಿತ್ರಕಲೆ.



ಗೌಡರಾದರೋ ತಮ್ಮ ವೈಯಕ್ತಿಕ ಕಥಯನ್ನು ಬದಿಗಿರಿಸಿ ಮನುಕುಲದ ಕತೆ ಹೇಳತೊಡಗಿದರು. ನವೋದಯದ ಸಾಹಿತ್ಯದ 'ಒಳಗಿದ್ದ', ಹೊರಗೆ ಮಾಯವಾಗುತ್ತಿದ್ದ ನಿಸರ್ಗದಂತೆ ನಂತರದ ನವ್ಯ ಸಾಹಿತ್ಯವೇ ನಿಸರ್ಗವನ್ನು ವಾಚ್ಯಾಭಿವ್ಯಕ್ತಿಯಿಂದ ಮಾಯಮಾಡಿತು*13*. ಕಪ್ಪು ಬಿಳುಪಿನ ಸಿನೆಮಗಳಲ್ಲಿ ಸೃಷ್ಟಿಗೊಳ್ಳುತ್ತಿದ್ದ, ಸ್ಟುಡಿಯೋ ಒಳಗಿನ 'ಚಿತ್ರಿತ' ನಿಸರ್ಗವು ನಂತರ ಹೊರದೇಶಗಳ್ಳ ನಿಸರ್ಗಗಳಾಗಿ, ಐಭೋಗದ ಸಂಕೇತವಾಗತೊಡಗಿತು ಬಣ್ಣದ ಸಿನೆಮಗಳಲ್ಲಿ. ಅದೇ ಕಾಲದಲ್ಲಿ ಅದೇ ನೆಲದವರಾದ ಗೌಡರಿಗಾದರೆ ನಿಸರ್ಗಕ್ಕಿಂತ ಪ್ರಕೃತಿ ಮುಖ್ಯವಾಗಿ, ಕಲಾವಿದನ ಪ್ರಕೃತಿ ದೃಶ್ಯಗಳಿಗಿಂತಲೂ ದೇಹ ಪ್ರಕೃತಿ ಮುಖ್ಯವಾಗಿ, ಪ್ರಕೃತಿಯೆಂದರೆ ಕ್ಯಾಮೆರ ಕಣ್ಣಿನ ದಾಖಲೆಯ ಶಕ್ತಿ ಮೀರಿ ಬೆಳೆದ ಭೂಮಿಯ ಯುಗಾಂತರದ ಸೊಬಗಾಗಿ ಕಂಡದ್ದೊಂದು ವಿಶೇಷ. ದ.ರಾ.ಬೇಂದ್ರೆಯ ಹಗಲಿರುಳೆಂಬ ರೆಕ್ಕೆಗಳುಳ್ಳ ಹಕ್ಕಿಯು ಪಿ.ಬಿ.ಶ್ರೀನಿವಾಸ್‌ರ ಧ್ವನಿಯಲ್ಲಿ ಪಡೆದ ರೊಮ್ಯಾಂಟಿಕ್ ಹಾರಾಟದ ನೈಸರ್ಗಿಕ ಕಲ್ಪನೆಯನ್ನು ಒಳ–ಹೊರಗು ಮಾಡಿದರೆ ಸಿಗುವುದ ಗೌಡರ ಅತ್ಯುತ್ತಮ ನಿಸರ್ಗ ಕೃತಿಗಳು.

ಶಂಕರಗೌಡರು ಒಂದರ್ಥದಲ್ಲಿ ಶಾಂತಿನಿಕೇತನ ಬಾಹೌಸ್ ಸಂಸ್ಕೃತಿಗೆ ನಿಷ್ಠರಾಗಿ ಬದುಕಿದವರು, ಬದುಕುತ್ತಿರುವವರು. ಟಾಗೂರರ ಶಾಂತಿನಿಕೇತನ ಒಂದು ಕಲಾಶಾಲೆಯಾಗಿರದೆ ಒಂದು ಆದರ್ಶಮಯ ದೃಶ್ಯಗ್ರಾಮವಾಗಿತ್ತು. ಕಲಾಸಮುದಾಯದ ಕಲ್ಪನೆಯೇ ಇದರ ಹಾಗೂ ಪಶ್ಚಿಮದ ಬಾಹೌಸ್ ಕಲಾಶಾಲೆಯ ಮೂಲಸತ್ವ, ಕಲೆಯನ್ನು ವಾಣಿಜ್ಯವನ್ನಾಗಿ ರೂಪಾಂತರಿಸದಿರುವುದು ಇವುಗಳ ಮೂಲಸತ್ವ. ಮದ್ರಾಸಿನ ಚೋಳಮಂಡಳ ಕಲಾಶಾಲೆ ಇಂತಹ ಆದರ್ಶವನ್ನು ನಿರಾಕರಿಸಿದುದರಿಂದ ಇಂದು ಅಲ್ಲಿನ ಕಲಾವಿದರ ಕೃತಿಗಳು ಹಣವಾಗಿ, ಗ್ಯಾಲರಿಗಳಲ್ಲಿ ಪ್ರದರ್ಶಿತ ಕೃತಿಗಳಾಗಿ, ತಾತ್ವಿಕವಾಗಿ ಚರ್ಚಿತ ಕೃತಿಗಳಾಗಿ, ಒಂದು ಜೀವಂತ ಸಂಸ್ಕೃತಿಯ ಅಂಗವಾಗಿದೆ, ಸ್ವತಃ ಶಾಂತಿನಿಕೇತನದ ಕಲಾಗುರುಗಳ ಸೃಷ್ಟಿಗಳು ಅವರ ಅಭಿಮಾನಿಗಳ ದೆಸೆಯಿಂದ ಇಂದು ಆಧುನಿಕ ಭಾರತೀಯ ದೃಶ್ಯಕಲೆಯ ಆರಂಭಿಕ ಕೃತಿಗಳಾಗಿ ಹೋಗಿವೆ.

ಶಂಕರಗೌಡರು ಚಿತ್ರಕಲೆ, ಒಕ್ಕಲುತನ ಹಾಗೂ ಆಯುರ್ವೇದದ ಅಭ್ಯಾಸವನ್ನು ಅರ್ಧ ಶತಮಾನಕಾಲ ಬೆರೆಸಿ ಬದುಕಿದವರು. ಮಗಳನ್ನು ನಿರಂತರವಾಗಿ ಕಾಡಿದ ತಲೆಯನೋವಿಗೆ ಅಲೋಪತಿ ವೈದ್ಯ ಅಸಫಲವಾಗಿ, ಹತಾಶ ಹಂತದಲ್ಲಿದ್ದಾಗ ಸ್ವತ: ಆಯುರ್ವೇದ ಕಲಿತು ತಲೆನೋವನ್ನು ವಾಸಿಮಾಡಿದ ಗೌಡರು ಮೊದಲಿನಿಂದಲೂ ಪರ್ಯಾಯ ಮಾರ್ಗಿ. ಕಲಾಭವನದಲ್ಲಿ ವಿದ್ಯಾರ್ಥಿಯಾಗಿದ್ದಾಗ ವಿಪರೀತ ವೇಗದಿಂದ ಚಿತ್ರ ರಚಿಸುತ್ತಿದ್ದರಂತೆ. ಮೊದಲು ಕರಡು ಪ್ರತಿ, ನಂತರ ರೇಖಾಚಿತ್ರ ರಚನೆ, ಅದರ ನಂತರ ಬಣ್ಣ ಹಚ್ಚರಿಬೇಕೆಂದೂ, ಪ್ರತಿ ಹಂತದಲ್ಲಿಯೂ ತಮ್ಮ ಅನುಮೋದನೆ ಪಡೆದು ಮುಂದುವರಿಯಬೇಕೆಂತಲೂ ಗುರುಗಳೊಬ್ಬರು ಸೂಚಿಸಿದರಂತೆ ಒಮ್ಮೆ. ಅದನ್ನೇ ಅತಿ ಮಾಡಿ ಗುರುವಿನಿಂದ ಮುಕ್ತಿ ಪಡೆದವರು ಗೌಡರು. ಕಲೆಯಿಂದಲೇ ಜೀವನ ಮಾಡಬೇಕೆಂಬ ಆದರ್ಶವಿದ್ದ ಕಾಲದಲ್ಲಿ ಒಕ್ಕಲು ಹಾಗೂ ಸಂಸಾರ ಮಾಡುತ್ತಲೂ ಚಿತ್ರಕಲಾಭ್ಯಾಸ ಮಾಡಬಹುದೆಂದು ನಿರೂಪಿಸಿದರು. ಹೀಗೆ ನಿರಂತರವಾಗಿ

ಶಂಕರಗೌಡರು ಪರ್ಯಾಯಮಾರ್ಗಿಗಳು. ಇಂಗ್ಲೀಷ್, ಬೆಂಗಾಲಿ, ಹಿಂದಿ, ಕನ್ನಡ ಭಾಷೆಗಳಲ್ಲಿ ದೃಶ್ಯಕಲೆಗಳ ಬಗ್ಗೆ ಚರ್ಚಿಸಬಲ್ಲ 80ರ ಹರಯದ ಗೌಡರು, ಇನ್ನು *ಒಕ್ಕಲುತನದಿಂದ ರಿಟೈರ್‌ಮೆಂಟ್ ತೆಗೆದುಕೊಂಡೀನ್ರಿ. ಇನ್ನೇನಿದ್ರೂ ಸೀರಿಯಸ್ಸಾಗಿ ಪೈಂಟಿಂಗ್ ಮಾಡೋದಷ್ಟೆ ಎನ್ನುವ ಹುಮ್ಮಸ್ಸಿನಲ್ಲಿದ್ದಾರೆ, ಈಗ.*

ಜನಪ್ರಿಯತೆ ದಕ್ಕದಿದ್ದರೂ ಸಮಾಧಾನಿಯಾಗಿರಬಲ್ಲ ಪರ್ಯಾಯ ಮಾರ್ಗಿಗಳು (ಶಂಕರಗೌಡರಂತೆ) ಕರ್ನಾಟಕದ ದೃಶ್ಯ ಇತಿಹಾಸದಲ್ಲಿ ಅಪರೂಪ. ಶಂಕರಗೌಡರ ಕೃತಿಗಳ ಅತ್ಯುತ್ತಮ ಸರಣಿ : ಸಣ್ಣ ಅಳತೆಯ ಕಾಗದಗಳ ಮೇಲೆ ಚಿತ್ರಿತವಾದ ಹಳ್ಳಿಗಾಡಿನ ಜೀವನ. ಎತ್ತಿನಬಂಡಿಗಳು ಮೊಣಕಾಲುದ್ದದ ನೀರಿರುವ ಕೆರೆ ದಾಟುತ್ತಿರುವುದು, ಮುಸ್ಸಂಜೆಯಲ್ಲಿ ದನಗಳು ಮನೆಗೆ ಹಿಂದಿರುಗುವಾಗ ಪೊಟರೆಯೊಳಗಿನ ಮೊಲ ಇಣುಕಿ ಹಾಕುತ್ತಿರುವುದು, ಆಕಾಶದಲ್ಲಿ ಹಕ್ಕಿಗಳು ಸಾಲಾಗಿ ಹೋಗುತ್ತಿರುವುದು, ದೇವಾಲಯದ ಹೊರಗಿನ ಕಲ್ಲನಾಗರ, ಬಸವಣ್ಣ, ಅಣ್ಣನ ವಚನಗಳ ಪುನರಾವರ್ತಿತ ಚಿತ್ರಣ ಇತ್ಯಾದಿಗಳು ಮೊದಲಿಗೆ ವಾಸ್ತವತೆಯ ಮುದ ನೀಡುತ್ತವೆ. ಈ ಮುದವೆಂಬುದು ಕಲಾಸಾಹಿತ್ಯದಲ್ಲಿ ಕ್ಲೀಷೆಯಾಗಿ ಹೋಗಿದೆ. ಆದರೆ ಈ ಚಿತ್ರಗಳು ಅದನ್ನು ತನ್ನ ನಿರ್ದಿಷ್ಟತೆಯಿಂದಾಗಿ ತಪ್ಪಿಸಿಕೊಳ್ಳುತ್ತವೆ. ಮೈಸೂರು ಕಲಾವಿದರ ನಿಸರ್ಗ ಚಿತ್ರಗಳಲ್ಲಿ ಹಳ್ಳಿಯೂ ಅಲ್ಲದ, ನಗರವೂ ಅಲ್ಲದ ಪಟ್ಟಣ ಜೀವನದ ರೊಮ್ಯಾಂಟಿಕ್ ಕಲ್ಪನೆಗಳಲ್ಲಿ ನಿರ್ಭಾವುಕತೆಯದ್ದೇ ಮೇಲುಗೈ. ಅವುಗಳು ತನಗಲ್ಲ, ಪರರ ಕಣ್ಣಿಗೆ ಎಂಬಂತೆ ಅವು ಭಾಸವಾಗಲು ಕಾರಣ ಮೈಸೂರಿನ ಕಲಾವಿದರೆಲ್ಲ ರಾಜಾಶ್ರಯದ ಸಂಪ್ರದಾಯಕ್ಕೆ ಒಗ್ಗಿಹೋಗಿದ್ದುದು. ತದ್ವಿರುದ್ಧವಾಗಿ ಶಂಕರಗೌಡರ ವಾಸ್ತವತೆಯ ವಿಶೇಷವೊಂದಿದೆ.

ಯಾವ ಹೊಲದಲ್ಲಿ ಯಾವ ಕೈಗಳಿಂದ ವ್ಯವಸಾಯ ಮಾಡಿದ್ದರೋ ಅದೇ ಸ್ಥಳದಿಂದ, ಅದೇ ಕೈಗಳಿಂದ ಅವರು ದೃಶ್ಯಕಲೆಯ ವಾಸ್ತವ ವಸ್ತುಗಳನ್ನೂ ತಮ್ಮ ಚಿತ್ರಗಳ ಮೂಲಕ ಮೂಡಿಸಿದ್ದಾರೆ. ಸಾಹಿತಿಗಳು ಮಣ್ಣಿನ ವಾಸನೆ ಎಂದೆನ್ನುವುದು ಇದನ್ನೇ ಇರಬಹುದು. ಬೆಟ್ಟದೂರಿಗೆ ಹೋದಲ್ಲಿ ತಮ್ಮ ನಿರ್ದಿಷ್ಟ ಚಿತ್ರದ ನಿರ್ದಿಷ್ಟ ಭಾಗಗಳನ್ನು ಅಲ್ಲಿನ ವಾಸ್ತವ ಪ್ರಪಂಚದಲ್ಲಿ ಗುರ್ತು ಮಾಡಿ ತೋರಬಲ್ಲ ಛಾತಿ ಈ ಕಲಾವಿದರದ್ದು. ಇಂತಹ ಭಾವವು ಅವರ ಕೃತಿಗಳಲ್ಲಿದೆ. ಅದು ನಿಸರ್ಗವಲ್ಲದ ವಸ್ತುಗಳನ್ನು ಚಿತ್ರಿಸಲಾದ ದೃಶ್ಯಗಳೂ ಇರಬಹುದು. ಒಂದು ನಿರ್ದಿಷ್ಟ ವಿಳಾಸವುಳ್ಳ ನಿಸರ್ಗಗಳವು.*14*



(ಐ)

ಶಾಂತಿನಿಕೇತನದಲ್ಲಿ ಇಂದಿಗೂ ಪ್ರಸಿದ್ಧವಾಗಿರುವುದು ಅಭನೀಂದ್ರನಾಥರು ಹುಟ್ಟು ಹಾಕಿದ ವಾಶ್ ತಂತ್ರದಿಂದ ಚಿತ್ರ ಬಿಡಿಸುವ ಸಂಪ್ರದಾಯ. ಜಲವರ್ಣವನ್ನು ಕಾಗದದ ಮೇಲೆ ಹತ್ತು ಹಲವು ಸಲ ಲೇಪಿಸಿ, ನೀರಿನಿಂದ ಮೇಲ್ಪದರದ ಬಣ್ಣವನ್ನು ತೆಗೆದುಹಾಕಿ, ಮತ್ತೆ ಮತ್ತೆ ಬಣ್ಣವನ್ನು ಹಚ್ಚುವ ಈ ಮಿನಿಯೇಚರ್ ತಂತ್ರವನ್ನು ಅಭನೀಂದ್ರರು ಪುನರುಜ್ಜೀವಗೊಳಿಸಿದ್ದರು. ಇದಕ್ಕೊಂದು ನಿರ್ದಿಷ್ಟ ರಾಜಕೀಯ ಕಾರಣವಿದೆ. ಅಂದು

ರಾಜಾ ರವಿವರ್ಮನಿಂದ ಭಾರತದಲ್ಲಿ ಖ್ಯಾತಿಗೆ ಬಂದಿದ್ದ ತೈಲವರ್ಣವನ್ನು ಪಾಶ್ಚಾತ್ಯ ಸಂಸ್ಕೃತಿಯೊಂದಿಗೆ ತಾಳೆಹಾಕಿ ನೋಡಿದವರಲ್ಲಿ ಬೆಂಗಾಲ್ ಶಾಲೆಯ ಅಭನೀಂದ್ರನಾಥ್ ಮೊದಲಿಗರು. ತೈಲವರ್ಣ ಪಶ್ಚಿಮವಾದರೆ ವಾಷ್ (ಗೌವಾಷ್) ತಂತ್ರ ಭಾರತೀಯ ಎಂಬುದು ಹೆಚ್ಚುಕಡಿಮೆ ಚಿತ್ರಕಲೆಯ ಮುಖ್ಯ ಮಾಧ್ಯಮವಾದ ಈ ಶಾಲೆಯ ಮೂಲಭೂತ ನಿಲುವು. ಇಂದು ಆ ಮಾಧ್ಯಮ ಉಳಿದುಕೊಂಡಿದೆ, ಅದರ ತತ್ವ ಮಾತ್ರ ಬದಲಾಗಿದೆ.

*ಶಂಕರಗೌಡರು ಅದನ್ನು ತಮ್ಮದೇ ಶೈಲಿಯಲ್ಲಿ ಉಳಿಸಿಕೊಂಡಿದ್ದಾರೆ, ಅದರ ರಾಜಕಾರಣವನ್ನು ಬಿಟ್ಟುಕೊಟ್ಟಿದ್ದಾರೆ.* ಈಗ ಅವರ ಕೃತಿಗಳನ್ನು ಅವರೇ ಬೆಂಗಳೂರು, ಹುಬ್ಬಳ್ಳಿಯಂತಹ ನಗರಗಳಲ್ಲಿ ಪ್ರದರ್ಶಿಸುತ್ತಿದ್ದಾರೆ. ಸಂಕೋಚ ಪ್ರವೃತ್ತಿಯ ಈ ಕಲಾವಿದ ಹಳೆಯ ತತ್ವವೊಂದರಲ್ಲಿ ನಂಬಿಕೆ ಇರಿಸಿಕೊಂಡಿರುವುದರಿಂದಾದ ಲಾಭವೆಂದರೆ, ಮರೆತು ಹೋಗಿದ್ದ ಒಂದು ಚಿತ್ರಣ ಸಂಪ್ರದಾಯ ಧುತ್ತನೆ ಕಣ್ಣೆದುರಿಗೆ ಭೌತಿಕವಾಗಿ ಪುನರ್‌ಸೃಷ್ಟಿಗೊಂಡಂತಹ ಸಣ್ಣ ಮ್ಯಾಜಿಕ್‌ಅನ್ನು ಸೃಷ್ಟಿಸಿದ್ದು!

ಶಂಕರಗೌಡರು ಲಲಿತಕಲಾ ಅಕಾಡೆಮಿಯ ಸದಸ್ಯರೂ ಆಗಿದ್ದರು. ಅವರಿಗಿಂತ ಅರ್ಧ ವಯಸ್ಸಾದ, ಅಷ್ಟೇ (ಅರ್ಧದಷ್ಟೆ) ಅನುಭವವೂ ಇರುವ ಕಲಾವಿದರ ಬಗ್ಗೆಯೆಲ್ಲ ಮೊನೋಗ್ರಾಫ್ ಪುಸ್ತಕಗಳು ಅವರಿಗಿಂತಲೂ ಮುಂಚೆಯೇ ಬಂದು ಹೋಗಿದ್ದಾವೆ ಕೂಡ. ಗೌಡರ ಕಲಾಜೀವನದ ಬದುಕು ಐವತ್ತರ ದಶಕದಲ್ಲೇ ನಿರ್ಧರಿತವಾಗಿತ್ತೆಂಬುದಕ್ಕೆ ಅವರ ಅಂದಿನ ಆ ಸುರುಳಿ ಚಿತ್ರವೇ ಸಾಕ್ಷಿ. ವೀಕ್ಷಕನಿಗೆ ಬೆನ್ನು ಹಾಕಿ ಕುಳಿತ ಕಲಾವಿದ ತನ್ನ ಸೃಷ್ಟಿಯನ್ನು ಅಸ್ವಾಧಿಸುವ ಕ್ರಿಯೆಯಲ್ಲಿ ಮಗ್ನನಾಗಿದ್ದಾನೆ. ಚಿತ್ರ ರಚನೆಯ ಮಗ್ನತೆಗಿಂತ ಅದರ ಪುನರ್ ಅಸ್ವಾಧನೆ ಭಿನ್ನವಾದುದು. ಕಲಾವಿದನ ಸಂಪೂರ್ಣ ಮಗ್ನತೆಗಿಂತಲೂ ಗೌಡರಿಗೆ ಅದನ್ನು ಒಕ್ಕಲುತನದೊಂದಿಗೆ ತಾಳೆ ಹಾಕುವುದು ಮುಖ್ಯವಾಗಿತ್ತು, ಈ ಐದು ದಶಕಗಳಲ್ಲಿ. ಮೊದಲನೆಯದಕ್ಕೆ ಬೆಂಗಳೂರೆಂಬ ನಗರವೇ ತವರಾದರೆ, ಅದರ ಬದಲಿಗೆ ಎರಡನೇ ಕ್ರಿಯೆಯನ್ನು ಗೌಡರು ಬೆಟ್ಟದೂರಿನಲ್ಲೇ ಕಂಡುಕೊಂಡರು. ವೀಕ್ಷಕನಿಗೆ ಬೆನ್ನು ಹಾಕಿ ಕುಳಿತುಕೊಂಡೂ ತನ್ನ ಸೃಷ್ಟಿಯ ಪುನರ್‌ಪರಿಶೀಲನೆಯಲ್ಲೇ ಮಗ್ನನಾಗಿರುವ ಕಲಾವಿದ ಶಂಕರಗೌಡರು. ಎಷ್ಟು ಮಂದಿ ಕಲಾವಿದರಿಗೆ ತಮ್ಮ ವೃತ್ತಿಬದುಕಿನ ಆರಂಭಿಕ ಕೃತಿಯೇ ಭವಿಷ್ಯವಾಣಿಯ ರೂಪದಲ್ಲಿ ಈ ರೀತಿ ಗೌಡರಂತಹವರ ಹಣೆಯ ಬರಹವನ್ನೇ ನುಡಿಯುವಂತಾಗಿದೆ?

## (ಒ) ಒಂದು ರೂಪನಿಷ್ಠ ಓದು

ಇವರ ಕೃತಿಗಳಲ್ಲಿ ಬಹುಪಾಲು ವಾಷ್ ತಂತ್ರದಲ್ಲಿವೆ. ನೋಡಿದ ಕೂಡಲೆ ಜಲವರ್ಣದಂತೆ ಕಂಡುಬರುತ್ತವೆ. ಬಹುಪಾಲು ಹೊರಾಂಗಣ ಚಿತ್ರಗಳು, ನಿಸರ್ಗ ಚಿತ್ರಗಳು, ಚಿತ್ರಣ ಕ್ರಮದಲ್ಲಿ ಬುದ್ಧಿವಂತಿಕೆಗಿಂತಲೂ ಆತ್ಮೀಯ ತೊಡಗಿಸಿಕೊಳ್ಳುವಿಕೆಯೇ ಹೆಚ್ಚು. ಸಮಕಾಲೀನವೆನಿಸಿಕೊಳ್ಳುವ ಕಲಾಕೃತಿಗಳು ಇದಕ್ಕೆ ತದ್ವಿರುದ್ಧ. ಅಂದರೆ ಶಂಕರಗೌಡರ ಕೃತಿಗಳೂ ಸಮಕಾಲೀನವಲ್ಲ ಎಂದಲ್ಲ. ಅವುಗಳನ್ನು ಕುರಿತ ಕಲಾತ್ಮಕ

ಚರ್ಚೆ ಇನ್ನೂ ಹುಟ್ಟಿಯೇ ಇಲ್ಲದಿರುವುದರಿಂದ ಭೌತವಸ್ತುಗಳ ಮಟ್ಟದಿಂದ ಅವರ ಕೃತಿಗಳು ಸಾಂಸ್ಕೃತಿಕವಾಗಿ ಮೇಲೇಳಲು ಸಾಧ್ಯವಾಗಿಲ್ಲ. 'ಸಮಕಾಲೀನ'ವೆಂಬುದು ಒಂದು ಕೃತಿಗೆ ಆಯಾ ಕಾಲವು ಕೊಡುವ ಒಂದು ಊರ್ಜಿತ ಮುದ್ರೆ. ಇವರ ಚಿತ್ರಗಳಲ್ಲಿ ಕೂಡಲೆ ನಾಸ್ಟಾಲ್ಜಿಕ್ ಎನ್ನಿಸಿಬಿಡುವ ಹಲವು ಅಂಶಗಳಿವೆ:

ಅ) ಇಂದು ನೈಸರ್ಗಿಕ ಭೂಪ್ರದೇಶಗಳೆಲ್ಲ ನಗರಗಳಾಗಿ ಮಾರ್ಪಡುತ್ತಿರುವುದರಿಂದ ಇವರ ನಿಸರ್ಗ ಚಿತ್ರಗಳು ಹೆಚ್ಚು ನಾಸ್ಟಾಲ್ಜಿಕ್ ಅಥವಾ ಹಿನ್ನೆನಪಿನ ಬಾಧೆ ನೀಡುವಂತಹ ಚಿತ್ರಗಳೆನಿಸುತ್ತವೆ. ಮತ್ತು

ಆ) ನಾಸ್ಟಾಲ್ಜಿಯದ ಹಿನ್ನೆನಪು ಕಳೆದುಹೋದುದಕ್ಕೆ ವ್ಯಥೆ (ಮೆಲಾಂಕಲಿ)ಯನ್ನು ಉಕ್ಕಿಸುತ್ತದೆ. ಜೊತೆಗೆ

ಇ) ಒಂದ ಸಂಸ್ಕೃತಿಗೆ ವ್ಯಕ್ತಿಗಳನ್ನು ಅಂಟಿಸಿಬಿಡುತ್ತದೆ.

ಈ) ಇಂತಹ ನಾಸ್ಟಾಲ್ಜಿಯ ಗುಣವು ಚಿತ್ರಣ ಸಂಯೋಜನೆಯಲ್ಲಿ, ಚಿತ್ರಣ ರೀತಿಯಲ್ಲಿಯೂ ಕಂಡುಬರುತ್ತದೆ.

ಅಂದರೆ ಬೆಂಗಾಲ್ ಶಾಂತಿನಿಕೇತನ ಕಲಾಭವನದ ವಾಷ್ ತಂತ್ರಜ್ಞಾನದ ಚಿತ್ರಣ ರೀತಿಯನ್ನು ಐದು ದಶಕದ ನಂತರವೂ ಶಂಕರಗೌಡರು ಮುಂದುವರೆಸಿದ್ದಾರೆ. ಇದು ಚಿತ್ರಣ ಶೈಲಿಯ ಒಂದು 'ಪ್ರಜ್ಞಾಪೂರ್ವಕ ಹಿನ್ನೆನಪು'. ಕಳೆದುಹೋದ ಒಂದು (ಭಾರತದ ಮೊದಲ ಆಧುನಿಕ) ಕಲಾಶಾಲೆಯ ಸಮುದಾಯ ಕಲ್ಪನೆಯೇ ಅದು. ಅಂದರೆ ಈ ಕಲಾವಿದರು 50ರ ದಶಕದಲ್ಲಿ ಕಲಿತ ಚಿತ್ರರಚನಾ ಸಂಪ್ರದಾಯವು 1920, 30ರ ದಶಕದಲ್ಲಿ ಕಲಾಭವನದಲ್ಲಿ ತನ್ನ ಅತ್ಯುತ್ಕಟಾವಸ್ಥೆಯನ್ನು ಪಡೆದಾಗಿತ್ತು. 50ರ ದಶಕದಷ್ಟರಲ್ಲೇ ಆ ಚಿತ್ರಣ ತಂತ್ರವು ತನ್ನ ಅಸಲಿ ರಾಷ್ಟ್ರೀಯತೆಯ ರಾಜಕೀಯ ಸ್ವಾತಂತ್ರ್ಯದ ರಾಜಕಾರಣವನ್ನು ಪೂರೈಸಿಕೊಂಡದ್ದಾಗಿತ್ತು–ಕಾಂಗ್ರೆಸ್ ಪಾರ್ಟಿಯಂತೆ! ಇವೆರಡೂ ತಮ್ಮ ಜೀವಿತಾವಧಿಯ ನಂತರವೂ ಅಜರಾಮರವಾಗುವ ಕನಸು ಉಳಿಸಿಕೊಂಡಿವೆ.

ಮೊದಲೇ ಹಿನ್ನೆನಪಾಗಿದ್ದಂತಹ ತಂತ್ರವನ್ನು ಕಲಾಭವನದಲ್ಲೇ ಕಲಿತು ಅದನ್ನು ಕರ್ನಾಟಕಕ್ಕೆ ಕಡ ತಂದು ಆರಬಾರದ ಹಣತೆಯಂತೆ ಕಾಪಾಡಿಕೊಂಡವರು ಶಂಕರಗೌಡರು. ಮೊದಲೇ ಹಿನ್ನೆನಪಾದಂತಹ ಚಿತ್ರಣ ಶೈಲಿಯೊಂದು ಮತ್ತೊಮ್ಮೆ ಹಿನ್ನೆನಪಾಗಿ ಹೋಯಿತು ಈ ಕಲಾವಿದನ ಕೈಯಲ್ಲಿ. **ನೆನಪಿಗೆ ಹಿನ್ನೆನಪು ಇರುವುದಿಲ್ಲವಾದ್ದರಿಂದ ಎರಡು ಬಾರಿ ಹಿನ್ನೆನಪೆಂದರೆ ಹಗಲುಗನಸು ಕಂಡಂತೆ.** ಅಲ್ಲಿ ಬಲವಂತವಿರುತ್ತದೆ ಹಾಗೂ ಸ್ಪಷ್ಟ ನಿರ್ದೇಶನವಿರುತ್ತದೆ, ಸಹಜತೆಯ ಸಾವಿನೊಂದಿಗೆ. ನೆನಪಿರಲಿ, ವಾಷ್ ಚಿತ್ರಣ ತಂತ್ರವು (ತೈಲವರ್ಣವನ್ನು ಮತ್ತದರ ಪಾಶ್ಚಾತ್ಯ ಕ್ರೈಸ್ತ ಧರ್ಮ ಪ್ರೇರಿತ ರಾಜಕಾರಣವನ್ನು ಪ್ರಜ್ಞಾಪೂರ್ವಕವಾಗಿ ಪ್ರತಿರೋಧಿಸಿದಂತಹ) ಬೆಂಗಾಲ್ ಕಲಾಶಾಲೆಯ ತಂತ್ರಜ್ಞಾನ. ವಾಷ್ ತಂತ್ರದಿಂದ ಅದರ ಹಿನ್ನೆನಪನ್ನು ಖಾಲಿ ಮಾಡಿ ಇನ್ನೂ ಬಳಸುತ್ತಿರುವ ಜಾಣ್ಮೆ ಪ್ರೊ. ಕೆ.ಜಿ. ಸುಬ್ರಹ್ಮಣ್ಯನ್‌ರ ಕೃತಿಗಳಲ್ಲಿದೆ. ***ಮೊದಲೇ ಹೇಳಿದಂತೆ ಶಂಕರಗೌಡರದ್ದು ರಾಜಾಕಾರಣಾತೀತ ಚಿತ್ರಣ ಕಲೆ.*** ಮುಗ್ಧತೆಯೂ ಒಂದು ರಾಜಕಾರಣ. ಕಳೆದೈದು ದಶಕದ ಭಾರತವೆಂಬ ದೇಶದ ಪ್ರಜಾಪ್ರಭುತ್ವವಾದಿ ಜನತಂತ್ರವಾದಿ ಪ್ರಯೋಗದಲ್ಲಿ



ಗೌಡರಂತಹ ಚಿತ್ರಕಲಾವಿದರದ್ದು ಮತ್ತು ಬಹುಪಾಲು ನಾಗರೀಕರದ್ದು ಇದೇ ರಾಜಕಾರಣಾತೀತ ರಾಜಕಾರಣ.

ಇವರ ಚಿತ್ರಗಳ ಭೌತಿಕ ವಿವರಗಳನ್ನು ಗಮನಿಸಿ, ವಾಷ್ ತಂತ್ರದ ಮುದವಿದೆ ಅವುಗಳಲ್ಲಿ. ಪ್ರಜ್ಞಾಪೂರ್ವಕ ರಾಜಕೀಯ ಉದ್ದೇಶಗಳಿಲ್ಲ. ಹಾಗಿರುವ ಚಿತ್ರ–ಶಿಲ್ಪಗಳಲ್ಲಿ ಮುದವೆಂಬ ಸೌದರ್ಯಶಾಸ್ತ್ರೀಯ ಅಂಶವು (ಏಸ್ತೆಟಿಕ್ ಎಲಿಮೆಂಟ್ಸ್) ಇರಲಾರದು. ಅದೆಂತಹ ಮುದವೆಂದರೆ, ಒಂದೊಮ್ಮೆ ನಮ್ಮ ಈ ಈಗಿನ ಕಾಂಕ್ರೀಟು ನಗರವೇ ಹೀಗಿತ್ತಲ್ಲ ಎಂದು ಯಾವ ಊರಿನವರಿಗಾದರೂ ಅನ್ನಿಸಿಬಿಡುವ ಮುದ. ಅಂತಲ್ಲಿ ಆ ಆಹ್ಲಾದಕರ ದೃಶ್ಯಗಳು ನೈಜ ಭೌತ ಜಗತ್ತಿನಲ್ಲಿರಬಹುದು ಅಥವ ಇದ್ದವೆಂದು ಯಾರೂ ನಂಬಲು ತಯಾರಿರುವುದಿಲ್ಲ (ಸಿಂಬಾಲಿಸ್ಟ್ ಮತ್ತು ಫ್ರೆಡರಿಕನ ಮಂಜುಗಡ್ಡೆ ನಿಸರ್ಗ ದೃಶ್ಯಗಳಲ್ಲಿರುವಂತೆ). ಶಂಕರಗೌಡರ ಆ ಒಂದೆರೆಡು ನಿಸರ್ಗ ದೃಶ್ಯಗಳನ್ನೇ ಆಧರಿಸಿಕೊಂಡು ಮುಂದುವರೆಯೋಣ. ನಾಲ್ಕಾರು ಪಕ್ಷಿ ಹಾರಿಹೋಗುತ್ತಿರುವ, ಬಂಡಿಗಳು ತೊರೆ ದಾಟುತ್ತಿರುವುವ, ಗೋಧೂಳಿ ಹೊತ್ತಿನಲ್ಲಿ ಊರಾಚೆಗಿನ ಧನಗಳು ಹಿಂದಿರುಗುತ್ತಿರುವುದು–ಇವೆಲ್ಲ ಈಗ, ಜನಸಾಮಾನ್ಯರ ಭಾಷೆಯಲ್ಲಿ ಹೇಳುವುದಾದರೆ ಚಿತ್ರಪಟಗಳಲ್ಲಿನ ನೆನಪಾಗಿ ಉಳಿದುಹೋಗಿವೆ. ಕಳೆದ ಐವತ್ತು ವರ್ಷಗಳು ಶಂಕರಗೌಡರು ಕಲಾವಿದರಾಗಿ ರೂಪುಗೊಂಡ ಕಾಲವೂ ಹೌದು. ಕಣ್ಣೆದುರಿಗೆ ಇದ್ದ ನೈಸರ್ಗಿಕ ಕಾಡು ಹೊಲಗಳು (ಕರ್ನಾಟಕದಲ್ಲಿ) ಕಾಂಕ್ರೀಟ್ ಕಾಡಾಗಿ ಮಾರ್ಪಾಡಾದ ಕಾಲವೂ ಹೌದು. ಇವರು ಕಲಾವಿದರಾಗಿ ರೂಪುಗೊಳ್ಳುತ್ತಿದ್ದಾಗಲೆ ನವ್ಯೋದಯ ಕವಿಗಳು ಉತ್ತುಂಗದಲ್ಲಿದ್ದ ಕಾಲ. ಮತ್ತು ಅವರುಗಳೆಲ್ಲ (ರೊಮ್ಯಾಂಟಿಸಿಸ್ಟರಂತೆ) ನಿಸರ್ಗವನ್ನು ನೈಸರ್ಗಿಕ ದೃಶ್ಯವನ್ನು ಮೀರಿದ, ಸಾಂಕೇತಿಕ ಚೌಕಟ್ಟುಗಳನ್ನಾಗಿ ಮಾರ್ಪಡಿಸಿದವರು. ***ಈ ಅರ್ಥದಲ್ಲಿ ಗೌಡರ ಕೃತಿಗಳು ಹಿನ್ನೆನಪಿನ ಸತ್ವ ಉಳಿಸಿ, ವಿವರಗಳನ್ನು ಕಳಚಿ, ಕವಚವಿಲ್ಲದ ಅಂತಃಸತ್ವಕ್ಕೆ ಉಳಿಗಾಲವಿಲ್ಲದಿರುವುದೇ ಅದರ ನಿಜವಾದ ಶೈಲಿ ಎಂದು ಸಾಧಿಸುತ್ತವೆ.***

ಆದರೆ ಈ ನವ್ಯೋದಯ ಚಿತ್ರಗಳ ಒಳಗೇ ಒಂದು ಸೀಳುದಾರಿ ಇದೆ. ರೊಮ್ಯಾಂಟಿಕ್ ಆದ ಚಿತ್ರಗಳು ಸಾಧಾರಣ ಈ ಜಗತ್ತಿನಲ್ಲಿಲ್ಲದ್ದು, ಇಲ್ಲಿಗೆ ಸೇರದ್ದು. ದಣಿವಾರಿಸಿಕೊಳ್ಳಲು ಮಂದಿ ಹಾದಿಬದಿಯನ್ನು ಕೆಲವು ಕ್ಷಣ ಆಯ್ದುಕೊಳ್ಳುವಂತೆ ಈ ಕಲಾಪ್ರಕಾರಗಳಲ್ಲಿ ರೊಮ್ಯಾಂಟಿಕ್ ಆದುದನ್ನು ಆಧರಿಸುತ್ತೇವೆ ಎಂಬುದೇ ಅವಾಚ್ಯ (ನಾನ್–ವರ್ಬಲ್) ರೊಮ್ಯಾಂಟಿಕ್ ಚಿತ್ರಪ್ರಕಾರಗಳ ಮೂಲ ಅರ್ಥ. ಇಲ್ಲಿ ಶಂಕರಗೌಡರ ಚಿತ್ರಗಳು ಭಿನ್ನವಾಗುತ್ತವೆ. ಉಳುಮೆ ಮಾಡುವ ಕೈಗಳಿಂದಲೇ ಚಿತ್ರರಚಿಸುವುದರಿಂದಾಗಿ ದೃಶ್ಯಗಳಿಗೂ ಮಣ್ಣಿನ ಗುಣ ದೊರಕಿಬಿಡುತ್ತವೆ. ವ್ಯಾನ್‌ಗೋನ ***ಪೊಟಾಟೋ ಈಟರ್ಸ್*** ಚಿತ್ರವೊಂದಿದೆ. ಅದಕ್ಕೂ ದೇವನೂರು ಮಹಾದೇವರ ಒಡಲಾಳದ ದೀಪದ ಬೆಳಕಿನಲ್ಲಿ ಕಡ್ಲೇಕಾಯಿ ತಿನ್ನುವ ಯಜ್ಞಕ್ಕೂ ಇರುವ ಸಮ್ಯತೆ ಎಂದರೆ ಎರಡೂ ರಿಚ್ಯುಯಲ್‌ಗಳಾಗಿ ಹೋಗುವ ಕ್ರಿಯೆ. ಶಂಕರಗೌಡರ ಚಿತ್ರಣ ಕ್ರಮ ಮತ್ತು ಅದರ ಫಲವಾಗಿ ಮೂಡಿಬರುವ ಚಿತ್ರಗಳಲ್ಲೂ ಈ ರಿಚ್ಯುಯಲ್ ಗುಣವಿದೆ.*15*

(ಓ) ರಿಚ್ಯುಯಲ್ ಪ್ರಕ್ರಿಯೆ.

ಐವತ್ತು ವರ್ಷಕಾಲ ಗೌಡರ ಕುಂಚದ ರೂಪ, ಆಕಾರ, ಬಿರುಸು ಬದಲಾಗಿರಬಹುದು ಆದರೆ ಅದರ ಹಿಂದಿನ ನಂಬಿಕೆ ಬದಲಾಗಲಿಲ್ಲ. ಆದ್ದರಿಂದ ಅವರ ಚಿತ್ರಣ ಶೈಲಿಯಲ್ಲಿ 'ವ್ಯತ್ಯಾಸಗಳು' ತಲೆದೋರಲಿಲ್ಲ. ನಮ್ಮ ಹಿನ್ನೆನಪನ್ನು ಬದಲಾಯಿಸಿದಂತೆ ಅದು. ಹಿನ್ನೆನಪಿಗೆ ಸ್ಪಷ್ಟ ಆಕಾರವೇ ಇಲ್ಲದಿರುವಾಗ ಅದನ್ನು ಬದಲಾಯಿಸುವುದಾದರೂ ಎಂತು ? ಏಕೆಂದರೆ ರಿಚ್ಯುಯಲ್‌ಗಳೇ (ಆಚರಣೆಗಳೇ) ಹಾಗೆ. ಸುಲಭಕ್ಕೆ ಅಲುಗಾಡಿಸಲಾಗದ ನಂಬಿಕೆಯೇ ಆಚರಣೆಗಳ ಆತ್ಮ. ಶಂಕರಗೌಡರ ಕಲಾತ್ಮಕ ಬೆಳವಣಿಗೆಗೆ ಒಂದು ಒಳಮುಖವಾದರೆ ಒಂದು ಹೊರಮುಖ. ಹೊರಮುಖ ಸಾಧಾರಣೀಕರಣದ ಮುಖವಾಡ. ಒಳಮುಖ ಮಾತ್ರ ವಿಭಿನ್ನ. ಗ್ಯಾಲರಿ ಮತ್ತು ಮಾರುಕಟ್ಟೆ ಸಂಸ್ಕೃತಿ ಬರುವ ಮುನ್ನ ಹುಟ್ಟಿಕೊಂಡ ಕಲಾಭವನದ ಈ ಆದರ್ಶವು ಕಲಾವಿದನ ವ್ಯಕ್ತಿತ್ವಗಳನ್ನೂ ಕಲಾತ್ಮಕ ಅಭಿವ್ಯಕ್ತಿಯ ಒಂದಂಶವಾಗಿ ಪರಿಗಣಿಸುತ್ತಿತ್ತು.

ಶಂಕರಗೌಡರ ಕಲೆ ಇಂದಿಗೆ ಎಷ್ಟು ಪ್ರಸ್ತುತ ಎಂದು ತಿಳಿಯಬೇಕಾದರೆ ಅವುಗಳ ಒಳಗೆ ಹುದುಗಿರಬಹುದಾದ ತತ್ವವನ್ನು ಶೋಧಿಸಿ ತೆಗೆಯಬೇಕು. ನಾಸ್ಟಾಲ್ಜಿಯ, ಹಿನ್ನೆನಪು, ರಿಚ್ಯುಯಲ್ ಗುಣ, ನಿಯೋ–ರೊಮ್ಯಾಂಟಿಕ್ ಗುಣಗಳ ಕವಚಗಳು ಮೊದಲಿಗೆ ತೋರಿಬರುತ್ತವೆ. ಬೆಂಗಾಲ್ ಕಲಾಶಾಲೆಯ ತೆಕ್ಕೆಗೆ ಇವುಗಳನ್ನು ನೂಕಿಬಿಡುವುದು–ಎರಡಕ್ಕೂ ಅಪಮಾನ ಮಾಡಿದಂತೆ. ಮತ್ತು ಬೆಂಗಲ್ ಕಲೆಯನ್ನು ಅನುಭವಿಸಲು ಇರುವ ವಾಚ್ಯ, ಮೌಖಿಕ ಸಂವಾದಗಳು ಒಂದು ನಾಯಕ–ಕೇಂದ್ರಿತ ಕಥನಕ್ಕೆ (ಹೀರಾಯಿಕ್ ನರೆಟಿವ್) ಎಡೆ ಮಾಡಿಬಿಡುತ್ತದೆ. ಅಂತಹ ನೋಡುವ ಕ್ರಮದಲ್ಲಿ ಶಂಕರಗೌಡರಂತಹ ಬೆಂಗಾಲ್ ಹೊರಗಿನ ಬೆಂಗಾಲ್ ಶಾಲೆ ಕಲಾವಿದರು ಅಂಚಿನವರಾಗಿಬಿಟ್ಟಿದ್ದಾರೆ. ಶಂಕರಗೌಡರ ಬಗ್ಗೆ ಇಲ್ಲಿವರೆಗೂ ಬಂದಿರುವ ದಾಖಲೆಗಳು (ಆರ್ಕೈವ್) ಎಂದರೆ ಲಲಿತಕಲಾ ಅಕಾಡೆಮಿಯ ಸಂಸ್ಕರಣವಿಲ್ಲದ ವಿಡಿಯೋ ದಾಖಲೆ, ಎರಡು ಮೂರು ಸತ್ವವಿಲ್ಲದ ದಾಖಲಾತಿ ಲೇಖನಗಳು ಹಾಗೂ ವಿದ್ಯಾರ್ಥಿಯೊಬ್ಬನ ಎಂ.ಫಿಲ್ ಡಿಸರ್ಟೇಷನ್. ಇವುಗಳಲ್ಲಿ ಬಹುಪಾಲು ದಾಖಲಾತಿಗಳು ಅಥವ ತತ್ವಧಾರಗಳಿಲ್ಲದ ಚೂರುಪಾರು ವಿಶ್ಲೇಷಣೆಗಳು. ಈ ಲೇಖನಗಳಲ್ಲಿ ಇವರ ಹೆಸರನ್ನು ಕೃತಿಗಳೊಂದಿಗೆ ಅದಲು–ಬದಲುಗೊಳಿಸಿದರೆ ಅಂತಹ ಮಹತ್ತರ ವ್ಯತ್ಯಾಸವೇನೂ ಉಂಟಾಗುವುದಿಲ್ಲ. ಆದ್ದರಿಂದ ಈ ತೆರನಾದ ಎರಡನೆಯ ಗ್ರಹಿಕೆಯ ಕ್ರಮವೂ ಗೌಡರ ಕೃತಿಗಳಲ್ಲಿರಬಹುದಾದ ಮಹತ್ವನ್ನು ಉದ್ದೇಶಪೂರ್ವಕವಾಗಲ್ಲದಿದ್ದರೂ ಮುಗ್ಧತೆಯ ನೆಪದಿಂದ ಗೌಣಗೊಳಿಸಿದೆ.



ಮೂರನೇ ಒಂದು ಗ್ರಹಿಕೆಯ ಕ್ರಮ ಉದ್ದೀಪನಾ–ತಂತ್ರದ್ದು (ಎವೊಕೇಟಿವ್ ಅನಲಿಸಿಸ್). ಗಾಂಧೀ ಪ್ರಭಾವವಿದ್ದ ಕಾಲಕ್ಕೆ, ಟಾಗೋರರ ಆದರ್ಶದ ಕಲಾಶಾಲೆಯಲ್ಲಿ ಕಲಾಭ್ಯಾಸಂಗ ಮಾಡಿದ್ದು, ಟಾಗೋರ್ ಹಾಗೂ ಗಾಂಧಿಯರ ನಡುವಣ ತಾತ್ವಿಕ (ತನ್ಮೂಲಕ ಕಲಾತ್ಮಕ) ವ್ಯತ್ಯಾಸವಿದ್ದುದು, ಅದರ ಅರಿವಿದ್ದೂ ಗೌಡರು ದೆಹಲಿಯ

ಗಾಂಧಿಯ ಭಿತ್ತಿಚಿತ್ರಗಳನ್ನು ರಚಿಸಿದ್ದು, ಕಲೆ–ವ್ಯವಸಾಯ–ವೈದ್ಯವೃತ್ತಿಯ ಬೆಸಾಯದಿ ಒಂದು ಜೀವನ ಮೌಲ್ಯವನ್ನು ರೂಪಿಸಿಕೊಂಡದ್ದು, ಸುತ್ತಮುತ್ತಲೂ ಗ್ರಾಮ–ನಗರ, ನಗರ–ಮೆಟ್ರೊಪೊಲಿಸ್, ಶೂದ್ರ–ಬ್ರಾಹ್ಮಣ, ನವೋದಯ–ನವ್ಯ–ನವ್ಯೋತ್ತರ, ದಲಿತ ಚಳುವಳಿ, ಕಾಗೋಡು ಸತ್ಯಾಗ್ರಹ ಇತ್ಯಾದಿ ಚಳುವಳಿಗಳು ನಡೆಯುತ್ತಿದ್ದರೂ, ಚಿತ್ರಚೌಕಟ್ಟಿನೊಳಗಿನ ತಮ್ಮ ಚಿತ್ರಣಸೂತ್ರದಲ್ಲಿನ ಏಕತೆಯ ನಂಬಿಕೆಯನ್ನು ಉಳಿಸಿಕೊಂಡದ್ದು– ಇವಿಷ್ಟು ಇವರ ಕಲಾತ್ಮಕ, ತಾತ್ವಿಕ ಜೀವನದ ಮುಖ್ಯ ಸಾಧನೆ. ಮತ್ತೊಂದು ರೀತಿಯಲ್ಲಿ ಹೇಳುವುದಾದರೆ, ಅವರು ಐವತ್ತು ವರ್ಷ ಕಾಲ ಚಿತ್ರಿಸಿದ ಕಲಾಕೃತಿಗಳೆಲ್ಲ ಒಂದೇ ಶೈಲಿಯಲ್ಲಿದ್ದಂತೆ ಕಂಡುಬರಬಹುದು. ಎಷ್ಟು ವೈವಿಧ್ಯಮಯ ಕೃತಿಗಳನ್ನು ಸೃಷ್ಟಿಸಿದರೆಂಬುದಕ್ಕಿಂತಲೂ ತಮ್ಮ ಚಿತ್ರಗಳಲ್ಲಿ ಎಷ್ಟು ಆಳಕ್ಕಿಳಿದರವರು ಎಂಬುದೇ ಮುಖ್ಯವಾಗುತ್ತದೆ. ಅದಕ್ಕಿರುವ ಉಪಾಯವೆಂದರೆ ಅವರ ಕೃತಿಗಳನ್ನು ರೂಪನಿಷ್ಠ ವಿಶ್ಲೇಷನೆಯ ತೆಕ್ಕೆಗೆ ಸಿಗದ ಹಾಗೆ ನೋಡಿಕೊಳ್ಳುವುದು.

(ಔ)

ಪ್ರಸ್ತುತ ಸಮಕಾಲೀನ ದೃಶ್ಯವೀಕ್ಷಣಾ ಕ್ರಮದಿಂದ ಗೌಡರ ಕೃತಿಗಳನ್ನು ಗಮನಿಸೋಣ. ಇಲ್ಲಿ ವೀಕ್ಷಣೆಗಿಂತಲೂ ಗ್ರಹಿಕೆಯ ಕ್ರಮ ಮುಖ್ಯ. ಆಧುನಿಕಕ್ಕೂ ಆಧುನಿಕೋತ್ತರಕ್ಕೂ ಇರುವ ಮುಖ್ಯ ವ್ಯತ್ಯಾಸವೇ ಇದು. ತೀರ ಆಳಕ್ಕಿಳಿದರೆ ಗೌಡರ ಕೃತಿಗಳಲ್ಲಿ ಭೌಗೋಳೀಕರಣದ, ತಾಂತ್ರಿಕ ಹಿಡಿತದಿಂದ ತಪ್ಪಿಸಿಕೊಳ್ಳುವ ಹುನ್ನಾರ ಹೆಚ್ಚಿದೆ. ಇವರ ಚಿತ್ರಗಳೆಂದರೆ ಒಂದು ನಿರ್ಭಾವುಕ ಮನಸ್ಥಿತಿ. ಚಿತ್ರಗಳನ್ನು ದಿಟ್ಟಿಸುತ್ತಲೇ ಹೋದರೆ ಅದರಲ್ಲಿ ಗೌಡರು ವ್ಯಯಿಸಿರಬಹುದಾದ ದೀರ್ಘಾವಧಿಯ ಭಾವ ಗೋಚರಿಸುತ್ತದೆ. ಪದರ ಪದರಾಗಿ ಬಳಿದಿರಬಹುದಾದ ಜಲದ ಬೆರಕೆಯ ಬಣ್ಣವು ಹೆಚ್ಚು ಹೊತ್ತು ಚಿತ್ರದ ಮುಂದೆ ನಿಲ್ಲಿಸುತ್ತದೆ. ಕಲಾವಿದನಿಗೆ ಭಾವನಾತ್ಮಕವಾಗಿ ಸೇರಿದ ಜಾಗಕ್ಕೆ ಸಾಕಷ್ಟು ಕಾಲಾವಕಾಶದ ನಂತರ ಭೇಟಿ ಕೊಟ್ಟಾಗ ಅಲ್ಲಿ ಧ್ಯಾನಸ್ಥರಾಗುವ ಆಶಯ ಇಲ್ಲಿ ಕಂಡುಬರುತ್ತದೆ. ಈ ನಿಸರ್ಗದೃಶ್ಯಗಳಲ್ಲಿನ ಬೆಳಗು ಮುಂಜಾನೆಯ ಸೃಷ್ಟಿ ಕಣ್ಣಿಗೆ, ದಿನದಾದ್ಯಂತ ಉಂಟಾದ ಬೆಳಕಿನ ಸ್ಥಿತ್ಯಂತರ ಮನಸ್ಸಿಗೆ. ಎಲ್ಲಿಂದಲೋ ಬರುತ್ತಿರುವ ಮತ್ತೆಲ್ಲಿಗೋ ಹೋಗುತ್ತಿರುವ– ಒಟ್ಟಿನಲ್ಲಿ ಇಲ್ಲಿ ಈಗ ನಡೆಯುತ್ತಿರುವ ಘಟನೆ ಹಾಗೂ ಅದು ಉದ್ಧೀಪಿಸುತ್ತಿರುವ ಭೂತ ವರ್ತಮಾನಗಳು ಹಿಂದೆಮುಂದಿನ ಆಗುಹೋಗುಗಳ ನಡುವಿನ ಘರ್ಷಣೆ ಮುಖ್ಯವಾಗುತ್ತದೆ. ಕಾಲವನ್ನು, ಕಾಲನನ್ನು ಮರಗಟ್ಟಿಸುವುದೇ ಇವರ ನಿಸರ್ಗ ಚಿತ್ರಗಳ ಅಂತಿಮಗುರಿಯಾಗಿರಬಹುದೇ? ಎಂದು ಕಾವ್ಯಾತ್ಮಕ ಧ್ವನಿಯಲ್ಲಿ ಸಧ್ಯಕ್ಕೆ ಕೇಳಿ ನಿಲ್ಲಿಸಬಹುದು, ತಾತ್ಕಾಲಿಕವಾಗಿ.

* * *

## ಟಿಪ್ಪಣಿ

*1* 'ಕಲಾವಿದನ ವಿನಯ'ವೆಂಬ ಕಲ್ಪನೆ 'ವಿಮರ್ಶೆಯ ವಿನಯ' ಎಂದು ಕನ್ನಡ ಸಾಹಿತ್ಯದಲ್ಲಿ ಜನಪ್ರಿಯವಾಗಿರುವ 'ಯುಟೋಪಿ'ಯದಂತಹದ್ದು. ಅಂತಹ ನಂಬಿಕೆಗಳ ನಿರ್ಮಿತಿಗಳಾಚೇಗೆ ಸ್ಕಿಜೋಫ್ರೇನಿಯ ಎಂಬ ಸ್ಥಿತಿಯು ಕ್ರಿಯಾತ್ಮಕವಾಗಿ ಕೆಲಸ ಮಾಡುವುದು. ಉದಾಹರಣೆಗೆ ವ್ಯಾನ್ ಗೋ ಎಂಬ ಕಲಾವಿದ ಜೀವಂತವಿದ್ದ ಕಾಲದಲ್ಲಿ ಆತನಿಗೆ ಅಂಟಿತ್ತೆನ್ನಲಾದ ಈ ಜಾಡ್ಯವು ಒಂದು ಖಾಯಿಲೆಯಾಗಿ ಪರಿಗಣಿತವಾಗಿತ್ತು, ಹತ್ತೊಂಬತ್ತನೇ ಶತಮಾನದಲ್ಲಿ. ಮುಂದಿನ ಶತಮಾನದಲ್ಲಿ ಅದೊಂದು ಕ್ರಿಯಾತ್ಮಕ ಪ್ರತಿಭೆಯಾಗಿ ರೂಪುಗೊಂಡಿತ್ತು! ಮರಣೋತ್ತರವಾಗಿಯಷ್ಟೇ ವ್ಯಾನ್‌ಗೋ ಸಾಮಾಜಿಕವಾಗಿ ಸ್ವೀಕೃತನಾದದ್ದಕ್ಕೆ ಸ್ಕಿಜೋಫ್ರೇನಿಯದ ಅರ್ಥೈಸುವಿಕೆ ಬದಲಾದದ್ದೇ ಕಾರಣ. ನವೋದಯದಿಂದ ಕರ್ನಾಟಕ ದೃಶ್ಯಕಲೆಯು ಸಮಕಾಲೀನ ಆಧುನಿಕತೆಗೆ ಬದಲಾದುದರ ಅರ್ಥವೇನೆಂದರೆ ಅದು 'ಕಲಾವಿದನ/ವಿಮರ್ಶೆಯ ವಿನಯವನ್ನು' ಪ್ರಜ್ಞಾಪೂರ್ವಕವಾಗಿ ಬದಿಗಿರಿಸಿದ್ದು, ಮತ್ತು ಡಿ.ಆರ್. ನಾಗರಾಜ್ ಹೇಳುವಂತಹ ಪಿತೃಹತ್ಯೆ ಗುಣವನ್ನು ಮೈಗೂಡಿಸಿಕೊಂಡಿತ್ತು ಈ ಆಧುನಿಕತೆ. ಗೌಡರು ಈ ಅರ್ಥದಲ್ಲಿ ಆಧುನಿಕರು ಅಥವ ಸ್ಕಿಜೋಫ್ರೇನಿಕ್ ಅನ್ನಿಸುವುದಿಲ್ಲ. ಓದಿ : *Fritzof Kapra* ಸ್ಕಿಝೊಫ್ರೇನಿಯ ಕುರಿತು ಬರೆದಿರುವ ಲೇಖನ, "ಟರ್ನಿಂಗ್ ಪಾಯಿಂಟ್" ಪುಸ್ತಕದಲ್ಲಿ.

*2* ಅವನ್ ಗಾರ್ಡ್‌ನ ಪರಿಚಯಾತ್ಮಕ ಬರವಣಿಗೆಗಳಿಗಾಗಿ ಓದಿ : *Hilton Kramer*ನ ಪುಸ್ತಕ *"The Age of Avant Garde" (1850-1950).*

*3* ರವಿವರ್ಮನ ಉದಾಹರಣೆ ಗಮನಿಸಿ. 1910ರ ಬೆಂಗಾಲ್ ಪುನರುಜ್ಜೀವನ ಪ್ರೇರಿತ ನೇತ್ಯಾತ್ಮಕ ಅಭಿಪ್ರಾಯವು ರವಿವರ್ಮನ ಕೃತಿಗಳನ್ನು ಸುಮಾರು ಒಂದು ಶತಮಾನ ಕಾಲ ಮುಸುಕಿನಲ್ಲಿರಿಸಿಬಿಟ್ಟಿತು. 1990ರಷ್ಟು ತಡವಾಗಿ ರವಿವರ್ಮನನ್ನು ಮತ್ತೆ ತಾತ್ವಿಕ ಚಿಂತನೆಯ ಪರಿಧಿಯೊಳಕ್ಕೆ ಬಿಟ್ಟುಕೊಳ್ಳಲಾಯಿತೆಂಬ ಅಂಶ ಗಮನಿಸಿ. ಇದಕ್ಕೆ ಕಾರಣಗಳೇನೇ ಇದ್ದರೂ ಪ್ರತಿ ಕಲಾವಿದನೂ ತನ್ನ ಸಮಾಜಕ್ಕೆ ಕಲಾವಿದನಾಗಿ, ಕೇವಲ ಕಲಾಕೃತಿ ಮೂಲಕ, ಸಾಂಸ್ಕೃತಿಕ ನಾಯಕನಾಗಿ; ಇತ್ಯಾದಿಯಾಗಿ ಪರಿಚಿತನಾಗುವಲ್ಲಿ ಆತನ/ಆಕೆಯ ಒಪ್ಪಿಗೆಯೂ ಇರುತ್ತದೆ. ಉದಾಹರಣೆಗೆ : ಹುಸೇನರ ಜನಪ್ರಿಯತೆಯ ಎದಿರು ಗಣೇಶ್ ಪೈನರ ವ್ಯಕ್ತಿತ್ವದ ನಿಗೂಢತೆ ಇರಿಸಿ ನೋಡಿ. ಎರಡೂ ಉದ್ದೇಶಪೂರ್ವಕವೇ ಅಲ್ಲವೆ?

*4* ಗೌಡರು ಮತ್ತು ಶಿವಪ್ರಸಾದರ ಕೃತಿಗಳ ನಡುವೆ ಇರುವ ವ್ಯತ್ಯಾಸವೆಂದರೆ ಅದು ನಂಬಿಕೆಯನ್ನು ಕುರಿತದ್ದು. ಶಿವ ತೈಲವರ್ಣದ ಮೂಲಕ ಜಗತ್ತನ್ನು ಚಿತ್ರಿಸುತ್ತಲೇ ತೈಲವರ್ಣದ ಕಡೆಗೇ ಗಮನ ಹರಿಸಿದವರು. ಝೆನ್‌ನ ಕೋವಾನೊಂದರಂತೆ *(Koan)* ಚಂದ್ರನ ಬದಲು ಅದರೆಡೆ ತೋರಲಾರದ ಬೆರಳನ್ನೇ ಪರೀಕ್ಷೆಗೊಳಪಡಿಸಿವರು. ಗೌಡರದ್ದು ಇರುವ ನೆಲದ ಮೇಲೇ ಚಂದ್ರನನ್ನು ಆವಾಹನೆ ಮಾಡಿಕೊಂಡದ್ದು. ಶಿವ ಪಕ್ಕಾ ಬೌದ್ಧ/ಎಕ್ಸಿಸ್ಟೆಂಷಿಯಲಿಸ್ಟ್ ಅನುಮಾನಿಯಾದರೆ ಗೌಡರ ವಚನಗಳ ಏಕಾಗ್ರತೆಯನ್ನು ಬಯಸುವವರು.

*5* ದೃಶ್ಯವೊಂದು 'ಕಲೆ'ಯಾಗುವ ಪ್ರಕ್ರಿಯೆಯ ಬಗ್ಗೆ ನಮ್ಮಲ್ಲಿ ಒಂದು ತಪ್ಪು ನಂಬಿಕೆ ಇದೆ. 1960ರ ದಶಕದಲ್ಲಿಂದ ಸಂವನಹದ ಭೀತಿಯಿಂದಾಗಿ ಹುಟ್ಟಿಕೊಂಡ ಈ ನಂಬಿಕೆಯಿಂದಲೇ ನಮ್ಮಲ್ಲಿ "ಕಲೆ ತಾನಾಗಿಯೇ ಮಾತನಾಡಬೇಕು" ಎಂಬ ನಂಬಿಕೆ ಬಂದಿತು. ಹಾಗೆ ನಂಬಿ ಕುಳಿತವರು ಅನಾಮಿಕರಾಗಿಯೇ ಉಳಿದರು (ಗೌಡರು ಇದಕ್ಕೊಂದು ಜ್ವಲಂತ ಉದಾಹರಣೆ). ಹಾಗಲ್ಲದೆ ಅದನ್ನೊಂದು ರಾಜಕಾರಣವೆಂದು ಸಾಧಿಸಿ ತೋರಿಸಿದವರ ಇತಿಹಾಸವೇ ಭಾರತೀಯ ಕಲಾ ಇತಿಹಾಸವೂ ಹೌದು. ಇದಕ್ಕೊಂದು ಹೋಲಿಕೆ ನೀಡಬಹುದು. "ಜಗತ್ತು ಸೃಷ್ಟಿಗೊಂಡ ಮೊದಲ ಕ್ಷಣದ ಮೊದಲು ಏನೂ ಇರಲಿಲ್ಲ. ಮೊದಲು ಸೃಷ್ಟಿಗೊಂಡದ್ದು ಬೆಳಕು. ಹಾಗೆಂದಾಕ್ಷಣ ವಿಶಾಲ ಕಗ್ಗತ್ತಲಲ್ಲಿ ಬೆಳಕಿನ ಕಿಂಡಿಯೊಂದು ಬೆಳಕಿನ ವೇಗದಲ್ಲಿ ಹರಡುವುದು ನಿಮ್ಮ ಸ್ಮೃತಿಯಲ್ಲಿ ಚಿತ್ರವಾಗಿ ನಿಂತರೆ ಅದು ತಪ್ಪು. ಏಕೆಂದರೆ ಆಗ ಕತ್ತಲೆಯೂ ಇರಲಿಲ್ಲ" ಎಂದು ತನ್ನ ಪುಸ್ತಕದ *(A Short History of Nearly Everything)* ಆರಂಭದ ವಾಕ್ಯಗಳಲ್ಲಿ ತಿಳಿಸುತ್ತಾನೆ ಬಿಲ್ ಬ್ರೈಸನ್. ಕಲೆ ಇಂತಹ ಗುಣ ಹೊಂದಿರುತ್ತದೆ. ಅಂದರೆ ಕಲೆ (ಸಾಹಿತ್ಯ, ಸಿನೆಮ ಎಲ್ಲವೂ) ಸಂವಹನ ಕ್ರಿಯೆಯಲ್ಲಿ ಬಲಶಾಲಿ ವರ್ಗದವರ ಸ್ವತ್ತು. ಗೌಡರು ಇಂತಹ ವರ್ಗದಿಂದ ದೂರವಾಗಿದ್ದರೋ ಅಥವ ಕಲಾಸಮೂಹವೊಂದರಿಂದ ದೂರವಿರುವುದರ ಮೂಲಕ ಇಂತಹ ಹೊಸದೊಂದು ಆಯಾಮವುಳ್ಳ ಶಕ್ತಿಕೇಂದ್ರವನ್ನು ಹುಟ್ಟುಹಾಕುತ್ತಿದ್ದರೋ ಎಂಬುದನ್ನು ಕಾಲವೇ ನಿರ್ಧರಿಸಬೇಕು.

*6* ಕೆ. ವೆಂಕಟಪ್ಪನರ ಕೃತಿಗಳಂತೂ ಜೆ.ಜೆ.ಕಲಾಶಾಲೆ, ಬೆಂಗಾಲ್ ಶಾಲೆ ಹಾಗೂ ಕಲ್ಕತ್ತ ಶಾಲೆಯ ಶೈಲಿಯ ವಿಕ್ಷಿಪ್ತ ಬೆರಕೆ. "ಆದ್ದರಿಂದಲೇ" ಎನ್ನಲಾಗಿದಿದ್ದರೂ ಅವರನ್ನು ಗ್ರಹಿಸಲು ಇನ್ನೂ ಸಾಧ್ಯವಾಗಿಲ್ಲದಿರುವುದಕ್ಕೆ ಇದೇ ಕಾರಣವೆಂದೇನೂ ಇಲ್ಲ. ಜಾನಕಿ ನಾಯರ್, ರವಿಕುಮಾರ್ ಕಾಶಿ ಹಾಗೂ ಪ್ರೊ. ಎಸ್.ಕೆ. ರಾಮಚಂದ್ರ ರಾವ್‌ರ ಬರಹಗಳಿಂದ (1) ಬೆಂಗಳೂರಿನ ನಗರೀಕರಣ, (2)

ದಂತಕತೆಯೊಂದರ ಸೃಷ್ಟಿಯ ಹಿಂದಿರುವ ಹುನ್ನಾರ ಹಾಗೂ (3) ಬೆಂಗಾಲ್/ ಕೊಲ್ಕೊತ್ತ ಶಾಲೆಯ ಹಿನ್ನೆಲೆಯಲ್ಲಿ ವೆಂಕಟಪ್ಪನವರನ್ನು ಅರ್ಥ ಮಾಡಿಕೊಳ್ಳಬಹುದು. ಜೊತೆಗೆ ಶಂಕರಗೌಡ ಬೆಟ್ಟದೂರರನ್ನೂ ಸಹ!

*7* ಬೆಂಗಾಲ್ ಕಲಾಶಾಲೆಯ ಬಗ್ಗೆ ಹಾಗೂ ಆ ಕಲಾಶಾಲೆಯ ಕೇಂದ್ರವೃತ್ತಾಂತದ ಬಗ್ಗೆಯೇ ಬರೆದವರಲ್ಲಿ ಮುಖ್ಯರಾದವರು ಪ್ರೊ: ಕೆ.ಜಿ. ಸುಬ್ರಹ್ಮಣ್ಯನ್ ಮತ್ತು ಆರ್. ಶಿವಕುಮಾರ್.

*8* ಶಿವರಾಮ ಕಾರಂತರ ಬರವಣಿಗೆಗಳಲ್ಲಿ ಅವರ ರಾಜಕೀಯ ಕಲ್ಪನೆಗಳು 1950ರ ದಶಕದಲ್ಲೇ ನಿಂತಂತಾಗಿಬಿಡುತ್ತದೆ (1990ರಲ್ಲೂ ಸಹ) ಎಂದು ಡಾ. ಡಿ.ಆರ್.ನಾಗರಾಜ್ ಒಂದೆಡೆ ಒತ್ತಿ ಹೇಳಿದ್ದಾರೆ. ಕಲಾತ್ಮಕವಾಗಿ ಗೌಡರಿಗೂ ಅಂತಹ ಒಂದು ವರ್ಗೀಕರಣಕ್ಕೆ ಸೇರ್ಪಡಿಸಿರುವುದೇ ಕಲಾವಲಯದಲ್ಲಿರುವ ಸತ್ಯ.

*9* ಡಯಲೆಕ್ಟಿಕಲ್ ದೃಶ್ಯಕಲೆಯಲ್ಲಿ ಎಲ್ಲೆಡೆ ಇದೆ, ನಮ್ಮಲ್ಲಿ. ಚಿತ್ರಕಲೆಯ ಬಗೆಗಿನ ಬರವಣಿಗೆಗಳನ್ನೇ ನೋಡಿ. ಸರಿ ಅಥವ ತಪ್ಪು ಎಂಬುದನ್ನು ವಿಮರ್ಶೆಗಳಲ್ಲಿ ಮತ್ತು ವಿಮರ್ಶೆಯ ಮೆಥಡಾಲಜಿಯಲ್ಲಿ ನಾವೆಲ್ಲ ಬಯಸುವುದು ಈ ಡಯಲೆಕ್ಟಿಕಲ್ ಮನೋಭಾವದಿಂದಲೇ. ಸರಿ ತಪ್ಪುಗಳೆರಡನ್ನೂ ಒಳಗೊಂಡ ಬರವಣಿಗೆಗಳಾದರೆ ಅದನ್ನು ವಿಮರ್ಶಾಪ್ರಕಾರದಿಂದ ಹೊರಗಿರಿಸಿ, 'ಫಿಕ್ಷನ್' ಎನ್ನುತ್ತೇವೆ, ಅಂತಹ ಮಾದರಿಗಳು ಇನ್ನೆಲ್ಲೋ ಇರುವಾಗಲೂ ಸಹ (ರೊಲಾಂಡ್ ಭಾರ್ಥನ ಬರವಣಿಗೆಗಳು ಇಂತಹವು). ಗೌಡರ ಕೃತಿಗಳನ್ನು ಅರ್ಥ ಮಾಡಿಕೊಳ್ಳಲು ಇರುವ ಉಪಾಯ ಈ ಡಯಲೆಕ್ಟಿಕ್ ಅನ್ನು ಮೀರಿ ನೋಡುವುದೇ ಆಗಿದೆ.

*10* ನಿರಂತರವಾಗಿ ಕೆ. ವೆಂಕಟಪ್ಪನವರು "ನಾನು ಸದಾ ಕಾಲ ವಿದ್ಯಾರ್ಥಿ" ಎಂಬ ವಿನಯ ಪ್ರಕಟಪಡಿಸುತ್ತಿದ್ದರಾದರೂ ಅವರ ಬದುಕಿನ, ಚಿತ್ರಣ ಶೈಲಿಯಲ್ಲಿ ಗುರುವೊಬ್ಬನ ಅಂತರ, ಹೆಮ್ಮೆ, ಅಹಂ ಇತ್ಯಾದಿ ಸ್ಪಷ್ಟವಾಗಿದೆ. ನಾನು ವಿದ್ಯಾರ್ಥಿ ಎಂಬುದಕ್ಕೂ, ಆ ಹೇಳಿಕೆಯಲ್ಲಿ ಗುರುವಿನ ಅಹಮಿಕೆ ಇರುವುದಕ್ಕೂ ಒಂದು ವಿಶೇಷ ಸಂಬಂಧವಿದೆ. ಅವರ ಕೃತಿಗಳು ಇಂದಿನ ಅರ್ಥದ ಕಲಾಕೃತಿಗಳಾಗಿರದೆ, ಅವುಗಳಲ್ಲಿ ಉಪಾಧ್ಯಾಯ ಗುಣ, ಬೋಧನೆಯ ಗುಣ ಅಂತರ್ಗತವಾಗಿದೆ. ಪದ್ಯಕ್ಕೂ ಕವನಕ್ಕೂ ಇರುವ ವ್ಯತ್ಯಾಸದಂತೆ ಇದು. ಗೌಡರ ಕೃತಿಗಳಿಗೆ ಇಂತಹ ಅಂಟು ನಂಟುಗಳಿಲ್ಲ.

*11* ಕಲಾಕೃತಿಯೊಂದನ್ನು 'ಒಂದು' ಎಂದು ನೋಡುವುದು ಒಂದು ಕಾಲಬದ್ಧ ಸೃಷ್ಟಿ. ಭಿತ್ತಿಚಿತ್ರವೊಂದು ತಾನಿರುವ ಕಟ್ಟಡದಿಂದ ಭಿನ್ನವಾದ ಚಿತ್ರವಾಗುವುದಿಲ್ಲ. ಆದ್ದರಿಂದಲೇ ಭಿತ್ತಿಯೊಂದನ್ನು ಅದರ ಪರಿಸರದಿಂದ ಭಿನ್ನಗೊಳಿಸಿದಾಗ ಅದರೊಳಗಿನಿಂದ ಕಲಾಕೃತಿ ಮಾಯವಾಗುತ್ತದೆ. ಕೆ.ಜಿ.ಸುಬ್ರಹ್ಮಣ್ಯನ್ ಕುರಿತಾದ ಒಂದು ಘಟನೆಯಿದೆ. ಶಾಂತಿನಿಕೇತನದ ಕಲಾವಿದರೊಬ್ಬರು ತಾವು ಟೆರ್ರಕೋಟ ಭಿತ್ತಿಚಿತ್ರವೊಂದನ್ನು ಬೋಲ್‌ಪುರದ ಶೌಚಾಲಯದ ಗೋಡೆಗಳ ಮೇಲೆ ನಿರ್ಮಿಸಿರುವುದಾಗಿಯೂ ಕೆಜಿಎಸ್ ಅದನ್ನು ನೋಡಲೇಬೇಕೆಂದು ಪಟ್ಟು ಹಿಡಿದರಂತೆ. ಕೆಜಿಎಸ್ ಅದನ್ನು ಒಂದು ಸುತ್ತು ಹಾಕಿ ಮಾರ್ಮಿಕವಾಗಿ ನುಡಿದರಂತೆ, "ನಿಮ್ಮ ಭಿತ್ತಿಚಿತ್ರ ಅದಿರುವ ಪರಿಸರಕ್ಕೆ ಅತ್ಯಂತ ಸೂಕ್ತವಾಗುವಂತೆ ಮೂಡಿಬಂದಿದೆ" ಎಂದು! ಕಲಾಇತಿಹಾಸದ ಹುಟ್ಟಿನಿಂದಾಗಿ, ಮೂರ್ನಾಲ್ಕು ಶತಮಾನಗಳ ಹಿಂದೆ ಹುಟ್ಟಿದ್ದು 'ಒಂದು ಕೃತಿ ಒಂದೇ' ಎಂಬ ಕಲ್ಪನೆ. ಸಮಾಜದ ಅಂತರ್ಗತ ಅನಾರ್ಕಿಯಾಗಿದ್ದ ಆರ್.ಎಂ. ಹಡಪದರ ಕೃತಿಗಳಿಗೆ ಚೌಕಟ್ಟಿಲ್ಲ, ಎಸ್.ಎಮ್. ಪಂಡಿತರ ಕೃತಿಗಳಿಗೆ ಕೇಂದ್ರವಿಲ್ಲ, ಶಂಕರಗೌಡರ ಕೃತಿಗಳಿಗೆ ಏಕಪಾತ್ರವೆಂಬುದಿಲ್ಲ ಎಂಬುದನ್ನು ಆಯಾ ಕಲಾವಿದರ ಕೃತಿಗಳನ್ನು ಕುರಿತು ಚಿಂತಿಸಲಿರುವವರಿಗೆ ಅತ್ಯಂತ ಸುಲಭ ಪ್ರವೇಶದ್ವಾರಗಳು.

*12* ಗೊತ್ತಿರುವ ನಾಯಕ ನಟನೊಬ್ಬನ ಚಿತ್ರವನ್ನು ನೋಡುವಾಗ ಈ ಭ್ರಮೆ ಉಂಟಾಗುತ್ತದೆ. ಆತನನ್ನು ತಿಳಿಯದವರು ಆ ಸಿನೆಮಾವನ್ನು ನೋಡಿದರೆ ಹೇಗಿರುತ್ತದೆಂಬುದನ್ನು ನಾವು ಅರಿಯಲಾಗದು. ಆ ನಟನ ಇನ್ನೂರನೇ ಸಿನೆಮವನ್ನು ನೋಡುವಾಗ ಆ ಆತನ ನೂರತೊಂಬತ್ತೊಂಬತ್ತು ಸಿನೆಮಗಳು ರೂಪಿಸಿರುವ ಆತನ ಕುರಿತಾದ ಇಮೇಜ್ (ವ್ಯಕ್ತಿತ್ವ, ಆಕಾರ ಇತ್ಯಾದಿ) ನಮ್ಮ ಮನಸ್ಸಿನಲ್ಲಿರುವುದರಿಂದ ಅದೊಂದು ತೆರನಾದ 'ಗೆಸ್ಟಾಲ್ಟ್' ಆಗುತ್ತದೆ. ಗೌಡರ ಕೃತಿಗಳಲ್ಲಿನ ಗೆಸ್ಟಾಲ್ಟ್ ಅವರ ಚಿತ್ರಣ ಶಕ್ತಿಯನ್ನು ಸೂಚಿಸುತ್ತದೆ. ಮತ್ತು ಅವರ ಕೃತಿಗಳಿಗೆ ಒಂದು ಬಗೆಯ ಸರ್ರಿಯಲ್ ಶಕ್ತಿಯನ್ನು ಕೊಡುತ್ತದೆ. ಅಂದ ಹಾಗೆ ಬ್ಯುನುಯಲ್ಲನು ಸಲ್ವಡಾರ್ ಡಾಲಿಯೊಂದಿಗೆ ಒಂದು ಸರ್ರಿಯಲ್ ಸಿನೆಮವನ್ನು ನಿರ್ಮಿಸಿದ್ದಾನೆ.

*13* ಈರೋಡು ಪರ್ವತಗಳ ವರ್ಣನೆಯನ್ನು ದಿವಾನಖಾನೆಯ ಅಂದಚಂದದ ಮೂಲಕವೇ ಎ.ಎನ್. ಮೂರ್ತಿರಾಯರು ಮಾಡತೊಡಗಿದ ಹಂತವನ್ನು ಹೊರಾಂಗಣದ ಅನಂತತೆಯ ಭಿತ್ತಿಯಿಂದ ಒಳಾಂಗಣದ ಬೆಚ್ಚನೆಯ ಚೌಕಟ್ಟಿಗಾದ ಸಾಂಸ್ಕೃತಿಕ ಬದಲಾವಣೆಯೆಂದು ಗುರ್ತಿಸಬಹುದು ಚಿತ್ರಕಲೆಯಲ್ಲಿ.

*14* ಈ 'ಭಾವ' ಕನ್ನಡದಲ್ಲಿ ವಿವರಿಸುವುದು ಅಷ್ಟು ಸುಲಭವಲ್ಲ. ಜಾನ್ ಬರ್ಜರ್ ಹೇಳುವ ನಿಸರ್ಗದ 'ವಿಳಾಸ' ವಿಭಿನ್ನವಾಗಿದೆ. ಗೊತ್ತಿರುವ ಪಾರ್ಕಿನಲ್ಲಿ ಬೆಳಿಗ್ಗೆ ಜಾಗಿಂಗ್ ಹೋಗುವಾಗ ಎದುರಿಗೆ ಕಾಣುವ ಕೃತಕ ಪಾರ್ಕಿನ ಗಿಡ, ಬಳ್ಳಿಗಳೆಲ್ಲ ಕುಳ್ಳಗಿರುತ್ತವೆ. ನಮ್ಮ ನಿಮ್ಮ ಮನೆಯ 'ಹತ್ತಿರವೇ' ಇರುತ್ತವೆ. ಓಡುವಾಗ ಎದುರಿಗೆ ಕಾಣುವುದೆಲ್ಲ 'ಕುಣಿಯುತ್ತಿರುತ್ತವೆ'. ಆದರೆ ಅದನ್ನು ಕುಣಿಸುತ್ತಿರುವುದು ನಮ್ಮ ದೇಹದ ಅಂಗಾಂಗಳು. ಬರ್ಜರ್ ಹೇಳುವಂತೆ, ಒಂದು ಕ್ಷಣ ನಾವು ಓಡುತ್ತಲೇ ತಲೆಯನ್ನು ಮೇಲೆತ್ತಿ ಆಕಾಶವನ್ನು ದಿಟ್ಟಿಸಲು ಪ್ರಾರಂಭಿಸಿದೆವೆನ್ನಿ, ಆಗ, ಕಾಣದಿರುವ ಎಲ್ಲವೂ ಬದಲಾಗಿಬಿಡುತ್ತದೆ. ಎಲ್ಲಿಂದ ಎಲ್ಲಿಗೆ ಓಡುತ್ತಿದ್ದೇವೆಂದರೆ ಅದು ಅನಂತದಿಂದ ಅನಂತದವರೆಗೆ ಎಂದು ನಿಜಕ್ಕೂ ಒಂದು ಕ್ಷಣ ಭಾಸವಾಗುತ್ತದೆ. ನಮ್ಮ ಮನೆ, ಅದಕ್ಕೆ ಹತ್ತಿರವಿರುವ ಈ ಪಾರ್ಕು, ಗಿಡ ಬಳ್ಳಿಗಳೆಲ್ಲವೂ ಎದುರಿಗೇ ಇರುತ್ತವೆ ಆದರೆ ಅವುಗಳ ಬಗೆಗಿನ ನಮ್ಮ ಗ್ರಹಿಕೆಗೆ ವಿಶೇಷ ಆಯಾಮ ಬಂದುಬಿಡುತ್ತದೆ.

"ಖಾಲಿಬಿದ್ದ 'ಹೊಲ'ವೊಂದನ್ನು ಸುಮ್ಮನೆ ದಿಟ್ಟಿಸುತ್ತಿರಿ. ನಮ್ಮ ಗ್ರಹಿಕೆಯ ಅಸ್ತಿತ್ವವನ್ನೇ ಅದು ಅಲುಗಿಸಿಬಿಡುತ್ತದೆ. ಏಕೆಂದರೆ ಅದು ಆಕಾಶದಷ್ಟು ಭೂಮಿಯನ್ನು ಹಳೆಯದು. ಅದರ ಮೇಲೆ ಆದ ತಾತ್ಕಾಲಿಕ ಬದಲಾವಣೆಗಳು, ಬೇಲಿ, ಮನೆ, ಭೂಕಂಪ ಎಲ್ಲವೂ ಆಗಿ ಹೋಗಿವೆ. ಈಗಿರುವ ಬರಡು ಹೊಲವಷ್ಟೇ ಸತ್ಯ. ಅದರಾಚೆಗೆ, ಅದರ ಮೇಲೆ ಆಗಿಹೋಗಿರಬಹುದಾದುದೆಲ್ಲ ಆಭರಣ ತೊಟ್ಟು ಕಳಚಿಟ್ಟಂತೆ..." ಮುಂತಾಗಿ ಅದ್ಭುತವಾಗಿ ಬರೆಯುತ್ತಾರೆ ಜಾನ್ ಬರ್ಜರ್. ಗೌಡರ ಕೃತಿಗಳಲ್ಲಿ ಅಂತಹ ವೈಶಾಲ್ಯವನ್ನು ಸೆರೆಹಿಡಿವ ಬಯಕೆಯಿಂದಾಗಿ ಚಿತ್ರಣ ನೈಪುಣ್ಯತೆಯ ಆಭರಣವನ್ನು ಗೌಡರು ತಡೆಹಿಡಿದಿದ್ದಾರೆನಿಸುತ್ತದೆ. ಅದೇ ಒಂದು ಶೈಲಿಯಲ್ಲದ ಶೈಲಿಯಾಗಿದೆ. ಓದಿ: ಜಾನ್ ಬರ್ಜರನ ಲೇಖನ **'ದ ಫೀಲ್ಡ್'**, ಪುಸ್ತಕ **"ಅಬೌಟ್ ಲುಕಿಂಗ್"** ಲೇಖನಗಳ ಸಂಗ್ರಹ.

*15* ಈ ಹೋಲಿಕೆಯ ವಿವರಣೆಗಳಿಗಾಗಿ ಓದಿ ಲೇಖನ: 'ಕಣ್ಣೊಡಲ ತುಂಬ ಚಿತ್ರ', ಲೇ: ಎಚ್.ಎ. ಅನಿಲ್‌ಕುಮಾರ್, ಪುಸ್ತಕ: 'ಯಾರ ಜಪ್ತಿಗೂ ಸಿಗದ ನವಿಲುಗಳು', ಅಭಿನವ ಪ್ರಕಾಶನ, ಸಂ: ನ. ರವಿಕುಮಾರ್.

# ವಿಷಯಸೂಚಿ


ಅ

ಅಕಾಡೆಮಿ, ಲಲಿತಕಲಾ ೨೮
'ಅಂತರರಾಷ್ಟ್ರೀಯ ಶೈಲಿ' ೧೪
ಅಂಚಿನ-ಕೇಂದ್ರ ರಾಜಕಾರಣ ೧೧
ಅಂಚಿನ ಕಲಾವಿದ ೬
ಅವನ್‌ಗಾರ್ಡ್ ಚಳುವಳಿ ೭, ೮, ೯

ಆ

ಆಲ್ಪರ್ಸ್, ಸ್ವೆಟ್ಲಾನಾ ೧೯
ಆಧುನಿಕ ಮತ್ತು ಸಮಕಾಲೀನ ಕಲೆ, ಕರ್ನಾಟಕದ ೧೭
ಆಂತರಿಕ ಡಯಸ್ಪೊರ ೧೫

ಇ

"ಇನ್ನರ್ ಐ" ಸಿನೆಮ ೬
ಇಕೊ, ಉಂಬರ್ಟೊ ೬

ಎ

ಎವೊಕೆಟಿವ್ ಅನಲಿಸಿಸ್ ೩೨
'ಎರೇಶರ್' ೧೫
ಎಂಪಥಿ ೧೨

ಒ

ಒಕ್ಕಲುತನ ೨೬
'ಒಡಲಾಳ' ೩೧

ಕ

ಕರ್ನಾಟಕದ ಕಲಾವಿದರು ೯
ಕರ್ನಾಟಕ ನಿಸರ್ಗಕೃತಿಗಳು ೧೧, ೧೮, ೨೩, ೨೬, ೨೭, ೨೮, ೩೩, ೩೭, ೩೮
ಕಲಾಇತಿಹಾಸ ೫
ಕಲಾವಿಮರ್ಶೆ, ಕಲಾಚರಿತ್ರೆ ೧೮, ೩೨, ೩೪, ೩೭
ಕಲಾಶಿಕ್ಷಣ ೨೨
ಕಲಾಭವನ (ಶಾಂತಿನಿಕೇತನ) ೫, ೬, ೭, ೮, ೧೧, ೧೨, ೨೦, ೨೧, ೨೨ ೨೪, ೨೬, ೩೦, ೩೨, ೩೪, ೩೬
ಕಾನ್ಸ್‌ಟೆಬಲ್, ಜಾನ್ ೧೯
ಕಾಶಿ, ರವಿಕುಮಾರ್ ೩೫
ಕಾರಂತ, ಡಾ. ಕೆ. ಶಿವರಾಮ ೧೨
ಕುಮಾರ್, ಆರ್. ಶಿವ ೨೧, ೩೬
ಕ್ಯಾಂಟ್, ಇಮ್ಯಾನುಯಲ್ ೧೬
ಕ್ರಮರ್, ಹಿಲ್ಟನ್ ೩೪
ಕೈಗಾರೀಕರಣ ೧೫
ಕ್ಲೂಗ, ಅಲೆಗ್ಸಾಂಡರ್ ೨೧

ಗ

ಗವಾಷ್ ತಂತ್ರ ೨೮, ೩೦
ಗಾಂಧಿ ೩೨, ೩೩
ಗ್ರಾಮೀಣತೆ ೨೩
ಗ್ಯಾಲರಿ ೧೨, ೨೧
ಗ್ರೀನ್‌ಬರ್ಗ್, ಕ್ಲೆಮೆಂಟ್ ೧೪, ೧೬, ೨೨
ಗೆಸ್ಟಾಲ್ಟ್ ೩೭
ಗ್ಯಾಲರಿ, ರೈಟ್‌ಲೈನ್ಸ್ ೨೫

ಚ

ಚೋಳಮಂಡಲ ಕಲಾಗ್ರಾಮ ೨೬
ಚಿತ್ರಕಲೆಯ ವಸ್ತುವಿಷಯ ೨೪, ೨೭

ಜ

ಜರ್ಮನ್ ಎಕ್ಸ್‌ಪ್ರೆಶನಿಸಂ ೧೧
ಜೆ.ಜೆ. ಕಲಾಶಾಲೆ, ಸರ್ ೧೧

ಝ

ಝೆನ್ ಕ್ಯಾಲಿಗ್ರಾಫಿ ೧೧, ೩೪

ಟ

ಟರ್ನರ್ ೧೯
ಟಾಗೂರ್, ಅಬನೀಂದ್ರನಾಥ್ ೨೮
ಟೆರಕೋಟ ಭಿತ್ತಿಚಿತ್ರ ೩೬

ಡ

ಡಚ್ ಸ್ಟಿಲ್‌ಲೈಫ್ ೧೯
ಡಯಲೆಕ್ಟಿಕಲ್ ೧೫
ಡಯಸ್ಪೊರ (ವಲಸಿಗ ಸಂಸ್ಕೃತಿ) ೧೫

ಡಯಲೆಕ್ಟ್ ೩೬
ಡಿಸ್ಲಿಲೆಕ್ಟ್ ೩೬
ಡಿಸ್ನಿಲ್ಯಾಂಡ್, ಡಿಸ್ನಿವರ್ಲ್ಡ್ ೬
ಡೆರಿಡ, ಜಾಕ್ವೆಸ್ ೧೫

ತ

ತಿಪ್ಪೆಸ್ವಾಮಿ, ಪಿ.ಆರ್ ೧೬
ತೈಲವರ್ಣ ೮

ದ

ದಾಂತೊ, ಆರ್ಥರ್ ೨೨
ದೃಶ್ಯಗ್ರಹಿಕೆಯ ಕ್ರಮಗಳು ೧೬
ದೃಶ್ಯಭಾಷೆ ೭

ನ

ನಾಸ್ಟಾಲ್ಜಿಯ (ಹಿನ್ನೆನಪು) ೧೫, ೧೬, ೨೯
ನವ್ಯಕಲೆ, ನವ್ಯ ಇತಿಹಾಸ ಮತ್ತು ೧೨
ನಾಗರಾಜ್, ಡಾ. ಡಿ. ಆರ್. ೩೬
ನಾಯರ್, ಜಾನಕ್ ೩೫
ನಿರ್ಮಿತಿ ೬

ಪ

ಪರಿಷತ್ತು, ಚಿತ್ರಕಲಾ ೨೩, ೨೪
ಪೊಟಾಟೊ ಈಟರ್ಸ್ ೩೧
ಪೈನ್, ಗಣೇಶ್ ೩೪
'ಪ್ರಜ್ಞಾಪೂರ್ವಕ ಹಿನ್ನೆನಪು' ೩೦

ಬ

ಬರ್ಜರ್, ಜಾನ್ ೩೭, ೩೮
ಬಯೊಗ್ರಾಫಿ ೮
ಬಾಹೌಸ್ ೧೨, ೧೪
ಬಾಯ್ಸ್, ಜೊಸೆಫ್ ೧೨
ಬಾಥ್, ರೊಲಾಂಡ್ ೩೬
ಬಾಹೌಸ್ ೨೫, ೨೬
ಬ್ರಿಟಿಷ್ ನಿಸರ್ಗ ೧೯
ಬ್ಯುನುಯಲ್, ಲೂಯಿ ೨೧

ಬೆಟ್ಟದೂರು ೭, ೯
ಬೆಂಗಾಲ್ ಶಾಲೆ ೭
ಬೆಂಗಾಲದ ಪುನರುಜ್ಜೀವನ ಕಲೆ ೧೮
ಬೇಂದ್ರೆ, ದ.ರಾ. ೨೬
ಬ್ರೈಸನ್, ಬಿಲ್ ೩೫
ಬೈಜ್, ರಾಮ್‌ಕಿಂಕರ್ ೭, ೨೪, ೨೫
ಬೋಸ್, ನಂದಲಾಲ್ ೨೫
ಬೋನ್‌ಲೆಸ್ ಶೈಲಿ ೨೧
ಬೌದ್ರಿಲಾರ್ಡ್, ಜೀನ್ ೧೪

ಭ

ಭಾರತೀಯ ಕಲಾಇತಿಹಾಸ ೩೫

ಮ

ಮಿನಿಯೇಚರ್ ೧೩, ೧೯, ೨೮
"ಮೀಡಿಯವಲ್ ಸೈಂಟ್ಸ್" ೭
ಮುಖರ್ಜಿ, ಬಿನೋದ್ ಬಿಹಾರಿ ೫, ೬, ೭, ೨೧, ೨೨
ಮೂರ್ತಿರಾವ್, ಎ.ಎನ್. ೩೭
ಮೊನೊಗ್ರಾಫಿ ೨೮

ರ

ರವಿವರ್ಮ, ರಾಜಾ ೮, ೯, ೨೩, ೩೪
ರಾಷ್ಟ್ರೀಯ ದೃಶ್ಯಸಂಸ್ಕೃತಿ ೭
ರಾವ್, ಎಸ್. ಕೆ. ರಾಮಚಂದ್ರ ೩೫
ರಾಷ್ಟ್ರೀಯತಾವಾದ ೩೦
ರೆನ್ವಾ, ಆಗಸ್ತಾ ೭
ರೆಟ್ರೊಸ್ಪೆಕ್ಟ್ ೧೨, ೨೩
ರೆನಾಯಸಾನ್ಸಾ ೧೩
ರೇ, ಸತ್ಯಜಿತ್ ೬
ರೇಖಾಚಿತ್ರಗಳು ೭
ರೂಪರಾಜಕಾರಣ (ಫಾರ್ಮಲಿಸಂ) ೧೬, ೨೫, ೨೯, ೩೩
ರೊಮ್ಯಾಂಟಿಸಿಸಂ ೮, ೧೦, ೧೫, ೩೧, ೩೨

ವ

ವರ್ಮಿಯರ್, ಜಾನ್ ೧೭
ವಸಾಹತು ಮನೋಭಾವ ೧೨

ವಾಷ್ ತಂತ್ರ ೮, ೧೦, ೧೩, ೨೮, ೩೦
ವ್ಯಾನ್ ಗೋ, ವಿನ್ಸೆಂಟ್ ೧೭, ೩೪
'ವಿಮರ್ಶೆಯ ವಿನಯ' ೩೪
ವಿವೇಕಾನಂದ, ಸ್ವಾಮಿ ೧೮
ವೀಕ್ಷಕ ೫
ವೆಂಕಟಪ್ಪ, ಕೆ ೧೧, ೧೮, ೧೯, ೩೫, ೩೬
ವೆಂಕಟಾಚಲಂ, ಜಿ ೧೬
ವೈದ್ಯವೃತ್ತಿ ೨೦

ಶ

ಶಾಸ್ತ್ರಿ, ಬಿ.ವಿ.ಕೆ. ೧೬
ಶ್ರವಣಬೆಳಗೊಳ ೧೦-೧೧
ಶ್ರೀನಿವಾಸ್, ಪಿ.ಬಿ. ೨೬
ಶಿವಪ್ರಸಾದ್, ಕೆ.ಟಿ. ೧೦, ೩೪
ಶೇಖ್, ಗುಲಾಂ ಮೊಹಮ್ಮದ್ ೧೩
ಶೈಲೀಕರಣ ೩೩

ಸ

ಸರ್ರಿಯಲಿಸಂ, ಡಾಲಿಯ ೩೭
ಸಾಂಸ್ಕೃತಿಕ ರಾಜಕಾರಣ ೧೬
'ಸಾಮಾಜಿಕ ಶಿಲ್ಪ' ೧೨
ಸ್ಥಳೀಯತೆ ೧೧
ಸಿನೆಮ ೩೭
ಸಿಗ್ನಿಫಯರ್ ೧೫, ೧೬
ಸಿಗ್ನಿಫಯ್ಡ್ ೧೫
'ಸುರುಳಿ ಚಿತ್ರ' ೫ ೨೦, ೨೪
ಸೇನ್ ಅಭನಿ ೨೫
ಸೌಂದರ್ಯಶಾಸ್ತ್ರೇತ್ತರ (ಪೋಸ್ಟ್-ಏಸ್ತೆಟಿಕ್ಸ್) ೧೨, ೧೪,೩೦

ಹ

ಹಡಪದ್, ಆರ್.ಎಂ ೩೭
ಹನುಮಯ್ಯ, ಎನ್ ೧೬
ಹೀರಾಯಿಕ್ ನರೆಟಿವ್ ೭
ಹುಸೇನ್, ಎಂ. ಎಫ್ ೮, ೯, ೩೪
ಹೆಬ್ಬಾರ್, ಕೆ.ಕೆ. ೨೩, ೨೫
ಹೈಪರ್ ರಿಯಾಲಿಟಿ ೬

ಬಸವಣ್ಣ
ವಾಶ್



ಬೆಟ್ಟದೂರಿನ ಬೆಟ್ಟ

ಜಲವರ್ಣ





ಹಳ್ಳಿಯ ಬಸ್ ನಿಲ್ದಾಣ

ಲಿಯೋ ಕಟ್

ದಾರಿ ದೂರ

ಜಲವರ್ಣ





ನದಿಯನ್ನು ದಾಟುತ್ತಿರುವ ಬಂಡಿಗಳು

ಜಲವರ್ಣ

ಜಲವರ್ಣ





ರಾಧಕೃಷ್ಣ ತೈಲವರ್ಣ

ಧಾನ್ಯ ಹಸನು ಮಾಡುತ್ತಿರುವ ಮಹಿಳೆ ಜಲವರ್ಣ



ಕಾಯಕ ಜಲವರ್ಣ





ಪಂಡಿತ್ ಜವಹರಲಾಲ್ ನೆಹರು ತೈಲವರ್ಣ

ಉತ್ತರಾಯಣ ಜಲವರ್ಣ



ಬಾತು ಕೋಳಿಗಳು ಜಲವರ್ಣ







ಅಶೋಕನ ಆಸ್ಥಾನ
ಜಲವರ್ಣ





ಹುಣಸೇಮರ
ಜಲವರ್ಣ



ಸಾಲ್ ಮರ ಜಪಾನ್ ಪದ್ಧತಿ



ಉಪಗುಪ್ತ – ಅಭಿಸಾರಿಕೆ ಜಲವರ್ಣ



ಮೇಯುತ್ತಿರುವ ಮೇಕೆಗಳು ಜಲವರ್ಣ





ಅಜಂತಾ ಚಿತ್ರಕಲೆ

ಟೆಂಪರಾ ಪದ್ಧತಿ



ಏಕದಾರಿ ಜೋಗಿ
ಜಲವರ್ಣ



ಗಡಿಗೆ ಮಾಡುತ್ತಿರುವ ಕುಂಬಾರ
ಜಲವರ್ಣ

ಗಾಂಧೀಜೀ ಜೀವನ ಚರಿತ್ರೆ

ಫ್ರೆಸ್ಕೋ ಬಿರ್ಲಾ ಭವನ, ನವದೆಹಲಿ





ಮಾದರ ಚೆನ್ನಯ್ಯ
ಜಲವರ್ಣ

ಗಂಟೆ ಕಾಯಕದವರು
ಜಲವರ್ಣ





ವಿಪರ್ಯಾಸ
ಜಲವರ್ಣ



ಸಂತಾಲ ದಂಪತಿಗಳು
ಜಲವರ್ಣ



ಲಂಗರು ಹಾಕಿರುವ ದೋಣಿಗಳು ಜಲವರ್ಣ



# SHANKARAGOWDA BETTADOOR

**(I)**

Let us have a thorough look at a work done, fifty years ago, in 1950s, by an artist, **Shankaragowda Bettadoor**, very much alive, now, in his late 70s. It is a scroll painting measuring about 8 feet by 2 feet. By the time this book gets published, or six months even before its script was finalized, the work was lost in an exhibition under mysterious circumstance(2006). No protest, no judicial case, no complaints. Everything seems to be calm about it as well as its creator.

There is a painting painted *within* this painting. It need not be stressed that it was the same hand that painted both the paintings. Within the given painting, a few curious spectators—themselves experts in the art of painting, the art students and the classmates of the current artist who was still a student when he painted this—are watching what has been laid down on the ground. The painting *within* is an imaginary painted scroll, in turn. Some of the painted-spectators are showing their back to the true audience. Most of them are anonymous, or, to be more precise, never made a big name in the field of art. The spectators within the painting are meaningfully showing their back the audience who are real! In fact there are three pictures presented through this scroll, logically speaking:

(a) The overall physically real picture scroll.

(b) The painted picture scroll within; and

(c) A picture about the ambiguous availability of the audience as-a-picture and as a picture containing a picture within its own self!



The main person showing his back to us, (because he *is*) at the center of the picture is the artist himself. Shankaragowda Bettadoor, the artist, studied art in

Santiniketan fifty years ago (in the mid 1950s). Is it meaningfully symbolic and futuristic that he refuses to 'face' the audience, as he did it in reality, for so long, after his art education. Despite painting for five decades he remained mostly anonymous, till today. This work can be compared with another work by another artist (unlike him as far as popularity goes) who happened to be Bettadoor's tutor. The painting in question is by Binod Bihari Mukherjee. The comparison between both the artists connected to Santiniketan, but belonging to two successive generations share a lot in common. *Binod Bihari happens to be an 'insider', well institutionalized and theorised to that art movement while the other remained an 'outsider' and anonymous.*

The difference between the two is clear. The 'personality' of Binod Bihari is well construed through the communicative media, beginning from the articles written about him in the annual *Nandan* magazines published from the department of Art History, Kala Bhavana, Santiniketan. Speaking in more contemporary terms of visual contemplation, the media itself has provided a personality to him as does the film by the Oscar (honorary) awardee Satyajit Ray's *"The Inner Eye"*. The genuine question here is whether there is no personality to the artist outside it!***1*** Due to such interventional derivations did theoreticians like Baudrillard state that the gulf war never took place, for, it was a live-telecast like a sport. Umberto Eco categorized Disneyland and Disneyworld as more real than real (hyperreality)***2***. Speaking from this angle, Sankaragowda is an artist who is yet to gain a personality of his own, as an artist, at the age of 77 as a 'national' artist (which means a 'recognized' artist)!

**(II)**

In one of his self portrait, Binod Bihari is facing the landscape that he is *painting* with the paper on his lap, *is about to occasional watch* the actual landscape outside the door which he is referring to while he is available to the onlookers' gaze only from behind. It could be that modesty of Kala Bhavana school that made them—both Binod da and Shankaragowda—to derive meanings like *"art/artwork as a scene worth watching rather than turning the focus light*

*towards the artist him/herself"*. By the way, interestingly, there have been very few women artist or tutors in the (rather deliberately construed) history of this school.

However, certain modesty can be identified—so much absence today—that has made those artists to compose their works in a manner which reveals what their hand created as well as hid. All their portraits are present in the *style* of their painting. It is possible that the Karnataka artist in question, when he painted the above said scroll, was deeply rooted in the beliefs like *"art for arts sake, art should speak by itself, art is of more relevance than the artist"* and such similar thoughts. ***3*** However one need to keep in mind that this is not the only way to perceive his work.

This, perhaps, is one of the fundamental notions of Santiniketan School of art. At least from an outsider's view-point—*marginal* position being one of them—this becomes obvious. Art, rather than artist, is the one that is of much consideration, since the best of the Bengal school works emerged when art was not equated with the politics of the gallery-promotional-economic-nexus. The current works (of both Binod da and Shankaragowda) are able to evoke that essence of a school in a single format. Binod da's ***"Medieval Saints"***, a mural at Hindi Bhavana in Kala Bhavana, is a classic example for the essence of visual language as derived by this school, arguably. Most of Nandalal Bose's drawings commix a *day-to-day experience* with this visual language. On the other hand Ramkinker Baij is to Bengal school of thought as Renoir was to Impressionism—each stood as the 'empiricist' of his respective artistic group. It has been an art historical habit for the protagonists of an art movement to represent one specific character of that school. The sum of the fragments and the overall essence in such case is not the same. The sum of the margins and the core do not equate in case of Bengal school, for there is no 'margin' for this school—till now.



Shankaragowda's story as an artist presets those un-deciphered visual innovations that the mainstream within

Bengal school has refuted. Ironically, it was due to the popularization of Bengal-trained artists from the margin in various Indian regions outside Bengal that a regional school (1910s-1930s) evolved into a national art movement (by 1950s). But the historiography built around this school, till now do not acknowledge such marginal contributions. *Or, ironically, the marginal contribution to this school has been marginalized, in turn!* There is a pronounced resilience about such issues. This seems like a deliberate heroic narrative. In other words, Shankaragowda's story forms a character in an ignored chapter, that is yet to be written into the mainstream politics of a nationalist visual culture.

**(III)**

Binod da was a tutor 'within' the premise of Bengal school and hence 'represents' the framework of what Bengal school constitutes. Shankaragowda, on the other hand, was there only for five years and then spent a couple of years in Delhi. The rest of his life he spent it in Bettadoor in Raichur district of Karnataka, which he continues to do even to this day. At his home town, he was involved in farming, making art and medicinal practice (a bit later) simultaneously from a long time. He is known as a doctor who also paints in his native town. Outside his hometown, but within Karnataka he is reputed as an artist who also is a medicine man. Hence his art falls into the premise of an artist who looked at the world through a family structure, as a family head who tries to rely upon the classic Hindu concept of 'the world as a family'. Interestingly, the immediate surrounding around his family structure happens to be his world—as realized through his art! Be it a landscape or a portrait of a Swamiji of a religious center, this autobiographical notation is severe.

The very choice of operating as an artist by Shankaragowda is against a given, nationalist system of making art. This is the base-line of the institution of avant garde.*4* By the time he was studying art, the notion of avant-garde had come to a logical end in its actual European-white-male-context. *You can't protest for too long against anything that is settled, without the danger of your protest*

*itself settling down as a style*. Otherwise, the very idea of protest becomes settled. This is the ethical problem of stretching avant-garde and neo-avant-garde to its extreme. Art had tried to escape the last straw of aristocracy, hippocracy, economic conversion and at the same, the notion of style and aesthetics that had been the structural foundation of all those changed the new art through the ages! Within Indian context, the phenomena of M.F.Hussain has come out of that romance with poverty in actuality, while his newly acclaimed stardom had made his image to romance with that nostalgia of poverty. On the contrary, Bettadoor has remained anonymous and hence is devoid of all that someone like Husain has fetched himself from one of the branch of the society—called art.

